بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 04

ಸಂಚಿಕೆ: 41

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

12 ಅಕ್ಟೋಬರ್ 2023, 12 ಅಖಾ 1402 ಹಿಜರಿ ಶಮ್‌ಸಿ,
26 ರಬೀಉಲ್ ಅವ್ವಲ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَبِالْحَقِّ اَنْزَلْنٰهُ وَبِالْحَقِّ نَزَلَ ۭ
وَمَآ اَرْسَلْنٰكَ اِلَّا مُبَشِّرًا وَّنَذِيْرًا

(ಸೂರಃ ಬನೀಇಸ್ರಾಈಲ್: 106)

**ಅಂದರೆ: ಸತ್ಯದೊಂದಿಗೆ ನಾವು ಅದನ್ನು ಅವತೀರ್ಣಗೊಳಿಸಿದ್ದೇವೆ. ಸತ್ಯದೊಂದಿಗೆ ಅದು ಇಳಿದಿದೆ. ಶುಭವಾರ್ತೆಯನ್ನು ತಿಳಿಸುವವನಾಗಿ ಮತ್ತು ಮುನ್ನೆಚ್ಚರಿಕೆಯನ್ನು ನೀಡುವವನಾಗಿ ನಾವು ನಿನ್ನನ್ನು ನಿಯೋಜಿಸಿದ್ದೇವೆ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ನಿಮ್ಮ ಪೈಕಿ ಆಡಳಿತ ಹೊಂದಿರುವ ಪ್ರತಿಯೊಬ್ಬ ಆಡಳಿತಗಾರನು ತನ್ನ ಪ್ರಜೆಯ ಬಗ್ಗೆ ಪ್ರಶ್ನಿಸಲಾಗುವನು.

**(2409)** ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ನುಡಿಯುತ್ತಾರೆ: ನಿಮ್ಮ ಪೈಕಿ ಆಡಳಿತ ಹೊಂದಿರುವ ಪ್ರತಿಯೊಬ್ಬ ಆಡಳಿತಗಾರನಲ್ಲಿ ತನ್ನ ಪ್ರಜೆಗಳ ಬಗ್ಗೆ ಪ್ರಶ್ನಿಸಲಾಗುವುದು. ರಾಜನಾದವನು ಆಡಳಿತ ಹೊಂದಿರುತ್ತಾನೆ. ಆದುದರಿಂದ ಅವನು ಪ್ರಜೆಗಳ ಬಗ್ಗೆ ಪ್ರಶ್ನಿಸಲ್ಪಡುವನು. ಅಂತೆಯೇ ಪ್ರತಿಯೊಬ್ಬ ಮನುಷ್ಯನು ತನ್ನ ಮನೆಯ ಯಜಮಾನ ಆಡಳಿತಗಾರನಾಗಿರುತ್ತಾನೆ. ಆದುದರಿಂದ ಅವನಿಂದಲೂ ಅವನ ಪ್ರಜೆ (ಕುಟುಂಬ)ದ ಬಗ್ಗೆ ಪ್ರಶ್ನಿಸಲ್ಪಡುವನು. ಮಹಿಳೆಯೂ ಸಹ ತನ್ನ ಪತಿಯ ಮನೆಯಲ್ಲಿ ಆಡಳಿತ ಹೊಂದಿರುತ್ತಾಳೆ. ಆದುದರಿಂದ ಅವಳಿಂದಲೂ ಅವಳ ಪ್ರಜೆ (ಕುಟುಬ)ದ ಬಗ್ಗೆ ಪ್ರಶ್ನಿಸಲ್ಪಡುವಳು. ಮನೆಯ ಸೇವಕನು (ನೌಕರನು) ಸಹ ಸಂಪತ್ತಿನ ರಕ್ಷಣೆಗೊಸ್ಕರ ಜವಾಬ್ಧಾರನಾಗಿರುತ್ತಾನೆ. ಅವನೂ ಸಹ ಈ ಪೈಕಿ ಪ್ರಶ್ನಿಸಲ್ಪಡುವನು. (ಹಝ್ರತ್ ಇಬ್ನು ಉಮರ್(ರ) ಹೇಳಿದರು. ನಾನು ರಸೂಲುಲ್ಲಾಹ್(ಸ) ಅವರಿಂದ ಇವೆಲ್ಲ ಜನರ ಪೈಕಿ ಆಲಿಸಿರುತ್ತೇನೆ. ಮತ್ತು ನನ್ನ ಭಾವನೆಯಾಗಿದೆ. ನಬಿ(ಸ) ಹೀಗೂ ನುಡಿದಿದ್ದರು. ಮನುಷ್ಯನು ತನ್ನ ತಂದೆಯ ಸಂಪತ್ತಿಗೂ ಜವಾಬ್ಧಾರನಾಗಿದ್ದಾನೆ. ಅವನೂ ಸಹ ಎಂದರೆ ಆ ಸಂಪತ್ತಿನ ಪೈಕಿ ಪ್ರಶ್ನಿಸಲ್ಪಡುವನು. ಆದುದರಿಂದ ನಿಮ್ಮ ಪೈಕಿ ಪ್ರತಿಯೊಬ್ಬನು ಜವಾಬ್ಧಾರನಾಗಿದ್ದಾನೆ. ಅವನು ತಮ್ಮ ಪ್ರಜೆ (ಸಂಪತ್ತಿನ ರಕ್ಷಣ) ಗಳ ಕುರಿತು ಪ್ರಶ್ನಿಸಲ್ಪಡುವನು. **(ಸಹೀಹ್ ಬುಖಾರಿ, ಸಂಪುಟ-4, ಕಿತಾಬುಲ್ ಇಸ್ತಿಗ್‌ರಾಝ್, 2008 ಖಾದಿಯಾನ್)**

ಉನ್ನತ ನೈತಿಕತೆಯನ್ನು ಪಡೆದುಕೊಳ್ಳಿ ಏಕೆಂದರೆ ಸದ್ಗುಣಗಳ ಕೀಲಿಕೈ ನೈತಿಕತೆಯಾಗಿದೆ ಎಲ್ಲಾ ಗೌರವಗಳಿಗಿಂತಲೂ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಗೌರವ ಹೆಚ್ಚಾದಿದೆ, ಇದು ಇಡೀ ಇಸ್ಲಾಮಿಕ್ ಲೋಕದ ಮೇಲೆ ಪ್ರಭಾವ ಬೀರುತ್ತದೆ

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಹಝ್ರತ್ ಪೈಗಂಬರ್(ಸ) ಅವರ ಉನ್ನತ ಮಹಿಮೆ

ಎಲ್ಲಾ ಗೌರವಗಳಿಗಿಂತ ಹೆಚ್ಚಾಗಿ ರಸೂಲುಲ್ಲಾಹ್ ಸಲ್ಲಲ್ಲಹು ಅಲೈಹಿವ ಸಲ್ಲಮ್ ಅವರ ಗೌರವವಾಗಿದೆ. ಇದು ಇಸ್ಲಾಮಿಕ್ ಲೋಕದ ಮೇಲೆ ಪ್ರಭಾವ ಬೀರುತ್ತದೆ. ನಿಮ್ಮ(ಸ) ರವರ ಮರ್ಯಾದೆ ಪ್ರಜ್ಞೆಯು ಜಗತ್ತನ್ನು ಪುನರುಜ್ಜೀವನಗೊಳಿಸಿತು. ಅರಬ್ಬರಲ್ಲಿ ವ್ಯಭಿಚಾರ, ಮದ್ಯಪಾನ ಮತ್ತು ಯುದ್ಧ ಹೊರತುಪಡಿಸಿ ಬೇರೇನೂ ಉಳಿದಿರಲಿಲ್ಲ ಮತ್ತು ಸೃಷ್ಟಿಗೆ ಸಲ್ಲಬೇಕಾದ ಹಕ್ಕುಳನ್ನು ಸಹ ಕೊಲ್ಲಲ್ಪಡಲಾಗುತ್ತಿತ್ತು. ಮಾನವ ಕುಲದ ಸಹಾನುಭೂತಿ ಮತ್ತು ಉಪಕಾರದ ಭಾವನೆಗಳ ಕುರುಹು ಸಹ ಅಳಿಸಿಹಾಕಲಾಗಿತ್ತು. ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ನಶಿಸಲ್ಪಟ್ಟಿದ್ದಲ್ಲದೆ ಸೃಷ್ಟಿಕರ್ತನಿಗೆ ಸಲ್ಲಬೇಕಾದ ಹಕ್ಕುಗಳ ಮೇಲೆಯೂ ಇನ್ನಷ್ಟು ಕತ್ತಲೆಯು ಆವರಿಸಿತ್ತು. ಸರ್ವಶಕ್ತನಾದ ಅಲ್ಲಾಹನ ಗುಣಲಕ್ಷಣಗಳನ್ನು ಕಲ್ಲುಗಳಿಗೆ, ಸಸ್ಯಗಳಿಗೆ ಮತ್ತು ನಕ್ಷತ್ರಗಳಿಗೆ ನೀಡಲಾಗಿತ್ತು. ವಿವಿಧ ರೀತಿಯ ಶಿರ್ಕ್ ವ್ಯಾಪಕವಾಗಿ ಹರಡಿಕೊಂಡಿತ್ತು. ವಿನಮ್ರ ವ್ಯಕ್ತಿ ಮತ್ತು ಮನುಷ್ಯನ ಗುಪ್ತಾಂಗಗಳನ್ನು ಜಗತ್ತಿನಲ್ಲಿ ಪೂಜಿಸಲ್ಪಡುತ್ತಿತ್ತು. ಅಂತಹ ಅಸಹ್ಯಕ ಸ್ಥಿತಿಯ ನಕ್ಷೆಯು ಸ್ವಲ್ಪ ಸಮಯದವರೆಗೆ ವಿವೇಕಶಾಲಿ ವ್ಯಕ್ತಿಯ ಮುಂದೆ ಬಂದರೆ, ಅವನು ಒಂದು ಅಪಾಯಕಾರಿ ಕತ್ತಲೆ ಮತ್ತು ಕ್ರೌರ್ಯದ ಭಯಾನಕ ದೃಶ್ಯವನ್ನು ಕಾಣುತ್ತಾನೆ. ಲಖ್ವಾವು ಒಂದು ಕಡೆ ಬೀಳುತ್ತದೆ, ಆದರೆ ಈ ಲಖ್ವಾ ಎರಡು ಬದಿಗಳಲ್ಲಿ ಬೀಳುವಷ್ಟಿತ್ತು. ಪರಿಪೂರ್ಣ ಗಲಭೆಯು (ಕಿಡಿಗೇಡಿತನ) ಜಗತ್ತಿನಲ್ಲಿ ಭುಗಿಲೆದ್ದಿತು. ಸಮುದ್ರಗಳಲ್ಲಿ (ಒದ್ದೆಯಾದ ಭಾಗ) ಶಾಂತಿ ಮತ್ತು ಭದ್ರತೆ ಇರಲಿಲ್ಲ ಮತ್ತು ಭೂಮಿಯಲ್ಲಿಯು (ಒಣಭಾಗ) ಸಹ ಶಾಂತಿ ಮತ್ತು ಸೌಕರ್ಯವಿರಲಿಲ್ಲ. ಇತಹ ಅಂಧಕಾರ ಮತ್ತು ನಶಿಸಿಹೋದ ಕಾಲದಲ್ಲಿ ನಾವು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ನೋಡುತ್ತೇವೆ. ಅವರು(ಸ) ಆಗಮಿಸಿ ಈ ಸಮತೂಲನದ ಎರಡೂ ಬದಿಗಳನ್ನು ಸರಿಪಡಿಸಿ ಅದನ್ನು ಅಂದರೆ ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಮತ್ತು ದಾಸರಿಗೆ ಸಲ್ಲಬೇಕಾದ ಹಕ್ಕುಗಳನ್ನು ಅದರ ನೈಜ ಕೇಂದ್ರಸ್ಥಾನದಲ್ಲಿ ಸ್ಥಾಪಿಸಿದರು. ರಸೂಲುಲ್ಲಾಹ್(ಸ) ಅವರ ನೈತಿಕ ಶಕ್ತಿಯ ಪರಿಪೂರ್ಣತೆಯು ಆ ಕಾಲದ ಸ್ಥಿತಿಯನ್ನು ನೋಡಿದಾಗ ನಮಗೆ ನೆನಪಿಗೆ ಬರಬಹುದು. ಅಂದರೆ ವಿರೋಧಿಗಳು ಅವರಿಗೆ(ಸ) ಮತ್ತು ಅವರ ಅನುಯಾಯಿಗಳಿಗೆ ಉಂಟುಮಾಡಿದ ಸಂಕಷ್ಟಗಳು ಮತ್ತು ಅದಕ್ಕೆ ವಿರುದ್ಧವಾಗಿ ರಸೂಲುಲ್ಲಾಹ್(ಸ) ಅವರು ಸಂಪೂರ್ಣ ಅಧಿಕಾರ ಹೊಂದಿದ್ದಾಗ ಅಂತಹ ಪರಿಸ್ಥಿತಿಯಲ್ಲಿ ಅವರು ಅವರೊಂದಿಗೆ ನಡೆಸಿಕೊಂಡಿದ್ದ ರೀತಿ ಅದು ಅವರ(ಸ) ದೈವಿಕ ಹಿರಿಮೆಯನ್ನು ತೋರಿಸುತ್ತದೆ.

ಅಬು ಜಹಲ್ ಮತ್ತು ಅವನ ಇತರ ಸಹಚರರು ರಸೂಲುಲ್ಲಾಹ್(ಸ) ಅವರ ಜೀವ ನೀಡುವಂತಹ ಸೇವಕರಿಗೆ ನೀಡದ ಹಿಂಸೆಗಳು ಹೇಗಿದ್ದವು? ಬಡ ಮುಸ್ಲಿಂ ಹೆಂಗಸರ ಕಾಲುಗಳನ್ನು ಒಂಟೆಗೆ ಕಟ್ಟಿ ವಿರುದ್ಧ ದಿಕ್ಕಿಗೆ ಓಡಿಸಿದರು ಇದರಿಂದಾಗಿ ಅವರು ಸೀಳುಹೋಗುತಿತ್ತು. ಅವರಿಗೆ ಈ ಶಿಕ್ಷೆ **ಲಾ ಇಲಾಹ ಅಲ್ಲಲ್ಲಾಹ್** ಎಂದು ಒಪ್ಪಿಕೊಂಡ್ಡಿದ್ದಕ್ಕೆ ಮಾತ್ರ ನಿಡಲಾಗುತ್ತಿತ್ತು. ಆದರೆ ರಸೂಲುಲ್ಲಾಹ್(ಸ) ಅವರು ಇದನ್ನು ಕಂಡು ತಾಳ್ಮೆಯಿಂದ ವರ್ತಿಸಿದರು. ಮತ್ತು ಮಕ್ಕಾವನ್ನು ವಿಜಯಶಾಲಿಯಾದಾಗ, ಅವರು **ಲಾ ತುಸ್ರೀಬ ಅಲೈಕುಮುಲ್ ಯೌಮ** (ಯೂಸುಫ್:93) ಇಂದು ನಿಮ್ಮ ಮೇಲೆ ಯಾವುದೇ ದೋಷಾರೋಪಣೆ ಇಲ್ಲ ಎಂದು ಹೇಳುವ ಮೂಲಕ ಕ್ಷಮಿಸಿದರು. ಇದು ಎಂತಹ ಪರಿಪೂರ್ಣ ನೈತಿಕತೆಯಾಗಿದೆ. ಇದು ಬೇರೆ ಇತರೆ ಯಾವುದೇ ಪ್ರವಾದಿಗಳಲ್ಲಿಯೂ ಕಂಡುಬರುವುದಿಲ್ಲ. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿ ವ್ವ ಅಲಾ ಆಲಿ ಮುಹಮ್ಮದ್.**

ವಿಷಯವೆಂದರೆ ನೀವು ನೈತಿಕತೆಯನ್ನು ಪಡೆದುಕೊಳ್ಳಬೇಕು, ಸದ್ಗುಣಗಳ ಕೀಲಿಕೈ ನೈತಿಕತೆಯಾಗಿದೆ.

**(ಮಲ್‌ಫೂಝಾತ್, ಸಂಪುಟ-1, ಪುಟ-484, ಪ್ರಕಟಿತ 2018 ಖಾದಿಯಾನ್)**

### *128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

لا اله الا الله محمد رسول الله

**"ಮುಜ್‌ಕೋ ಕಾಫಿರ್ ಕಹ್‌ಕೆ ಅಪ್ನೆ ಕುಫ್ರ್ ಪರ್ ಕರ್ತೆ ಹೈಂ ಮುಹರ್ ಎ ತೋ ಹೈ ಸಬ್ ಶಕಲ್ ಉನ್‌ಕೀ ಹಮ್ ತೋ ಹೈಂ ಆಯಿನಾದಾರ್॥"**

ಅನುವಾದ: ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದು ಘೋಷಿಸಿ ಸ್ವಯಂ ತನ್ನ ಅವಿಶ್ವಾಸವನ್ನು ದೃಢೀಕರಿಸುತ್ತಿದ್ದಾರೆ. ಇವೆಲ್ಲವು ಅವರ ಕಾರಸ್ತಾನವಾಗಿದೆ, ನವು ಕನ್ನಡಿಯಾಗಿದ್ದೇವೆ ಅಷ್ಟೇ.

**(ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್))................(7)**

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮೇಲೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆ ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ.

ಕಳೆದ ಆರು ಸಂಚಿಕೆಗಳಿಂದ, ನಾವು ಅಹ್ಮದಿಯಾ ಜಮಾಅತ್‌ನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಅವರ ಬಗ್ಗೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆಯ ಆಕ್ಷೇಪಣೆಗಳಿಗೆ ಪ್ರತಿಕ್ರಿಯಿಸುತ್ತಿದ್ದೇವೆ. ಆಕ್ಷೇಪಣೆಗಳ ವಿವರಗಳು ಮತ್ತು ಅವುಗಳ ಹಿನ್ನೆಲೆಯನ್ನು ಆಗಸ್ಟ್ 17 ರ ಸಂಚಿಕೆಯಲ್ಲಿ ನೋಡಬಹುದು. "ಮುನ್ಸಿಫ್"ನ ಆಕ್ಷೇಪಣೆಗಳಲ್ಲಿ ಒಂದು:

"ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅವರು ಮುಜದ್ದಿದ್, ಮುಹದ್ದಿಸಿಯ್ಯತ್ (ಆವಿಷಕಾರಕ), ಮಹದಿವಿಯ್ಯತ್, ಮಸೀಹಿಯ್ಯತ್, ಝಿಲ್ಲಿ ನಬೀ, ಬರೂಝಿ ನಬೀ, ಹಖೀಖಿ ನಬೀ, ಝಿಲ್ ಮುಹಮ್ಮದ್(ಸ) ಮತ್ತು ಭಗವಂತ ಆಗಿರುವ ಬಗ್ಗೆ ವಾದವನ್ನು ಮಮಡಿದ್ದಾರೆ. ಅದೇನೇ ಇದ್ದರೂ, ಅದನ್ನು ಅನುಸರಿಸುವವರು ತಮ್ಮನ್ನು ಅಹ್ಮದಿ ಮುಸ್ಲಿಮರು ಎಂದು ಕರೆದುಕೊಳ್ಳಲು ಇಷ್ಟಪಡುತ್ತಾರೆ ಮತ್ತು ಇತರೆ ಮುಸ್ಲಿಮರು ಅವರನ್ನು ಹೀಗೆಯೇ ಯೋಚಿಸುತ್ತಾರೆ ಎಂದು ಭಾವಿಸುತ್ತಾರೆ."

ಅದಕ್ಕೆ ಪ್ರತಿಕ್ರಿಯೆಯಾಗಿ, ಒಬ್ಬ ಪ್ರವಾದಿ ಅನೇಕ ಸ್ಥಾನಗಳನ್ನು ಹೊಂದಬಹುದು ಮತ್ತು ಅನೇಕ ಹೆಸರುಗಳಿಂದ ಕರೆಯಲ್ಪಡಬಹುದು. ಹಝ್ರತ್ ಪೈಗಂಬರ್(ಸ) ಅವರು ಮಸೀಹ್‌ನ ಹೆಸರಿನಲ್ಲಿ ತಮ್ಮ ಉಮ್ಮತ್ತಿನಲ್ಲಿ ಕೊನೆಯ ಕಾಲದಲ್ಲಿ ಬರಲಿರುವ ಪ್ರವಾದಿಯ ಸುದ್ದಿಯನ್ನು ನೀಡಿದರು. ತದನಂತರ ಅವರು ಅವರನ್ನು ಮಹದಿ ಎಂಬ ಹೆಸರಿನಿಂದ ಕರೆದರು ಮತ್ತು ಈ ಎರಡು ಹೆಸರುಗಳನ್ನು ಹಝ್ರತ್ ಪೈಗಂಬರ್(ಸ) ಅವರು ಸ್ವತಃ ನೀಡಿದರು ಮತ್ತು ಪ್ರತಿಯೊಬ್ಬ ಪ್ರವಾದಿಯೂ ತನ್ನ ಕಾಲದ ಮುಸ್ಲೆಹ್ (ಸುಧಾರಕ) ಮತ್ತು ಮುಜದ್ದಿದ್ ಆಗಿರುತ್ತಾರೆ. ಮತ್ತು ಪ್ರತಿಯೊಬ್ಬ ಪ್ರವಾದಿಯೂ ಸಹ ಮುಹದ್ದಿಸ್ (ನವೀಕರಿಸುವವನು) ಕೂಡ ಆಗಿರುತ್ತಾನೆ. ಒಬ್ಬ ಪ್ರವಾದಿ ಅನೇಕ ಸ್ಥಾನಗಳನ್ನು ಹೊಂದಬಹುದು ಮತ್ತು ಅನೇಕ ಹೆಸರುಗಳಿಂದ ಕರೆಯಲ್ಪಡಬಹುದು. ಹಝ್ರತ್ ಪೈಗಂಬರ್(ಸ) ಅವರು ಮಸೀಹ್‌ನ ಹೆಸರಿನಲ್ಲಿ ತಮ್ಮ ಉಮ್ಮತ್ತಿನಲ್ಲಿ ಕೊನೆಯ ಕಾಲದಲ್ಲಿ ಬರಲಿರುವ ಪ್ರವಾದಿಯ ಸುದ್ದಿಯನ್ನು ನೀಡಿದರು. ತದನಂತರ ಅವರು ಅವರನ್ನು ಮಹದಿ ಎಂಬ ಹೆಸರಿನಿಂದ ಕರೆದರು ಮತ್ತು ಈ ಎರಡು ಹೆಸರುಗಳನ್ನು ಹಝ್ರತ್ ಪೈಗಂಬರ್(ಸ) ಅವರು ಸ್ವತಃ ನೀಡಿದರು ಮತ್ತು ಪ್ರತಿಯೊಬ್ಬ ಪ್ರವಾದಿಯೂ ತನ್ನ ಕಾಲದ ಮುಸ್ಲೆಹ್ (ಸುಧಾರಕ) ಮತ್ತು ಮುಜದ್ದಿದ್ ಆಗಿರುತ್ತಾರೆ. ಮತ್ತು ಪ್ರತಿಯೊಬ್ಬ ಪ್ರವಾದಿಯೂ ಸಹ ಮುಹದ್ದಿಸ್ (ನವೀಕರಿಸುವವನು) ಆಗಿರುತ್ತಾನೆ. ಮುಹದ್ದಿಸ್ ಎಂದರೆ ಸರ್ವಶಕ್ತನಾದ ಅಲ್ಲಾಹನ ಇಲ್‌ಹಾಮ್ ಮತ್ತು ಕಲಾಮ್‌ನಿಂದ ಗೌರವಿಸಲ್ಪಟ್ಟವರಾಗಿರುತ್ತಾರೆ. ಈ ಅರ್ಥದಲ್ಲಿ, ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ(ಅ) ಅವರು ಸಹ ಮಸೀಹ್ ಆಗಿದ್ದಾರೆ, ಅವರು ಮಹದಿಯೂ ಆಗಿದ್ದಾರೆ, ಅವರು ಮುಜದ್ದಿದ್ ಸಹ ಆಗಿದ್ದಾರೆ, ಮತ್ತು ಮುಹದ್ದಿಸ್ ಕೂಡ ಆಗಿದ್ದಾರೆ. ಹಿಂದಿನ ಸಂಚಿಕೆಯಲ್ಲಿ ನಾವು ವಿವರವಾದ ಉತ್ತರವನ್ನು ನೀಡಿದ್ದೇವೆ.

ಈಗ, **"ಈಸಾ ಮಸೀಹ್‌ನೊಂದಿಗೆ ಹೋಲಿಕೆ"** ಎಂಬ ಆಕ್ಷೇಪಣೆ ಎಂದರೆ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ(ಅ) ಹೇಗೆ ಈಸಾ ಮಸೀಹ್‌ರ ಸದೃಶರೂಪವಾದರು (ಮಸೀಲ್). ಹೀಗಿರುವಾಗ ಈ ಪ್ರಶ್ನೆಗೆ ಉತ್ತರವಾಗಿ ಒಬ್ಬ ಪ್ರವಾದಿ ಮತ್ತೊಬ್ಬ ಪ್ರವಾದಿಯ ಸದೃಶರೂಪ (ಮಸೀಲ್) ಏಕೆ ಆಗಬಾರದು? ಒಬ್ಬ ಪ್ರವಾದಿಯನ್ನು ಷರಿಯ್ಯತ್ ಮತ್ತೊಬ್ಬರ ಸದೃಶರೂಪ (ಮಸೀಲ್) ಎಂದು ಘೋಷಿಸಿದಾಗ ಮುನ್ಸಿಫ್ ಸಂಪಾದಕರ ಆಕ್ಷೇಪವೇನು? ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **ಇನ್ನಾ ಅರ್‌ಸಲ್‌ನಾ ಇಲೈಕುಮ್ ರಸೂಲನ್ ಶಾಹಿದನ್ ಅಲೈಕುಮ್ ಕಮಾ ಅರ್‌ಸಲ್‌ನಾ ಇಲಾ ಫಿರ್‌ಔನ ರಸೂಲ** (ಸೂರಃ ಅಲ್ ಮುಝಮ್ಮಿಲ್) ಅಂದರೆ ಫಿರ್‌ಔನ್‌ನ ಬಳಿಗೆ ನಾವು ಒಬ್ಬ ಸಂದೇಶವಾಹಕನನ್ನು ಕಳುಹಿಸಿದಂತೆ, ನಿಶ್ಚಯವಾಗಿಯೂ ನಿಮಗೆ ಸಾಕ್ಷಿಯಾಗಿ ನಿಮ್ಮ ಬಳಿಗೆ ಒಬ್ಬ ಸಂದೇಶವಾಹಕನನ್ನು ನಾವು ಕಳುಹಿಸಿದ್ದೇವೆ. **ಕಮಾ** ಪದವು ಹೋಲಿಕೆಗೆ ಬರುವುದು, ಅದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ರವರು ಪ್ರವಾದಿ ಮೂಸಾ(ಅ) ರವರ ಸದೃಶರೂಪವಾಗಿದ್ದರು. ಮತ್ತು ಯಹ್ಯಾ(ಅ) ಅವರು ಈಲಿಯಾ ಅವರ ಸದೃಶವಾಗಿರಲಿಲ್ಲವೇ? ನಂತರ, ಉಮ್ಮತೆ ಮುಹಮ್ಮದಿಯಾದಲ್ಲಿ ಆಗಮಿಸಲಿರುವ ಉಮ್ಮತಿ ಮಸೀಹ್ ಬನೀ ಇಸ್ರಾಈಲರ ಈಸಾ ಇಬ್ನೆ ಮರ್ಯಮ್‌ನ ಸಾದೃಶ ರೂಪವಾದರೆ ಇದರಲ್ಲಿ ಆಶ್ಚರ್ಯ ಪಡುವ ವಿಷಯವೇನು? ಮತ್ತು ಈಸಾ ಮಸೀಹ್(ಅ) ಅವರ ಬಿರುದನ್ನು ನೀಡಿದವರು ಸ್ವತಃ ಹಝ್ರತ್ ಪೈಗಂಬರ್(ಸ) ಆಗಿದ್ದಾರೆ. ಮತ್ತು ಈಸಾ ಮಸೀಹರ ಬಿರುದನ್ನು ನೀಡಲು ಕಾರಣವೆಂದರೆ ಆ ಮಸೀಹ್ ಇಬ್ನೆ ಮರ್ಯಮ್ ಆಗಿರುತ್ತಾನೆ.

ಹಝ್ರತ್ ಈಸಾ(ಅ) ಪವಿತ್ರ ಖುರ್‌ಆನ್ ಮತ್ತು ಹದೀಸ್ ಪ್ರಕಾರ ಮರಣಹೊಂದಿದ್ದಾರೆ, ಅವರು ಆಕಾಶದಲ್ಲಿ ಜೀವಂತವಾಗಿದ್ದಾರೆ ಎಂಬ ನಂಬಿಕೆ ಸುಳ್ಳು ನಂಬಿಕೆಯಾಗಿದೆ. ಈಗ ಈಸಾ(ಅ) ಅವರು ನಿಧನರಾಗಿದ್ದರಿಂದ ಅವರ ಹೆಸರಿನಲ್ಲಿ ಆಗಮಿಸುವವನು ಖಂಡಿತವಾಗಿಯೂ ಅವನಂತೆಯೇ ಅವರ ಸದೃಶರೂಪವಾಗಿರುತ್ತಾನೆ. ಸಾವಿನ ನಂತರ ಅವರು ಮತ್ತೆ ಈ ಜಗತ್ತಿಗೆ ಬರಲು ಸಾಧ್ಯವಿಲ್ಲ ಬದಲಿಗೆ ಅವರ ಗುಣಲಕ್ಷಣಗಳು ಮತ್ತು ಅವರ ರೂಪವುಳ್ಳವರು ಮಾತ್ರ ಆಗಮಿಸುರೆ ಎಂಬುದು ಸ್ಪಷ್ಟವಾಗಿದೆ. ಮತ್ತು ಅದು ಸದೃಶರೂಪಯಾಗಿರುವುದರ ಅರ್ಥವಾಗಿದೆ. ಅಂದರೆ, ಯಾರೊಬ್ಬರ ಗುಣಲಕ್ಷಣಗಳು ಮತ್ತು ಅವರ ಗುಣಗಳ ಮೇಲೆ ಬರುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಇದು ಇಮಾಮ್ ಬುಖಾರಿ ಮತ್ತು ಇಮಾಮ್ ಇಬ್ನ್ ಹಜ್ಮ್ ಮತ್ತು ಇಮಾಮ್ ಮಾಲಿಕ್(ರ) ಮತ್ತು ಈಸಾ ಮಸೀಹ್(ಅ) ಅವರು ನಿಜವಾಗಿ ಮರಣಹೊಂದಿದ ಇತರ ಮಹಾನ್ ಇಮಾಮ್‌ಗಳ ನಿಲುವಾಗಿದೆ. ಶೇಖ್ ಮುಹಿದ್ದೀನ್ ಇಬ್ನ್ ಅಲ್-ಅರಬಿ ಕೂಡ ಅದೇ ನಿಲುವನ್ನು ಹೊಂದಿದ್ದರು ಎಂಬುದು ಈಗ ಸ್ಪಷ್ಟವಾಗಿರಬೇಕು. ಹೀಗೆ, ಅವರು ನುಝೂಲ್ ನ ವಾಸ್ತವತೆಯ ಕುರಿತಾದ ಅವರ ವ್ಯಾಖ್ಯಾನದ 262 ನೇ ಪುಟದಲ್ಲಿ ಹೀಗೆ ಬರೆಯುತ್ತಾರೆ: **"ವಜಬ ನುಝೂಲುಹೂ ಫೀ ಆಖಿರಿಝ್ಝಮಾನಿ ಬಿತಅಲ್ಲುಖಿಹೀ ಬಿಬದಾನಿನ್ ಆಖರ"** ಎಂದರೆ ಈಸಾ ಇಳಿಯುತ್ತಾರೆ, ಆದರೆ ಅವರು ಇನ್ನೊಂದು ದೇಹಕ್ಕೆ ಸಂಬಂಧಿಸಿರುತ್ತಾರೆ ಎಂಬ ಅರ್ಥದಲ್ಲಿ, ಅಂದರೆ ಅವರು ಸದೃಶವಾಗಿ ಇಳಿಯುತ್ತಾರೆ. ಸೂಫಿಗಳ ನಿಲುವಿದ್ದಂತೆ."(ಕಿತಬುಲ್ ಬರಿಯ್ಯ, ರಊಹಾನಿ ಖಝಾಈನ್, ಸಂಪುಟ-13, ಪುಟ-22, ಅಡಿಟಿಪ್ಪಣಿ)

ಮಲಾಕಿ ಪ್ರವಾದಿಯ ಪುಸ್ತಕದಲ್ಲಿ, ಏಲಿಯಾ ಪ್ರವಾದಿ ಮರಣ ಹೊಂದಿ ಒಂದು ಸುದೀರ್ಘಕಾಲ ಕಳೆದಿದ್ದರೂ ಮಸೀಹನ ಆಗಮನದಿಂದ ಮುಂಚೆ ಏಲಿಯಾ ಪ್ರವಾದಿ ಮತ್ತೊಮ್ಮೆ ಆಗಮಿಸುವರು ಎಂದು ಭವಿಷ್ಯವಾಣಿ ನುಡಿದರು. ಯಹೂದಿಗಳು ಹಝ್ರತ್ ಈಸಾ ಮಸೀಹ್(ಅ) ಅವರನ್ನು ಕೇಳಿದರು, ಏಲಿಯಾ ನಿಮ್ಮ ಆಗಮನಕ್ಕು ಮುನ್ನ ಏಲಿಯಾ ಅವತರಿಸಬೇಕಾಗಿತ್ತು ಆದರೆ ಆತನು ಇನ್ನೂ ಆಗಮಿಸಲಿಲ್ಲದೆ ನೀವು ಹೇಗೆ ಪ್ರವಾದಿಯಾಗುತ್ತೀರಿ? ಇದಕ್ಕೆ ಪ್ರತಿಕ್ರಿಯೆಯಾಗಿ ಹಝ್ರತ್ ಈಸಾ ಮಸೀಹ್(ಅ) ಹೇಳಿದರು ಏಲಿಯಾ ಎಂದರೆ ಯಹ್ಯಾ ಆಗಿದ್ದಾರೆ. ಯಾಹ್ಯಾ ಅವರನ್ನು ಹಝ್ರತ್ ಈಸಾ ಮಸೀಹರು ಏಲಿಯಾದ ಸಾದೃಶರೂಪ ಎಂದು ವಿವರಿಸಿದರು. ಮೃತ ವ್ಯಕ್ತಿ ಆಕಾಶದಿಂದ ಇಳಿದು ಬರುವುದು ಎಂದರೆ ಅವನ ಸದೃಶರೂಪವೇ ಹೊರತು ಮೃತಪಟ್ಟವರು ಸ್ವತಃ ಆಗಮಿಸುವುದಿಲ್ಲ ಎಂಬುದು ಮುಸ್ಲಿಮರಿಗೆ ಒಂದು ದೊಡ್ಡ ನಿದರ್ಶನವಾಗಿತ್ತು. ಆದರೆ ದುರದೃಷ್ಟವಶಾತ್ ಮುಸ್ಲಿಮರಿಗೆ ಅದರಿಂದ ಯಾವುದೇ ಪ್ರಯೋಜನವಾಗಲಿಲ್ಲ. ತಝ್‌ಕಿರತುಶ್ಶಹಾದತೈನ್ ರೂಹಾನಿ ಖಝಾಈನ್ ಸಂಪುಟ 20 ರಿಂದ, ನಾವು ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕೆಲವು ಉದಾತ್ತ ಉಲ್ಲೇಖಗಳನ್ನು ಪ್ರಸ್ತುತಪಡಿಸುತ್ತೇವೆ, ಬಹುಶಃ ನೋವಿನ ಹೃದಯ ಹೊಂದಿರುವ ಯಾರಾದರೂ ಅರ್ಥಮಾಡಿಕೊಳ್ಳಬಹುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಹದೀಸಿನಲ್ಲಿ ಸ್ಪಷ್ಟವಾಗಿ ಬರೆದಿದೆ, ಮಿಅ್‌ರಾಜ್ ರಾತ್ರಿಯಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಈಸಾರನ್ನು ಮೃತರ ಆತ್ಮಗಳೊಂದಿಗೆಯೇ ಕಂಡರೆಂದು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅರ್‌ಶ್ ತನಕ ತಲಪಿದರು. ಆದರೆ ದೇಹ ಸಮೇತ ಬೇರೆ ಜಾಗದಲ್ಲಿದ್ದ ಯಾವುದೇ ಈಸಾ ನಾಮಧೇಯ ಹೊಂದಿದ ವ್ಯಕ್ತಿಯನ್ನು ಕಾಣಲಿಲ್ಲ. ಅವರು ನೋಡಿದುದು ಮೃತರಾದ ಯಹ್‌ಯಾ ಪ್ರವಾದಿಯ ರೂಹ್‌ನೊಂದಿಗೆ ಇದ್ದ ಈಸಾ ಪ್ರವಾದಿಯ ರೂಹನ್ನಾಗಿದೆ. ಜೀವಂತವಾಗಿರುವವರು ಮೃತರೊಂದಿಗೆ ಜೀವಿಸಲು ಸಾಧ್ಯವಿಲ್ಲ.

ಇದಲ್ಲದೆ ಯಹೂದಿಯರಿಗಿಂತ ಮುಸ್ಲಿಮರಿಗೆ ಅನುಭವ ಜ್ಞಾನ ಲಭಿಸಿದೆ ಮೃತರನ್ನು ಪುನಃ ಲೋಕಕ್ಕೆ ಕಳುಹಿಸುವುದು ಅಲ್ಲಾಹನ ನಡೆವಳಿಕೆ ಅಲ್ಲ ಎಂದು ಮುಸ್ಲಿಮರಾದ ನಮಗೆ ಈಸಾ ಆಗಮಿಸುವುದಕ್ಕಿಂತ ಹಝ್ರತ್

*(ಪುಟ ಸಂಖ್ಯೆ-10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಈ ಜಲ್ಸದ ಕಾರಣದಿಂದ ಜನರಿಗೆ ಇಸ್ಲಾಮಿನ ನೈಜ ಪಾಠವನ್ನು ನೀಡಲು ಅಲ್ಲಾಹನು ಸೌಭಾಗ್ಯ ನೀಡಿದನು ಎಂಬುದಕ್ಕೆ ಜರ್ಮನಿಯ ಜಮಾಅತ್ ಅಲ್ಲಾಹನಿಗೆ ಬಹಳವಾಗಿ ಕೃತಜ್ಞತೆ ಅರ್ಪಿಸಬೇಕು.

ಅಲ್ಲಾಹನ ಅಪರಿಮಿತವಾದ ಕೃಪೆ ಮತ್ತು ಔದಾರ್ಯದಿಂದ ಅಹ್ಮದಿಯಾ ಜಮಾಅತ್ ಜರ್ಮನಿಯ ವಾರ್ಷಿಕ ಜಲ್ಸ ಕಳೆದ ವಾರ ವಿಜಯಕರವಾಗಿ ಜರುಗಿತು. ಮೊತ್ತಮೊದಲಾಗಿ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅವನು ನಮಗೆ ಒಂದು ವಿರಾಮದ ನಂತರ ವಿಸ್ತಾರವಾದ ಮಟ್ಟದಲ್ಲಿ ಸಾಮಾನ್ಯವಾಗಿ ನಡೆಸುವ ರೀತಿಯಲ್ಲೇ ಜಲ್ಸವನ್ನು ಸಂಘಟಿಸಲು ಸೌಭಾಗ್ಯ ನೀಡಿದನು. ವ್ಯವಸ್ಥಾಪಕರು ಮತ್ತು ಜಲ್ಸದಲ್ಲಿ ಭಾಗವಹಿಸಿದವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು.

ಕೆಲವೆಡೆ ಅತಿಥಿಗಳಿಗೆ ಉಂಟಾಗಿರುವ ತೊಂದರೆಗೆ ಅಧಿಕಾರಿಗಳು ಹೊಣೆಗಾರರಾಗಿರುವರು. ಅವರು ಇಸ್ತಿಗ್‌ಫಾರ್ ಮಾಡಬೇಕು ಮತ್ತು ಕೊರತೆಗಳನ್ನು ರೆಡ್‌ಬುಕ್‌ನಲ್ಲಿ ಬರೆದುಕೊಂಡು ಇನ್ನು ಮುಂದೆ ಸುಧಾರಣೆ ಮಾಡುವ ಪ್ರಯತ್ನ ಮಾಡಬೇಕು. ಅವರು ಈ ಸ್ಥಳದಲ್ಲಿ ಮುಂದಿನ ದಿನಗಳಲ್ಲಿ ಉತ್ತಮವಾಗಿ ನಿರ್ವಹಿಸಬಹುದೇ ಅಥವಾ ಇಲ್ಲವೇ ಅಥವಾ ಬೇರೆಡೆ ನಿರ್ವಹಿಸಬೇಕೇ ಎಂಬುದನ್ನು ಸಹ ಪರಿಶೀಲಿಸಬೇಕಾಗಿದೆ.

ಉಳಿದಂತೆ ಆಡಳಿತಾತ್ಮಕ ವಿಷಯಗಳಲ್ಲಿ ಲೋಪಗಳನ್ನು ಸಹಿಸಿಕೊಳ್ಳಬಹುದು, ಆದರೆ ಜಲ್ಸವನ್ನು ಆಲಿಸುವ ವ್ಯವಸ್ಥೆಯಲ್ಲಿ ಯಾವುದೇ ಲೋಪವನ್ನು ಸಹಿಸಲಾಗುವುದಿಲ್ಲ.

ಪ್ರಗತಿ ಹೊಂದುವ ಸಮುದಾಯಗಳು ತಮ್ಮ ಕೊರತೆಗಳ ಬಗ್ಗೆ ದೃಷ್ಟಿ ಇರಿಸಿದರೆ ಮಾತ್ರ ಯಶಸ್ಸು ಗಳಿಸುವುವು. ಎಲ್ಲವೂ ಸರಿಯಾಗಿವೆ ಎಂದು ಹೇಳಿಕೊಂಡು ಅಭಿವೃದ್ಧಿಯ ಮಾರ್ಗವನ್ನು ಮುಚ್ಚಬೇಡಿರಿ. ಇದರಲ್ಲಿ ನಾಚಿಕೆಪಡಬೇಕಾದ ಅಗತ್ಯವಿಲ್ಲ. ವಿಭಾಗಗಳ ಅಧಿಕಾರಿಗಳಿಗೆ ತಮ್ಮ ಸುಧಾರಣೆ ಮಾಡಲು ಅಲ್ಲಾಹನು ಸೌಭಾಗ್ಯ ನೀಡಲಿ.

ಎಲ್ಲಾ ಸಂಘಟನೆಗಳು, ಪುರುಷರು, ಮಹಿಳೆಯರು, ಮಕ್ಕಳು ಸಹ ಸಂಘಟಿತರಾಗಿದ್ದರು. ಭಿನ್ನಾಭಿಪ್ರಾಯಗಳ ನಡುವೆಯೂ ಸಹಿಷ್ಣುತೆ ಮತ್ತು ಇತರರ ಸ್ವೀಕಾರದಂತಹ ಅನೇಕ ಆಸಕ್ತಿದಾಯಕ ವಿಷಯಗಳನ್ನು ನಾನು ಈ ದಿನಗಳಲ್ಲಿ ಅಹ್ಮದಿಯಾ ಜಮಾಅತ್ ಬಗ್ಗೆ ಕಲಿತಿದ್ದೇನೆ. (ಡಾ॥ ವಿರೋನಿಕ)

ಖಲೀಫರ ವಿವಿಧ ವಿಷಯಗಳ ಬಗ್ಗೆ ಭಾಷಣಗಳು ನನ್ನ ಮೇಲೆ ಪ್ರಭಾವ ಬೀರಿದವು. ಮೆಸಿಡೋನಿಯಾದ ಪತ್ರಕರ್ತನಾಗಿ, ಜಲ್ಸದಲ್ಲಿ ಅನೇಕ ಅಹ್ಮದಿ ಮುಸ್ಲಿಮರೊಂದಿಗೆ ಮಾತನಾಡಲು ನನಗೆ ಅವಕಾಶ ಲಭಿಸಿತು, ಅವರೆಲ್ಲರು ಯಾವಾಗಲೂ ನನ್ನೊಂದಿಗೆ ನಗುಮುಖದಿಂದ ಮಾತನಾಡುತ್ತಿದ್ದರು. (ಸೇನದ್ ರಸಿವೋವ್)

ಜಲ್ಸ ಸಾಲಾನದ ಮೊದಲು, ನನಗೆ ಇಸ್ಲಾಂ ಧರ್ಮದ ಬಗ್ಗೆ ಏನೂ ತಿಳಿದಿರಲಿಲ್ಲ. ಮುಸ್ಲಿಮರು ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ತಮ್ಮ ದೇವರು ಎಂದು ನಂಬುತ್ತಾರೆ ಎಂದು ನಾನು ಭಾವಿಸಿದ್ದೆ ನೌಝುಬಿಲ್ಲಾಹ್. ಜಲ್ಸದಲ್ಲಿ ಭಾಗವಹಿಸಿ ನಾನು ಇಸ್ಲಾಂ ಧರ್ಮದ ಬೋಧನೆಯ ಪರಿಚಯವನ್ನು ಪಡೆದುಕೊಂಡೆ, ಸರ್ವಶಕ್ತನಾದ ಅಲ್ಲಾಹ್ ಮತ್ತು ಅಲ್ಲಾಹನ ಸಂದೇಶವಾಹಕರ(ಸ) ಅವರ ನಿಜವಾದ ಸ್ಥಾನಮಾನ ಮತ್ತು ಇಸ್ಲಾಂ ಧರ್ಮವು ನಿಜವಾಗಿಯೂ ಶಾಂತಿಯುತ ಧರ್ಮವಾಗಿದೆ. (ಒಂಡ್ರಿಸ್ಕಾ ಸಾಹಿಬ್)

ನಾನು ಇಲ್ಲಿ ಜಲ್ಸದಲ್ಲಿ ಇಸ್ಲಾಂ ಧರ್ಮವನ್ನು ನೋಡಿದ್ದೇನೆ. ನಿಮ್ಮ ಮತ್ತು ಇತರ ಮುಸ್ಲಿಮರ ನಡುವಿನ ಸ್ಪಷ್ಟ ವ್ಯತ್ಯಾಸವೆಂದರೆ ಖಿಲಾಫತ್ ಆಗಿದೆ ಮತ್ತು ಇದರಿಂದಾಗಿ ನೀವು ಏಕತೆಯನ್ನು ಹೊಂದಿದ್ದೀರಿ. (ರಜೀಪ್ ಶರ್ಕೋತಿ)

ಇಸ್ಲಾಂ ಧರ್ಮದ ಬೋಧನೆಗಳನ್ನು ಹರಡಲು ಇಸ್ಲಾಂ ಮಹಿಳೆಯರನ್ನು ಪ್ರೋತ್ಸಾಹಿಸುತ್ತದೆ ಎಂದು ನಾನು ಇಷ್ಟಪಡುತ್ತೇನೆ. ಭವಿಷ್ಯದಲ್ಲಿ ಜಗತ್ತು ಇಸ್ಲಾಮಿನ ಬಗ್ಗೆ ಯೋಚಿಸುತ್ತದೆ ಮತ್ತು ಅದರ ಮೂಲಕ ಜನರು ತಮ್ಮ ದೇವರ ಬಗ್ಗೆ ಜಾಗೃತರಾಗುತ್ತಾರೆ ಎಂದು ನಾನು ದೃಢವಾಗಿ ನಂಬುತ್ತೇನೆ. (ಲಿಯಾ)

ಖಲೀಫರ ಸಂಬೋಧನೆಯ ಕೇವಲ ಕೇಳಲು ಸಾಕಾಗುವುದಿಲ್ಲ ಬದಲಿಗೆ ಅವರು ಏನು ಹೇಳಿದರು ಎಂಬುದರ ಬಗ್ಗೆ ಒಬ್ಬರು ಸಾಕಷ್ಟು ಯೋಚಿಸಬೇಕು. (ಜರ್ಮನಿಯ ಕೆಥೋಲಿಕ್ ಅತಿಥಿ)

**ಅಹ್ಮದಿಯಾ ಮುಸ್ಲಿಮ್ ಜಮಾಅತ್ ಜರ್ಮನಿ ಅವರಿಗೆ ಜಲ್ಸ ಸಾಲಾನದ ಕುರಿತು ಕೆಲವು ಸಲಹೆ ಸೂಚನೆಗಳು ಹಾಗೂ ಜಲ್ಸದಲ್ಲಿ ಭಾಗವಹಿಸಿದ ಕೆಲವು ಅತಿಥಿಗಳ ಅನಿಸಿಕೆಗಳು ಮತ್ತು ಮೀಡಿಯಾ ಕವರೆಜ್ ಬಗ್ಗೆ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಫ್ರೆಂಕ್‌ಫೋರ್ಟ್ (ಜರ್ಮನಿಯ) **'ಮಸ್ಜಿದ್ ಬೈತುಸ್ಸುಬೂಹ್'** ದಿಂದ **08-09-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ۔ بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಅಲ್ಲಾಹನ ಅಪರಿಮಿತವಾದ ಕೃಪೆ ಮತ್ತು ಔದಾರ್ಯದಿಂದ ಅಹ್ಮದಿಯಾ ಜಮಾಅತ್ ಜರ್ಮನಿಯ ವಾರ್ಷಿಕ ಜಲ್ಸ ಕಳೆದ ವಾರ ವಿಜಯಕರವಾಗಿ ಜರುಗಿತು. ಮೊತ್ತಮೊದಲಾಗಿ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅವನು ನಮಗೆ ಒಂದು ವಿರಾಮದ ನಂತರ ವಿಸ್ತಾರವಾದ ಮಟ್ಟದಲ್ಲಿ ಸಾಮಾನ್ಯವಾಗಿ ನಡೆಸುವ ರೀತಿಯಲ್ಲೇ ಜಲ್ಸವನ್ನು ಸಂಘಟಿಸಲು ಸೌಭಾಗ್ಯ ನೀಡಿದನು.

ವ್ಯವಸ್ಥಾಪಕರು ಮತ್ತು ಜಲ್ಸದಲ್ಲಿ ಭಾಗವಹಿಸಿದವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು.

ಕಾರ್ಯಕರ್ತರು ಕೂಡ ಕೃತಜ್ಞತೆ ಅರ್ಪಿಸಬೇಕು. ಹಝ್ರತ್ ಮಸೀಹ್ ಮೌಊದ್(ಅ)ರ ಅತಿಥಿಗಳ ಸೇವೆ ಮಾಡಲು ನಮಗೆ ಅಲ್ಲಾಹನು ಸೌಭಾಗ್ಯ ನೀಡಿದನು. ಅದೇ ರೀತಿ, ಜಲ್ಸದ ದಿನಗಳಲ್ಲಿ ಕಾರ್ಮಿಕರು ಸೇವೆ ಸಲ್ಲಿಸಲು

ಪ್ರಯತ್ನಿಸಿದ್ದಕ್ಕಾಗಿ ಜಲ್ಸದಲ್ಲಿ ಭಾಗವಹಿಸಿದವರು ಅವರಿಗೆ ಕೃತಜ್ಞರಾಗಿರಬೇಕು. ಈ ವಿಶಾಲವಾದ ವ್ಯವಸ್ಥೆಯಲ್ಲಿ ಮತ್ತು ಹೊಸ ಸ್ಥಳದಲ್ಲಿ, ಅನೇಕ ನ್ಯೂನತೆಗಳು ಉಳಿದಿರಬಹುದು ಮತ್ತು ಕೆಲವು ವಿಷಯಗಳಲ್ಲಿ ಕೆಲವು ಅತಿಥಿಗಳು ಕಷ್ಟ ಅನುಭವಿಸಿರಬಹುದು ಮತ್ತು ನನಗೂ ಸಹ ತಲುಪಿದ ಕೆಲವು ವಿಷಯಗಳಿವೆ, ಕಷ್ಟವನ್ನು ಸಹ ಅನುಭವಿಸಿದರು, ಆದರೆ ಧಾರ್ಮಿಕ ಉದ್ದೇಶಕ್ಕಾಗಿ ಬಂದ ಕಾರಣದಿಂದ ಅವರು ಯಾವುದೇ ದೂರು ನೀಡಲಿಲ್ಲ. ಆದರೆ ನನ್ನ ವಿಚಾರಣೆಯಲ್ಲಿ ಕೆಲವು ಏರ್ಪಾಡುಗಳು ಸರಿಯಿರಲಿಲ್ಲವೆಂದು ನನಗೆ ತಿಳಿದುಬಂದಿದೆ. ಅವುಗಳಲ್ಲಿ ಕೆಲವುಗಳನ್ನು ನಾನು ಅನುಭವಿಸಿದೆ. ಕಾರ್ಯಕರ್ತರು ಬಹಳ ಪರಿಶ್ರಮದಿಂದ ತಮ್ಮ ಕರ್ತವ್ಯಗಳನ್ನು ನೆರವೇರಿಸಿದ್ದರು. ಅವರಲ್ಲಿ ಅಥವಾ ಅವರ ವಿಭಾಗದಲ್ಲಿ ಏನಾದರೂ ಕೊರತೆಗಳು ಕಂಡುಬಂದಿದ್ದರೆ ಅವುಗಳು ಅವರ ಅಧಿಕಾರಿಗಳಿಂದ ನೀಡಲ್ಪಟ್ಟ ತಪ್ಪು ನಿರ್ದೇಶನಗಳ ಕಾರಣದಿಂದ ಆಗಿದ್ದುವು. ಕೆಲವೆಡೆ ಅತಿಥಿಗಳಿಗೆ ಉಂಟಾಗಿರುವ ತೊಂದರೆಗೆ ಅಧಿಕಾರಿಗಳು ಹೊಣೆಗಾರರಾಗಿರುವರು. ಅವರು ಇಸ್ತಿಗ್‌ಫಾರ್ ಮಾಡಬೇಕು ಮತ್ತು ಕೊರತೆಗಳನ್ನು ರೆಡ್‌ಬುಕ್‌ನಲ್ಲಿ ಬರೆದುಕೊಂಡು ಇನ್ನು ಮುಂದೆ ಸುಧಾರಣೆ ಮಾಡುವ ಪ್ರಯತ್ನ ಮಾಡಬೇಕು. ಅವರು ಈ ಸ್ಥಳದಲ್ಲಿ ಮುಂದಿನ ದಿನಗಳಲ್ಲಿ ಉತ್ತಮವಾಗಿ ನಿರ್ವಹಿಸಬಹುದೇ ಅಥವಾ ಇಲ್ಲವೇ ಅಥವಾ ಬೇರೆಡೆ ನಿರ್ವಹಿಸಬೇಕೇ ಎಂಬುದನ್ನು ಸಹ ಪರಿಶೀಲಿಸಬೇಕಾಗಿದೆ.

ಸಾಮಾನ್ಯವಾಗಿ, ಕೆಲವೊಮ್ಮೆ ಎದುರಾಗುವ ಕೆಲವು ತೊಂದರೆಗಳು ಈ ಕೆಳಗಿನಂತಿವೆ. ಎಸ್ಕಲೇಟರ್‌ಗಳು ಕೆಟ್ಟಿವೆ, ಏರಲು ಮತ್ತು ಇಳಿಯಲು ಕಷ್ಟ ಎಂದು ಯಾರೋ ನನಗೆ ಬರೆದರು. ಲಿಫ್ಟ್ ಕೆಲಸ ಮಾಡದ ಕಾರಣ ಸಮಸ್ಯೆ ಉಂಟಾಗಿದೆ. ವಸತಿ ವ್ಯವಸ್ಥೆ ಮಾಡಲಾಗಿತ್ತು ಆದರೆ ಸ್ನಾನಗೃಹದ ಕೊರತೆ ಅಥವಾ ನೀರಿನ ವ್ಯವಸ್ಥೆ ಸರಿಯಾಗಿರಲಿಲ್ಲ. ಕಾರ್ಲ್‌ಸ್ರೂಹೆಯಲ್ಲಿ, ಅವರು ತಮ್ಮ ಜಾಗವನ್ನು ಪಡೆದಾಗ, ಇವರೆಲ್ಲರು ಆರಂಭದಲ್ಲಿ ನನ್ನನ್ನು ಅಲ್ಲಿಗೆ ಕರೆದೊಯ್ದಿದ್ದರು ಮತ್ತು ನಾನು ನೋಡಿದ್ದೇನೆ ಮತ್ತು ಅಲ್ಲಿ ಶೌಚಾಲಯಗಳು ಮತ್ತು ನೀರಿನ ವ್ಯವಸ್ಥೆಯನ್ನೂ ಸರಿಯಾಗಿ ವ್ಯವಸ್ಥೆಗೊಳಿಸಬೇಕೆಂದು ಅವರಿಗೆ ಸೂಚಿಸಿದೆ. ಅಂತೂ ಅಲ್ಲಿ ಬೇರೆ ಬೇರೆ ಕಡೆ ನಿಂತ ಸೌಂಡ್ ಚೆಕ್ ಮಾಡ್ದೆ ಆ ಹಾಲ್‌ಗಳೂ ಚಿಕ್ಕದಾಗಿದ್ದರೂ ಸಹ ಕೊರತೆ ಇತ್ತು ಅದನ್ನ ಸರಿ ಪಡಿಸಲು ಪ್ರಯತ್ನಿಸಿದರು ಮತು ಸ್ವಲ್ಪ ಮಟ್ಟಿಗೆ ಬಗೆಹರಿಸಿದರೂ ಆದರೆ ಇಲ್ಲ ಆ ವಿಷಯದ ಬಗ್ಗೆ ಯೋಚಿಸಲಿಲ್ಲ. ಈ ಬಾರಿ ನನಗೆ ಈ ಸ್ಥಳದ ವಿವರ ಹೇಳದೆ, ಇದು ತುಂಬಾ ಒಳ್ಳೆಯ ಸ್ಥಳವಾಗಿದೆ ಎಂದು ಮೆಚ್ಚುಗೆಯ ವರದಿಗಳನ್ನು ಕಳುಹಿಸುತ್ತಲೇ ಇದ್ದರು. ಅದೇ ರೀತಿ ಕೆಲವೊಮ್ಮೆ ಅಧಿಕಾರಿಗಳ ತಪ್ಪು ಸೂಚನೆಗಳಿಂದ ಸೆಕ್ಯೂರಿಟಿ (ಭದ್ರತಾ) ಸಿಬ್ಬಂದಿ ವಿನಾಕಾರಣ ತಡೆ ಹಾಕುತ್ತಲೇ ಇರುತ್ತಿದ್ದರು. ಒಟ್ಟಿನಲ್ಲಿ ಅವರೆಲ್ಲರು ಉತ್ತಮವಾಗಿ ಕಾರ್ಯನಿರ್ವಹಿಸಿದ್ದರೂ ಕೆಲವೆಡೆ ವೈಯಕ್ತಿಕವಾಗಿ ಇಂತಹ ಘಟನೆಗಳು ನಡೆದಿವೆ, ಆದ್ದರಿಂದ ಲಜ್ನಾಗೆ ಆಹಾರ ತಲುಪಿಸುವಲ್ಲಿ ಸಮಸ್ಯೆ ಉಂಟಾಗಿದೆ ಎಂದು ಲಜ್ನಾದವರು ದೂರಿದ್ದಾರೆ.

ಸೆಕ್ಯೂರಿಟಿ (ಭದ್ರತಾ) ಸಿಬ್ಬಂದಿಗಳು ಕೂಡ ತಮ್ಮ ಕೆಲಸ ತಡೆಯುವುದು ಮಾತ್ರವಲ್ಲದೆ ಮಾರ್ಗದರ್ಶನ ನೀಡುವುದನ್ನೂ ನೆನಪಿಟ್ಟುಕೊಳ್ಳಬೇಕು ಮತ್ತು ಅತಿಥಿಗಳನ್ನು ಗೊತ್ತುಪಡಿಸಿದ ಸ್ಥಳಕ್ಕೆ ಅನುಕೂಲಕರವಾಗಿ ಸಾಗಿಸಲು ಮತ್ತು ಅವರಿಗೆ ಸೌಲಭ್ಯಗಳನ್ನು ಒದಗಿಸಲು ಈ ವಿಭಾಗದಲ್ಲಿ ಒಂದು ತಂಡ ಇರಬೇಕು.

ಅಂತೆಯೇ ಮೊದಲ ದಿನ ಭಾಷಾಂತರ ಕಷ್ಟವಾಗಿರುವ ಬಗ್ಗೆ ಲಜ್ನಾದಿಂದ ವರದಿ ಬಂದಿದ್ದು ಅದನ್ನು ಲಜ್ನಾದವರು ನನಗೆ ತಿಳಿಸಿರಲಿಲ್ಲ ಆದರೆ ನಮ್ಮ ಎಂ.ಟಿ.ಎ ಯ ಭಾಷಾಂತರ ವಿಭಾಗದವರು ಅನುವಾದ ಸರಿಯಾಗಿ ಆಗಿಲ್ಲ ಎಂದರು. ನಂತರ, ಹೊರಗಿನಿಂದ ಬಂದ ಕೆಲವು ಅತಿಥಿಗಳು ಅನುವಾದದ ಕೊರತೆಯಿಂದ ನಾವು ಖುತ್ಬವನ್ನು ಕೇಳಲು ಸಾಧ್ಯವಾಗಲಿಲ್ಲ ಎಂದು ದೂರಿದರು. ಅದರಲ್ಲೂ ಪುರುಷರ ಭವನದಲ್ಲಿ ಧ್ವನಿ ಸಮಸ್ಯೆ ಹೆಚ್ಚಾಗಿದ್ದು, ಈ ಬಗ್ಗೆ ಜಲ್ಸದಲ್ಲೂ ಆಡಳಿತದ ಗಮನ ಸೆಳೆಯುತ್ತಿದ್ದೇನೆ. ಜಲ್ಸ ಸಾಲಾನ ಅಧಿಕಾರಿಗಳು ಹಾಗೂ ಜಲ್ಸ ಸಭಾಂಗಣದ ಅಧಿಕಾರಿಗಳು ಇದಕ್ಕೆ ಹೊಣೆಯಾಗಿರುತ್ತಾರೆ ಅದೇ ರೀತಿ ಧ್ವನಿ ವಿಭಾಗದ ಉಸ್ತುವಾರಿ ವಹಿಸುವವರು ಹೊಣೆಯಾಗಿರುತ್ತಾರೆ. ಜನರು ಇಲ್ಲಿ ಜಲ್ಸಾ ಕೇಳಲು ಆಗಮಿಸಿರುತ್ತಾರೆ. ಅವರಿಗೆ ಕೇಳಲು ಸರಿಯಾದ ವ್ಯವಸ್ಥೆ ಇಲ್ಲದಿದ್ದರೆ, ಜಲ್ಸದ ಆಯೋಜನೆಯಿಂದ ಏನು ಪ್ರಯೋಜನ! ಉಳಿದಂತೆ ಆಡಳಿತಾತ್ಮಕ ವಿಷಯಗಳಲ್ಲಿ ಲೋಪಗಳನ್ನು ಸಹಿಸಿಕೊಳ್ಳಬಹುದು, ಆದರೆ ಜಲ್ಸವನ್ನು ಆಲಿಸುವ ವ್ಯವಸ್ಥೆಯಲ್ಲಿ ಯಾವುದೇ ಲೋಪವನ್ನು ಸಹಿಸಲಾಗುವುದಿಲ್ಲ.

ಇದು ಜನರು ಬಂದು ಒಟ್ಟುಸೇರಲು ನಡೆಸಲಾಗುವ ಯಾವುದೇ ಮೇಳವಲ್ಲವೆಂದು ಹಝ್ರತ್ ಮಸೀಹ್ ಮೌಊದ್ ಅಲಯಹಿಸ್ಸಲಾಮ್ ಹೇಳಿರುವರು. (ಶಹಾದತುಲ್ ಖುರ್‌ಆನ್, ರೂಹಾನಿ ಖಝಾಇನ್, ಸಂಪುಟ–6, ಪುಟ–395) ಆದರೆ ಸದ್ದು ಇಲ್ಲದ ಕಾರಣ ಕೆಲವೆಡೆ ಹಿಂಭಾಗದ ಪರಿಸ್ಥಿತಿಯೂ ಮೇಳದಂತೆ ನಿರ್ಮಾಣವಾಗಿತ್ತು. ಕೆಲವರು ಅದನ್ನು ವಿಡಿಯೋ ಮಾಡಿದ್ದಾರೆ, ನಾನು ಸಹ ಅದನ್ನು ನೋಡಿದ್ದೇನೆ. ಅಲ್ಲಿ ಜಲ್ಸದ ವಾತಾವರಣ ಇರಲಿಲ್ಲ. ನನ್ನ ಅಂದಾಜಿನ ಪ್ರಕಾರ ಜಲ್ಸ ಸರಿಯಾಗಿ ಕೇಳದ ಜನ ಕನಿಷ್ಠ ಏಳೆಂಟು ಸಾವಿರ ಮಂದಿ ಇರಬಹುದು. ಆಡಳಿತವು ಜನರನ್ನು ಮಾತನಾಡಿಸಲು ದೂಷಿಸುತ್ತದೆ, ಆದರೆ ನನ್ನ ಪ್ರಕಾರ ಜಲ್ಸಗಾಹ್‌ನ ಅಧಿಕಾರಿಗಳು ಮತ್ತು ಧ್ವನಿ ವಿಭಾಗದ ವ್ಯವಸ್ಥಾಪಕರು ಮತ್ತು ತರಬೇತಿ ವಿಭಾಗದ ವ್ಯವಸ್ಥಾಪಕರು ಜವಾಬ್ದಾರರಾಗಿದ್ದರು ಮತ್ತು ಅವರು ಅದನ್ನು ಪರಿಶೀಲಿಸಬೇಕಾಗಿತ್ತು. ಈ ಪರಿಸ್ಥಿತಿಯನ್ನು ನೋಡಿ ನನಗೆ ನಾಚಿಕೆಯಾಗುತ್ತದೆ, ಅವರಿಗೂ ನಾಚಿಕೆಯಾಗಿರಬಹುದು ಎಂದು ನಾನು ಭಾವಿಸುತ್ತೇನೆ. ಜನರು ಮಾತನಾಡುತ್ತಿದ್ದರು ಎಂದಾದರೆ ಅದು ತರಬೇತಿಯ ಕೊರತೆಯಾಗಿದೆ. ಮಿಶನರಿ ಇಂಚಾರ್ಜ್ ಮತ್ತು ಮುರಬ್ಬಿಗಳು ಇದಕ್ಕೆ ಜವಾಬ್ದಾರರು. ಅವರು ವರ್ಷ ಪೂರ್ತಿ ಜನರ ತರಬೇತಿ ಏಕೆ ಮಾಡಲಿಲ್ಲ? ಜನರನ್ನು ಆರೋಪಿಸಬೇಡಿರಿ.

ಅಹ್ಮದಿಯರಿಗೆ ಗಮನ ಸೆಳೆದರೆ, ಅವರು ಸಾಮಾನ್ಯವಾಗಿ ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆ, ಮತ್ತು ಈ ಜನರು ಜಲ್ಸಾಗೆ ಆಗಮಿಸಿದ್ದರು ಅವರಿಗೆ ಇತ್ತ ಕಡೆ ಗಮನ ಸೆಳೆಯುತ್ತಿದ್ದರೆ ಅವರು ಅವಶ್ಯಕವಾಗಿ ಇತ್ತ ಕಡೆ ಗಮನ ನೀಡುತ್ತಿದ್ದರು. ಆದಾಗ್ಯೂ, ಇದು ತಮ್ಮದೇ ಆದ ದೋಷಗಳನ್ನು ಹೊಂದಿತ್ತು, ಇದು ಇತರ ದೋಷಗಳಿಗೆ ಕಾರಣವಾಯಿತು.

ಎಲ್ಲಿ ಅಧಿಕಾರಿಗಳು ವಿನಯ ಮತ್ತು ಪರಿಶ್ರಮದಿಂದ ಕೆಲಸ ಮಾಡುತ್ತಾರೋ ಅಲ್ಲಿ ಎಲ್ಲ ವಿಭಾಗಗಳು ಉತ್ತಮವಾಗಿರುತ್ತವೆ, ಇಲ್ಲದಿದ್ದರೆ ಕಾರ್ಯಕರ್ತರು ಉತ್ತಮವಾಗಿ ಕೆಲಸ ಮಾಡಲು ಬಯಸಿದರೂ ಕೂಡ ಅಧಿಕಾರಿಯ ಕಾರಣದಿಂದ ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಹಾಗಾಗಿ ಕಾರ್ಮಿಕರ ಬಗ್ಗೆ ನನಗೆ ಅನುಮಾನವಿಲ್ಲ. ಹೀಗಾಗಿ ನಾನು ಪ್ರತಿಯೊಂದು ಖಾದಿಮ್, ಪ್ರತಿಯೊಂದು ನಾಸಿರ್ ಮತ್ತು ಲಜ್ನಾದ ಪ್ರತಿಯೊಬ್ಬ ಸದಸ್ಯರಿಗೂ ಕೃತಜ್ಞತೆ ಸಲ್ಲಿಸುತ್ತೇನೆ, ಆದರೆ ಅವರ ಅಧಿಕಾರಿಗಳು ಅವರ ಸುಧಾರಣೆಯತ್ತ ಗಮನ ಹರಿಸಬೇಕು.

ಈ ಬಾರಿ ಪುರುಷರಿಗೆ ಹೋಲಿಸಿದರೆ ಮಹಿಳೆಯರ ವಿಭಾಗದಲ್ಲಿ ಶಿಸ್ತು ಇತ್ತು. ಪುರುಷರ ತರಬೇತಿ ವಿಭಾಗ ಈ ಬಗ್ಗೆ ಚಿಂತಿಸಬೇಕು.

ಪ್ರಗತಿ ಹೊಂದುವ ಸಮುದಾಯಗಳು ತಮ್ಮ ಕೊರತೆಗಳ ಬಗ್ಗೆ ದೃಷ್ಟಿ ಇರಿಸಿದರೆ ಮಾತ್ರ ಯಶಸ್ಸು ಗಳಿಸುವುವು. ಎಲ್ಲವೂ ಸರಿಯಾಗಿವೆ ಎಂದು ಹೇಳಿಕೊಂಡು ಅಭಿವೃದ್ಧಿಯ ಮಾರ್ಗವನ್ನು ಮುಚ್ಚಬೇಡಿರಿ. ಇದರಲ್ಲಿ ನಾಚಿಕೆಪಡಬೇಕಾದ ಅಗತ್ಯವಿಲ್ಲ. ವಿಭಾಗಗಳ ಅಧಿಕಾರಿಗಳಿಗೆ ತಮ್ಮ ಸುಧಾರಣೆ ಮಾಡಲು ಅಲ್ಲಾಹನು ಸೌಭಾಗ್ಯ ನೀಡಲಿ.

ಆದಾಗ್ಯೂ, ಈ ಎಲ್ಲ ಕೊರತೆಗಳು ಇದ್ದೂ ನಮ್ಮ ಮೇಲೆ ಅಲ್ಲಾಹನ ಔದಾರ್ಯವಿತ್ತು. ಅವನು ನಮ್ಮ ಕೊರತೆಗಳನ್ನು ಮರೆಮಾಚಿದನು ಮತ್ತು ಸಾಮಾನ್ಯವಾಗಿ ಜಲ್ಸಗಾಗಿ ಆಗಮಿಸಿದ ಅತಿಥಿಗಳು ಬಹಳವಾಗಿ ಪ್ರಭಾವಿತಗೊಂಡಿದ್ದರು. ಅತಿಥಿಗಳು ತಮ್ಮ ಅಸಾಧಾರಣವಾದ ಅನಿಸಿಕೆಗಳನ್ನು ಹೇಳಿದರು.

ಅಂತೆಯೇ, ಎಂ.ಟಿ.ಎ ಮುಖಾಂತರ ಜಲ್ಸವನ್ನು ತೋರಿಸಿದ ಜಗತ್ತಿನಲ್ಲಿ, ಅವರು ಸಾಮಾನ್ಯ ಪದಗಳಲ್ಲಿ ಜಲ್ಸವನ್ನು ಹೊಗಳಿದ್ದಾರೆ. ಈ ಸಮಯದಲ್ಲಿ ನಾನು ಕೆಲವು ಅತಿಥಿಗಳ ಅನಿಸಿಕೆಗಳನ್ನು ಸಹ ನಿಮ್ಮ ಮುಂದಿಡುತ್ತೇನೆ. ಶ್ರೇಷ್ಠ ವಿಚಾರಗಳನ್ನು ಸಾಮಾನ್ಯವಾಗಿ ವ್ಯಕ್ತಪಡಿಸಿದ್ದಾರೆ. ಈ ಜಲ್ಸದ ಕಾರಣದಿಂದ ಜನರಿಗೆ ಇಸ್ಲಾಮಿನ ನೈಜ ಪಾಠವನ್ನು ನೀಡಲು ಅಲ್ಲಾಹನು ಸೌಭಾಗ್ಯ ನೀಡಿದನು ಎಂಬುದಕ್ಕೆ ಜರ್ಮನಿಯ ಜಮಾಅತ್ ಅಲ್ಲಾಹನಿಗೆ ಬಹಳವಾಗಿ ಕೃತಜ್ಞತೆ ಅರ್ಪಿಸಬೇಕು.

ಬಲ್‌ಗಾರಿಯದ ವಕೀಲ್ ಮತ್ತು ಡಾಕ್ಟರೇಟ್ ಆಗಿರುವ ಕ್ರೈಸ್ತ ಮಹಿಳೆಯಾದ ವೀರೋನೀಕ ಸಾಹಿಬ ಹೇಳುತ್ತಾರೆ: ಬಹಳ ಅತ್ಯುತ್ತಮವಾಗಿ ಜಲ್ಸವನ್ನು ಜರುಗಿಸಲಾಗಿತ್ತು. ಯಾರ ಮುಖದಲ್ಲೂ ಗಾಬರಿ ಮತ್ತು ಆತಂಕ ಕಾಣುತ್ತಿರಲಿಲ್ಲ. ಎಲ್ಲಾ ಜನರು ತುಂಬಾ ಪ್ರಾಮಾಣಿಕವಾಗಿ ತೋರುತ್ತಿದ್ದರು ಮತ್ತು ಎಲ್ಲಾ ಸಮಯದಲ್ಲೂ ಯಾವುದೇ ರೀತಿಯಲ್ಲಿ ಸಹಾಯ ಮಾಡಲು ಸಿದ್ಧರಿದ್ದರು. ಪ್ರತಿಯೊಬ್ಬರು ತಮ್ಮ ಸ್ಥಿತಿಯ ಬಗ್ಗೆ ಕೃತಜ್ಞತೆ ಸಲ್ಲಿಸುತ್ತಿದ್ದರು. ಈ ಘಟನೆಯು ನನ್ನನ್ನು ಆಧ್ಯಾತ್ಮಿಕವಾಗಿ ಪುನರುಜ್ಜೀವನಗೊಳಿಸಿತು ಎಂಬುದರಲ್ಲಿ ಸಂದೇಹವಿಲ್ಲ. ಎಲ್ಲಾ ಸಂಘಟನೆಗಳು, ಪುರುಷರು, ಮಹಿಳೆಯರು, ಮಕ್ಕಳು ಸಹ ಸಂಘಟಿತರಾಗಿದ್ದರು. ಭಿನ್ನಾಭಿಪ್ರಾಯಗಳ ನಡುವೆಯೂ ಸಹಿಷ್ಣುತೆ ಮತ್ತು ಇತರರ ಸ್ವೀಕಾರದಂತಹ ಅನೇಕ ಆಸಕ್ತಿದಾಯಕ ವಿಷಯಗಳನ್ನು ನಾನು ಈ ದಿನಗಳಲ್ಲಿ ಅಹ್ಮದಿಯಾ ಜಮಾಅತ್ ಬಗ್ಗೆ ಕಲಿತಿದ್ದೇನೆ. ಬರ್ಲಿನ್ ಮಸೀದಿಯನ್ನು ಮಹಿಳೆಯರು ತಮ್ಮ ಸ್ವಂತ ಆಭರಣ ಮತ್ತು ಹಣದಿಂದ ನಿರ್ಮಿಸಿದ್ದಾರೆ ಎಂದು ತಿಳಿದು ನಾನು ಖಂಡಿತವಾಗಿಯೂ ಬಹಳ ಪ್ರಭಾವಿತಳಾಗಿದ್ದೇನೆ. ಮಹಿಳೆಯರ ನಿರ್ವಹಣೆಯೂ ಇಷ್ಟವಾಯಿತು. ನನಗೆ ಬಹಳಷ್ಟು ಅನ್ಯ ಜಲ್ಸಗಳಿಗೆ ಅವಕಾಶ ಲಭಿಸುತ್ತಿರುತ್ತದೆ ಆದರೆ ನಾನು ಇದನ್ನು ಬೇರೆಲ್ಲಿಯೂ ನೋಡಿಲ್ಲ ಎಂದು ನಾನು ಹೇಳಬಲ್ಲೆ. ಇಂತಹ ಉದಾಹರಣೆಯನ್ನು ಹೊಂದಿಸಲು ಕೆಲವರಿಗೆ ಮಾತ್ರ ಸಾಧ್ಯವಾಗುತ್ತದೆ. ನಂತರ

ನನ್ನ ಭಾಷಣಗಳ ಕುರಿತು ಅವರು ಹೇಳುತ್ತಾರೆ: ಆಧ್ಯಾತ್ಮ, ಮಾನವೀಯತೆ ಮತ್ತು ಶಾಂತಿಯ ವಿಚಾರಗಳು ನನ್ನ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ನಾವು ಮೊದಲು ಮನುಷ್ಯರು, ನಂತರ ದೇಶದ ನಾಗರಿಕರು ಮತ್ತು ನಂತರ ಧಾರ್ಮಿಕ ಸಮುದಾಯದ ಭಾಗವೆಂದು ನಾನು ನಂಬುತ್ತೇನೆ. ನಾವು ಪರಸ್ಪರ ಸಾಮಾನ್ಯ ವಿಷಯಗಳನ್ನು ಹುಡುಕಬೇಕು ಮತ್ತು ನಮ್ಮಲ್ಲಿ ಭಿನ್ನಭಿಪ್ರಾಯ ಹುಟ್ಟಿಸುವ ಮತ್ತು ನಮ್ಮನ್ನು ಪ್ರತ್ಯೇಕಿಸುವ ವಿಷಯಗಳಲ್ಲ.

ನಂತರ ಬಲ್ಗಾರಿಯಾದ ಕ್ರಿಶ್ಚಿಯನ್ ಮಹಿಳೆ ನಟಾಲಿಯಾ ಸಾಹಿಬಾ ಮೊದಲ ಬಾರಿ ಜಲ್ಸಕ್ಕೆ ಬಂಸಿದ್ದರು ಅವರು ಹೇಳುತ್ತಾರೆ: ಈ ಜಲ್ಸ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿರುವುದು. ಸಾವಿರಾರು ಮುಸ್ಲಿಮರು ಒಟ್ಟಾಗಿ ಆರಾಧನೆ ಮಾಡುವುದನ್ನು ಮೊದಲ ಬಾರಿಗೆ ಕಂಡೆ. ಇದು ಬಹಳ ಸುಂದರವಾದ ದೃಶ್ಯವಾಗಿತ್ತು. ನಾನು ಕ್ರಿಶ್ಚಿಯನ್ ಮತ್ತು ಮೊದಲ ಬಾರಿಗೆ ಇಂತಹ ಜಲ್ಸಾಗೆ ಸೇರಿದ್ದೇನೆ. ಎಲ್ಲಾ ಜನರು ನಮ್ಮನ್ನು ಅತ್ಯಂತ ವಿನಮ್ರಭಾವ ಮತ್ತು ಸೌಜನ್ಯದಿಂದ ನಡೆಸಿಕೊಂಡರು ಅದು ವಿಚಿತ್ರವಾದ ಸಂತೋಷವನ್ನು ನೀಡಿತು. ಜಲ್ಸದ ಅಂತಿಮ ಭಾಗವನ್ನು ನಾನು ನಿಜವಾಗಿಯೂ ಇಷ್ಟಪಟ್ಟೆ, ಅದರಲ್ಲಿ ಖಲೀಫಾ ವಕ್ತ್ ಅವರ ಭಾಷಣವು ತುಂಬಾ ಬೋಧಪ್ರದವಾಗಿತ್ತು. ಎಲ್ಲರೂ ನಮ್ಮನ್ನು ಎಷ್ಟು ವಿನಯದಿಂದ ನಡೆಸಿಕೊಳ್ಳುತ್ತಿದ್ದರು ಎಂಬುದೇ ನನಗೆ ಹೆಚ್ಚು ಪ್ರಭಾವಿತಗೊಳಿಸಿದೆ. ಯಾವುದೇ ಅತಿಥಿಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಕರ್ತವ್ಯದಲ್ಲಿದ್ದ ಜನರು ತಮ್ಮ ಕೈಲಾದಷ್ಟು ಪ್ರಯತ್ನಿಸುತ್ತಿದ್ದರು. ಮತ್ತೆ ಅವರು ಹೇಳುತ್ತಾರೆ: ಮೊದಲ ದಿನ ಅನುವಾದದ ವಿಷಯದಲ್ಲಿ ಸ್ವಲ್ಪ ತೊಂದರೆ ಅನುಭವಿಸಿದೆವು. ಅವರು ತುಂಬಾ ಮುಸುಕಿನ ಮಾತುಗಳಲ್ಲಿ ದೂರಿದರು, ಆದರೆ ಅವರು ಖುತ್‌ಬವನ್ನು ಕೇಳಲು ಸಾಧ್ಯವಾಗಲಿಲ್ಲ, ಅದನ್ನು ನಂತರ ಸರಿಪಡಿಸಲಾಯಿತು.

ಮತ್ತೆ ಮೆಸಿಡೋನಿಯಾದಿಂದ ಒಬ್ಬ ಅತಿಥಿ ಆಗಮಿಸಿದ್ದರು. ಓರ್ವ ಕ್ರಿಶ್ಚಿಯನ್ ಪತ್ರಕರ್ತರಾದ ಲ್ಜುಬಿನ್‌ಕ ಅಜ್ತೋವ್ಸಾಕ ಸಾಹಿಬ ಅವರು ಹೇಳುತ್ತಾರೆ: ಜಲ್ಸ ಸಾಲಾನದ ಸಂಘಟನೆಯು ಅತ್ಯಂತ ಉನ್ನತ ಮಟ್ಟದಲ್ಲಿತ್ತು. ವಿವಿಧ ಧರ್ಮಗಳು ಮತ್ತು ಸಮೂದಾಯಗಳ ಜನರು ಭಾಗವಹಿಸುವ ಇಂತಹ ದೊಡ್ಡ ಮತ್ತು ಸಂಘಟಿತ ಕಾರ್ಯಕ್ರಮದ ಭಾಗವಾಗಿರುವುದು ನನಗೆ ವಿಶೇಷ ಗೌರವವಾಗಿದೆ. ಪ್ರೀತಿಯಿಂದ ಮಾತ್ರ ಜಗತ್ತನ್ನು ಉತ್ತಮ ಸ್ಥಳವನ್ನಾಗಿ ಮಾಡಬಹುದು ಎಂಬ ಘೋಷಣೆಗೆ ಇದು ಪುಷ್ಠಿ.

ತದನಂತರ ಮೆಸಡೋನಿಯಾದಿಂದಲೇ ಆಗಮಿಸಿದ ಓರ್ವ ಮುಸ್ಲಿಮ್ ಪತ್ರಕರ್ತರಾದ ಸೇನದ್ ರಸಿಮೋವ್ ಅವರು ಹೇಳುತ್ತಾರೆ: ಖಲೀಫರ ವಿವಿಧ ವಿಷಯಗಳ ಬಗ್ಗೆ ಭಾಷಣಗಳು ನನ್ನ ಮೇಲೆ ಪ್ರಭಾವ ಬೀರಿದವು. ಮೆಸಿಡೋನಿಯಾದ ಪತ್ರಕರ್ತನಾಗಿ, ಜಲ್ಸದಲ್ಲಿ ಅನೇಕ ಅಹ್ಮದಿ ಮುಸ್ಲಿಮರೊಂದಿಗೆ ಮಾತನಾಡಲು ನನಗೆ ಅವಕಾಶ ಲಭಿಸಿತು, ಅವರೆಲ್ಲರು ಯಾವಾಗಲೂ ನನ್ನೊಂದಿಗೆ ನಗುಮುಖದಿಂದ ಮಾತನಾಡುತ್ತಿದ್ದರು. ನಾನು ಜಲ್ಸದ ಸ್ವಚ್ಛತೆ ಮತ್ತು ಎಲ್ಲಾ ಸಂಘಟನೆಯ ಬಗ್ಗೆ ತುಂಬಾ ಪ್ರಭಾವಿತನಾಗಿದ್ದೇನೆ. ನಿಮ್ಮ ಧ್ಯೇಯವಾಕ್ಯ ಪ್ರೀತಿ ಯಾರನ್ನೂ ದ್ವೇಷವಿಲ್ಲ ಯಾರಲ್ಲು ನಿಸ್ಸಂದೇಹವಾಗಿಯೂ ಎದ್ದು ಕಾಣುತ್ತಿತ್ತು ಮತ್ತು ಈ ಧ್ಯೇಯವಾಕ್ಯದೊಂದಿಗೆ ಶಾಂತಿ ನೆಲೆಸುತ್ತದೆ. ಕರ್ತವ್ಯ ನಿರ್ವಹಿಸುವವರಷ್ಟೇ ಅಲ್ಲ ಬದಲಿಗೆ ಜನರ ವರ್ತನೆಯೂ ಸಹ ಅತಿಥಿಗಳನ್ನು ಬಹಳವಾಗಿ ಆಕರ್ಷಿಸಿತು.

ಸ್ಲೋವಾಕಿಯಾದ ಮಹಿಳಾ ಶಿಕ್ಷಕಿ ಮಾರ್ಟಿನಾ ಸಾಹಿಬಾ ಹೇಳುತ್ತಾರೆ: ನಾನು ಮೊದಲ ಬಾರಿಗೆ ಜಲ್ಸಕ್ಕೆ ಸೇರಿದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಪ್ರಾಯಶಃ ಜಗತ್ತಿನಲ್ಲಿ ಬೇರೆಲ್ಲೂ ಕಾಣದ ಆತಿಥ್ಯದ ದೃಶ್ಯವನ್ನು ನಾನು ಕಣ್ಣಾರೆ ಕಂಡಿದ್ದೇನೆ. ಎಲ್ಲರೂ ಲವಲವಿಕೆಯಿಂದ ನಗುವ ಮುಖದಿಂದ ಭೇಟಿಯಾದರು. ಇಡೀ ಜಲ್ಸವು ನನ್ನ ಹೃದಯದ ಮೇಲೆ ಆಳವಾದ ಪ್ರಭಾವವನ್ನು ಬೀರಿತು ಮತ್ತು ವಿಶೇಷವಾಗಿ ಬೈಅತ್ ಮತ್ತು ನಮಾಝ್ ಸಮಯದಲ್ಲಿ ನನ್ನ ಭಾವನೆಗಳನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಬೈಅತ್ ಸಮಾರಂಭದುದ್ದಕ್ಕೂ ಅವರು ಅಳುತ್ತಿದ್ದರು. ಈ ಕ್ಷಣವನ್ನು ನನ್ನ ಜೀವನದುದ್ದಕ್ಕೂ ನಾನು ಮರೆಯುವುದಿಲ್ಲ, ಎಲ್ಲಾ ಅಹ್ಮದಿ ಖಲೀಫರ ಕೈಗಳ ಮೇಲೆ ಒಂದು ಜೀವವಾಗಿ ಬೈಅತ್‌ನಲ್ಲಿ ಸೇರಿದರು. ಅದೇ ರೀತಿ, ಅಹ್ಮದೀಯರ ಖಲೀಫಾ ಅವರೊಂದಿಗಿನ ಭೇಟಿಯನ್ನು ನಾನು ಎಂದಿಗೂ ಮರೆಯುವುದಿಲ್ಲ ಮತ್ತು ಒಂದು ದಿನದ ನಂತರವು ಸಹ ಈ ಭೇಟಿಯ ಪ್ರಭಾವ ನನ್ನ ಹೃದಯದ ಮೇಲೆ ಆವರಿಸಿತ್ತು. ನಾನು ಖಂಡಿತವಾಗಿಯೂ ಅವರನ್ನು ಇನ್ನೊಂದು ಬಾರಿ (ಅಂದರೆ ಖಲೀಫರಿಂದ) ಭೇಟಿಯಾಗಲು ಬಯಸುತ್ತೇನೆ ಮತ್ತು ಇಸ್ಲಾಂ ಧರ್ಮದ ಬಗ್ಗೆ ನೇರ ಮಾಹಿತಿ ಪಡೆಯಲು ಬಯಸುತ್ತೇನೆ ಎಂದು ಅವರು ಹೇಳುತ್ತಾರೆ. ಇವರ ಮುಸ್ಲಿಮರಲ್ಲ ಆದರೆ ಇದು ಅವರ ಮೇಲೆ ಪ್ರಭಾವ ಬೀರಿತು.

ಸ್ಲೋವಾಕಿಯಾದ ಅತಿಥಿ ಉದ್ಯಮಿ ಶ್ರೀ ಒಂಡ್ರಿಸ್ಕಾ ಸಾಹಿಬ್ ಹೇಳುತ್ತಾರೆ: ಜಲ್ಸ ಸಾಲಾನದ ಮೊದಲು, ನನಗೆ ಇಸ್ಲಾಂ ಧರ್ಮದ ಬಗ್ಗೆ ಏನೂ ತಿಳಿದಿರಲಿಲ್ಲ. ಮುಸ್ಲಿಮರು ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ತಮ್ಮ ದೇವರು ಎಂದು ನಂಬುತ್ತಾರೆ ಎಂದು ನಾನು ಭಾವಿಸಿದ್ದೆ ನೌಝುಬಿಲ್ಲಾಹ್. ಜಲ್ಸದಲ್ಲಿ ಭಾಗವಹಿಸಿ ನಾನು ಇಸ್ಲಾಂ ಧರ್ಮದ ಬೋಧನೆಯ ಪರಿಚಯವನ್ನು ಪಡೆದುಕೊಂಡೆ, ಸರ್ವಶಕ್ತನಾದ ಅಲ್ಲಾಹ್ ಮತ್ತು ಅಲ್ಲಾಹನ ಸಂದೇಶವಾಹಕರ(ಸ) ಅವರ ನಿಜವಾದ ಸ್ಥಾನಮಾನ ಮತ್ತು ಇಸ್ಲಾಂ ಧರ್ಮವು ನಿಜವಾಗಿಯೂ ಶಾಂತಿಯುತ ಧರ್ಮವಾಗಿದೆ ಮತ್ತು ಇಲ್ಲಿ, ವಿಶೇಷವಾಗಿ, ಮಾಧ್ಯಮಗಳು ಇಸ್ಲಾಂ ಧರ್ಮದ ಬಗ್ಗೆ ತಪ್ಪು ಅನಿಸಿಕೆಗಳನ್ನು ನೀಡುತ್ತದೆ ಎಂದು ಅರ್ಥವಾಯಿತು. ಈ ಇಡೀ ಸಭೆಯನ್ನು ಅಹ್ಮದಿಯರು ಸ್ವತಃ ಆಯೋಜಿಸುತ್ತಾರೆ ಮತ್ತು ಅವರು ಅತಿಥಿಗಳಿಗೆ ಎಷ್ಟು ಸಮರ್ಪಣೆ ಮತ್ತು ಉತ್ಸಾಹದಿಂದ ಸೇವೆ ಸಲ್ಲಿಸುತ್ತಾರೆ ಎಂಬುದು ನನಗೆ ಆಶ್ಚರ್ಯಕರವಾಗಿದೆ. ನಾನು ಕಾಲದ ಖಲೀಫರನ್ನು ನೋಡಿದಾಗ, ನನ್ನ ಹೃದಯದಲ್ಲಿ ಶಾಂತಿ ಮತ್ತು ನನ್ನ ಆತ್ಮದ ಮೇಲೆ ಸಕಾರಾತ್ಮಕ ಪರಿಣಾಮ ಬೀರಿತು ಎಂದು ಹೇಳುತ್ತಾರೆ. ಸರ್ವಶಕ್ತನಾದ ಅಲ್ಲಾಹನು ನನ್ನನ್ನು ಈ ಜಲ್ಸದಲ್ಲಿ ಸೇರಿಸಿದ್ದಾನೆ ಎಂದು ನನಗೆ ದೃಢವಾದ ನಂಬಿಕೆ ಇದೆ.

ನಂತರ ಸ್ಲೋವಾಕಿಯಾದ ಅತಿಥಿ, ಶ್ರೀ ಜುಡರ್ ಮಾರ್ಟಿನ್ (ವಿವಿಧ ದೇಶಗಳಿಂದ ಬಹಳಷ್ಟು ದೊಡ್ಡ ಗುಂಪುಗಳು ಬಂದವು) ಅವರು ಹೇಳುತ್ತಾರೆ: ನಾನು ಮೊದಲ ಬಾರಿಗೆ ಜಲ್ಸ ಸಲಾನದಲ್ಲಿ ಭಾಗವಹಿಸಿದ್ದೇನೆ. ಅಹ್ಮದೀಯರ ನೈತಿಕತೆ ಮತ್ತು ಆತಿಥ್ಯವನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ಜಲ್ಸ ಸಲಾನದಲ್ಲಿ ನಾನು ಬಹಳಷ್ಟು ಕಲಿತಿದ್ದೇನೆ. ಮುಸ್ಲಿಮರು ಮತ್ತು ವಿಶೇಷವಾಗಿ ಅಹ್ಮದಿಯರು ಶಾಂತಿಯುತರು ಮತ್ತು ಅವತು ತಮ್ಮ ಬೋಧನೆಗಳನ್ನು ಅನುಸರಿಸುವವರಗಿದ್ದಾರೆ. ಜಮಾಅತ್ ಸಿದ್ಧಪಡಿಸಿದ ಪ್ರದರ್ಶನವನ್ನು ನಾನು ಇಷ್ಟಪಟ್ಟೆ ಮತ್ತು ನಾನು ಇಸ್ಲಾಂ ಮತ್ತು ಅದರ ಸುಂದರವಾದ ಬೋಧನೆಗಳ ಬಗ್ಗೆ ಬಹಳಷ್ಟು ಕಲಿಯಲು ಅವಕಶ ಲಭಿಸಿತು. ಅಹ್ಮದೀಯರ ಖಲೀಫಾ ಅವರಿಗೆ ಸಂಬಂಧಿಸಿದಂತೆ, ಪ್ರತಿಯೊಬ್ಬ ಅಹ್ಮದಿಯು ಅವರನ್ನು ತುಂಬಾ ಪ್ರೀತಿಸುತ್ತಾರೆ ಮತ್ತು ಅವರು ಕೂಡ ಪ್ರೀತಿಸುತ್ತಾರೆ ಎಂದು ನಾನು ನೋಡಿದೆ. ಇಂತಹ ಭ್ರಾತೃತ್ವ ಮತ್ತು ಪ್ರೀತಿ ಜಗತ್ತಿನಲ್ಲಿ ಅಪರೂಪವಾಗಿ ಕಂಡುಬರುತ್ತದೆ.

ಪ್ರದರ್ಶನದಲ್ಲಿ ಮಾಡಿದ ಸರ್ಬಿಯಾ ಮತ್ತು ಬೋಸ್ನಿಯಾ ನಕ್ಷೆಯ ಬಗ್ಗೆ ನಾನು ಯೋಚಿಸುತ್ತೇನೆ, ಬಹುಶಃ ನಮ್ಮ ನಕ್ಷೆಯನ್ನು ಸರಿಯಾಗಿ ಮಾಡಲಾಗಿಲ್ಲ ಎಂದು ಸರ್ಬಿಯನ್ನರು ಸಹ ಅನುಮಾನಿಸುತ್ತಾರೆ. ಅಲ್ಲಿನ ಪ್ರದರ್ಶಕರು ಅದನ್ನು ಅರಿಶಿಲಿಸಬೇಕು.

ಅಲ್ಬೇನಿಯಾದ ಸಂದರ್ಶಕ ಪ್ರಾಧ್ಯಾಪಕ, ಟಿರಾನಾ ವಿಶ್ವವಿದ್ಯಾಲಯದ ನೈಸರ್ಗಿಕ ವಿಜ್ಞಾನಗಳ ಫ್ಯಾಕಲ್ಟಿಯಲ್ಲಿ ಪ್ರಾಧ್ಯಾಪಕರಾಗಿರುವ ಡಾ. ರಜೀಪ್ ಶಕೋರ್ತಿ ಸಾಹಿಬ್ ಅವರು ತಮ್ಮ ಪತ್ನಿಯೊಂದಿಗೆ ಜಲ್ಸದಲ್ಲಿ ಭಾಗವಹಿಸಿದ್ದರು ಅವರು ಹೇಳುತ್ತಾರೆ: ಜಲ್ಸವೂ ಬಹಳ ಅದ್ದೂರಿಯಾಗಿ ನಡೆದಿದೆ. ಇವರು ಮುಸ್ಲಿಮರಾಗಿದ್ದಾರೆ. ಹೇಳುತ್ತಾರೆ: ನಾನು ಹತ್ತು ವರ್ಷಗಳಿಂದ ಉಪವಾಸ ಮಾಡುತ್ತಿದ್ದೇನೆ ಮತ್ತು ನಾನು ಇಸ್ಲಾಂ ಧರ್ಮದ ಇತರ ನಿಯಮಗಳನ್ನು ಅನುಸರಿಸುತ್ತೇನೆ.

ನಾನು ಇಲ್ಲಿ ಜಲ್ಸದಲ್ಲಿ ಇಸ್ಲಾಂ ಧರ್ಮವನ್ನು ನೋಡಿದ್ದೇನೆ. ನಿಮ್ಮ ಮತ್ತು ಇತರ ಮುಸ್ಲಿಮರ ನಡುವಿನ ಸ್ಪಷ್ಟ ವ್ಯತ್ಯಾಸವೆಂದರೆ ಖಿಲಾಫತ್ ಆಗಿದೆ ಮತ್ತು ಇದರಿಂದಾಗಿ ನೀವು ಏಕತೆಯನ್ನು ಹೊಂದಿದ್ದೀರಿ.

ಅಲ್ಬೇನಿಯಾದ ಸಂದರ್ಶಕ ಮಹಿಳೆ ಎರ್ಮಿರಾ ಸಾಹಿಬ, ಅವರು ನರ್ಸ್ ಆಗಿದ್ದರು ಹೇಳುತ್ತಾರೆ: ಈ ಹಿಂದೆಯೂ ಸಹ ಜಲ್ಸದಲ್ಲಿ ಭಾಗವಹಿಸಿದ್ದೆ, ಈ ಬಾರಿಯೂ ಅದೇ ಆಧ್ಯಾತ್ಮಿಕ ಹಂಬಲದಿಂದ ಮತ್ತೆ ಜಲ್ಸಕ್ಕ ಆಗಮಿಸಿದ್ದೇನೆ. (ಹೀಗೆ ಅನ್ಯರಾಗಿದ್ದರೂ ಸಹ ಒಂದು ಸಲ ಜಲ್ಸಕ್ಕೆ ಆಗಮಿಸಿದ್ದರೆ ಮತ್ತೆ ಅಭ್ಯಾಸವಾಗುತ್ತದೆ) ಈ ಬಾರಿ ನಾನು ಮೋದಲ ಬಾರಿ ನಮಾಜನ್ನು ನಿರ್ವಹಿಸಿದೆ. ಆಕೆಗೆ ಒಬ್ಬ ಸ್ನೇಹಿತೆಯಿದ್ದಳು, ಅವಳು ನಮಾಝ್ ನಿರ್ವಹಿಸುತ್ತಿದ್ದನ್ನು ಕಂಡು ನಾನೂ ನಮಾಝ್ ನಿರ್ವಹಿಸಿದೆ. ಹೀಗೆ ಮೊದಲ ಬಾರಿಗೆ ನನ್ನ ಆತ್ಮದ ಪ್ರತಿಯೊಂದು ಕಣವೂ ಚಲಿಸಿದೆ ಎಂದು ಭಾಸವಾಯಿತು. ಅಳುತ್ತಾ ಸಜದ (ಸಾಷ್ಟಾಂಗದಲ್ಲಿ) ಮಾಡುತ್ತಾ ನನ್ನ ದ್ವೇಷವೆಲ್ಲ ಕರಗುತ್ತಿರುವಂತೆ ತೋರಿತು. ಸರ್ವಶಕ್ತನಾದ ಅಲ್ಲಾಹನು ನನ್ನ ನಂಬಿಕೆಯಲ್ಲಿ ನನಗೆ ಶಕ್ತಿಯನ್ನು ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ ಮತ್ತು ನಂತರ ಅವರು ನನ್ನೊಂದಿಗಿನ ಭೇಟಿಯನ್ನು ನಾನು ನೆನಪಿಸಿಕೊಳ್ಳುತ್ತೇನೆ ಎಂದು ಹೇಳುತ್ತಾರೆ.

ಹೀಗೆ, ಜಲ್ಸದ ವಾತಾವರಣದ ಪ್ರಭಾವವನ್ನು ಅನ್ಯರು ಸಹ ಪಡೆಯುತ್ತಾರೆ. ಅಹ್ಮದೀಯರು ಅದನ್ನು ತೆಗೆದುಕೊಳ್ಳದಿದ್ದರೆ ಹೇಗೆ? ಆದ್ದರಿಂದ, ಅಧಿಕಾರಿಗಳು ಅಹ್ಮದೀಯರ ಬಗ್ಗೆ ಅನುಮಾನಗಳನ್ನು ಹೊಂದಿದ್ದರೆ, ಅವರು ಸರಿಯಾದ ತಿದ್ದುಪಡಿ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಮೊದಲು ನಿಮ್ಮ ತಿದ್ದುಪಡಿ, ನಿಮ್ಮ ಮಾದರಿ. ನಂತರ ಜನರಿಗೆ ವಿವರಿಸಿ.

ಅಲ್ಬೇನಿಯಾದ ಸಂದರ್ಶಕ ಮಹಿಳೆ ಡ್ರಿಟ್ ಶ್ಕುರ್ತಿ ಸಾಹಿಬಾ ಹೈಸ್ಕೂಲ್‌ನಲ್ಲಿ ಶಿಕ್ಷಕಿಯಾಗಿದ್ದಾರೆ ಅವರು ಹೇಳುತ್ತಾರೆ: ಜಲ್ಸದ ಏರ್ಪಾಡುಗಳ ಬಹಳ ಉತ್ತಮವಾಗಿದ್ದವು. ನಾನು ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದೇನೆ

ಮತ್ತು ಇಂದಿನ ಮಕ್ಕಳು ಎಷ್ಟು ಆಕ್ರಮಣಕಾರಿ ಎಂದು ನನಗೆ ತಿಳಿದಿದೆ, ಆದರೆ ಇಲ್ಲಿ ಮಕ್ಕಳೂ ತಮ್ಮ ಕರ್ತವ್ಯದಲ್ಲಿ ಮುಳುಗಿಹೋಗುವಷ್ಟು ನಿರತರಾಗಿದ್ದರು. (ಅತ್‌ಫಾಲ್‌ಗಳು, ಮಕ್ಕಳು ಸಹ ಉತ್ತಮ ಉದಾಹರಣೆಗಳನ್ನು ತೋರಿಸಿದರು ಮತ್ತು ತಬ್ಲೀಗ್‌ನ ಮಾರ್ಗವನ್ನು ತೆರೆದರು) ಇದು ನನಗೆ ತುಂಬಾ ಆಶ್ಚರ್ಯಕರವಾಗಿತ್ತು ಎಂದು ಅವರು ಹೇಳುತ್ತಾರೆ. ಜಲ್ಸಾದ ಸಮಯದಲ್ಲಿ ಸಮಾನ್ಯ ಡೈನಿಂಗ್ ಹಾಲ್ ಕಡೆಗೆ ನನ್ನ ಕುತೂಹಲ ಕರೆದೊಯ್ಯಿತು. ಅಲ್ಲಿಯೂ ಸಹಸ್ರಾರು ಮಂದಿ ಗಂಡಸರು ಊಟ ಮಾಡುತ್ತಿದ್ದುದನ್ನು ಕಂಡೆನಾದರೂ ಜಗಳ, ಕಿತ್ತುಕೊಳ್ಳುವಿಕೆ ಇತ್ಯಾದಿಗಳು ಎಲ್ಲೂ ಕಾಣಲಿಲ್ಲ. ಎಲ್ಲಾ ಕೆಲಸ ಮಾತ್ರ ಗೊತ್ತಿರುವ ಜೇನ್ನೊಣಗಳು ಎಂದು ಅನಿಸಿತು. ಜನರು ಯಾವುದಕ್ಕೂ ಸಿದ್ಧರಿದ್ದರು ಮತ್ತು ನೈತಿಕತೆಯು ತುಂಬಾ ಹೆಚ್ಚಿತ್ತು, ಅವರನ್ನು ಸ್ವಲ್ಪ ತಳ್ಳಿದರೂ, ಅವರು ತಕ್ಷಣ ಕ್ಷಮಿಸಿ ಎಂದು ಹೇಳುತ್ತಿದ್ದರು.

ಅಲ್ಬೇನಿಯಾದ ಅತಿಥಿಯಾದ Xhaferr Kuci ಅವರು ಅರ್ಥಶಾಸ್ತ್ರದಲ್ಲಿ ತಮ್ಮ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ್ದಾರೆ ಮತ್ತು ನಾಲ್ಕು ವರ್ಷಗಳ ಸಂಶೋಧನೆಯ ನಂತರ ಬೈಅತ್ ಮಾಡಿದ್ದಾರೆ. ಈ ಜಲ್ಸವು ತಮಗೆ ಸ್ಫೂರ್ತಿದಾಯಕವಾಗಿತ್ತು ಎನ್ನುತ್ತಾರೆ. ಸಾಕಷ್ಟು (Positive Energy) ಧನಾತ್ಮಕ ಶಕ್ತಿಯನ್ನು ನೀಡಿದೆ. ಜಲ್ಸಾಗಾಹ್‌ದಲ್ಲಿ ಖಲೀಫಾ ವಕ್ತ್ ಅವರೊಂದಿಗೆ ನಮಝಿನ ಸಮಯದಲ್ಲಿ ನನ್ನ ಕಣ್ಣೀರನ್ನು ನಿಯಂತ್ರಿಸಲು ನನಗೆ ಸಾಧ್ಯವಾಗಲಿಲ್ಲ ಮತ್ತು ಬೈಅತ್ ಸಮಾರಂಭವು ತುಂಬಾ ಭಾವನಾತ್ಮಕವಾಗಿತ್ತು ಮತ್ತು ನಾನು ಯಾವಾಗಲೂ ಖಲೀಫಾ ವಕ್ತ್ ಅವರೊಂದಿಗೆ ಸುರಕ್ಷಿತವಾಗಿ ಕುಳಿತಿದ್ದೇನೆ ಮತ್ತು ಖಲೀಫಾ ವಕ್ತ್ ಅವರೇ ನನ್ನ ಆತ್ಮೀಯ ಬಂಧು ಎಂದು ನಾನು ಅರಿತುಕೊಂಡೆ. ಇದರ ಹೊರತಾಗಿ ನನಗೆ ಇಷ್ಟವಾಗದ ಒಂದು ವಿಷಯ ಜನರಿಗೆ ಸಂಬಂಧಿಸಿದ್ದು ಎನ್ನುತ್ತಾರೆ. ಜನರೂ ಇದನ್ನು ಗಮನಿಸಬೇಕು. ಅದೇನೆಂದರೆ ಜಲ್ಸದಲ್ಲಿ ಹಲವು ಬಾರಿ ಭಾಷಣ ಮುಗಿಯುವ ಮುನ್ನವೇ ಕೆಲವರು ಎದ್ದು ಹೋಗುತ್ತಿದ್ದರು. ಆದ್ದರಿಂದ ನವಅಹ್ಮದಿಯರ ಮೇಲೆ ನಕಾರಾತ್ಮಕ ಪರಿಣಾಮ ಬೀರದಂತೆ ನಾವು ಕಾಳಜಿ ವಹಿಸಬೇಕು.

ಬೋಸ್ನಿಯಾದ ಇತಿಹಾಸ ಪ್ರಾಧ್ಯಾಪಕ ಹಾರಿಸ್ ಸಾಹಿಬ್ ಹೇಳುತ್ತಾರೆ: ಜಲ್ಸಕ್ಕೆ ಬರುವ ಮೊದಲು, ಸಾವಿರಾರು ಜನರು ಸೇರುತ್ತಾರೆ ಮತ್ತು ಖಲೀಫಾರವರು ನಮ್ಮನ್ನು ಉದ್ದೇಶಿಸಿ ಮಾತನಾಡುತ್ತಾರೆ ಎಂದು ನನಗೆ ತಿಳಿದಿತ್ತು. ನಾನು ಸ್ವಲ್ಪ ಭಯಭೀತನಾಗಿದ್ದೆ ಮತ್ತು ಕೆಲವು ಮೀಸಲಾತಿಗಳನ್ನು ಹೊಂದಿದ್ದೆ. ಅವರಿಗೆ ಎಲ್ಲದರ ಬಗ್ಗೆಯೂ ಸಂಶಯವಿತ್ತು. ಏಕೆಂದರೆ ಅಹ್ಮದೀಯರ ಬಗ್ಗೆ ಇಷ್ಟು ವಿಶಾಲವಾದ ಸಭೆ ಮತ್ತು ಅವರ ಧಾರ್ಮಿಕ ಆಚರಣೆಗಳ ವಿವರಗಳು ನನಗೆ ತಿಳಿದಿರಲಿಲ್ಲ ಮತ್ತು ಮೂಲಭೂತ ವಿಷಯಗಳ ಬಗ್ಗೆ ನನಗೆ ಗೊಂದಲವಾಯಿತು. ನಂತರ ಅವರು ಹೇಳುತ್ತಾರೆ, ಇದು ನನ್ನ ಆಲೋಚನೆಯಾಗಿತ್ತು ಮತ್ತು ನಾನು ಬಂದಾಗ ಏನಾಯಿತು, ಇಂತಹ ಒಳ್ಳೆಯ ಜನರೊಂದಿಗೆ ಸಮಯ ಕಳೆಯಲು ನನಗೆ ಎಂದಿಗೂ ಅವಕಾಶ ಲಭಿಸಲಿಲ್ಲ. ಜಲ್ಸದಲ್ಲಿ ಎಲ್ಲವನ್ನೂ ಯೋಜಿಸಲಾಗಿತ್ತು, ನೀವು ಏನು ಯೋಚಿಸಿದ್ದೀರಿ, ನೀವು ಏನು ನೋಡಿದ್ದೀರಿ? ಉತ್ತಮ ಕಾರ್ಯ ಯೋಜನೆಗಳು. ಎಲ್ಲರೂ ಅವರವರ ಕೆಲಸದಲ್ಲಿ ತೊಡಗಿದ್ದರು. ಉತ್ತಮ ಸಂಸ್ಥೆ ಮತ್ತು ಸುಂದರವಾಗಿ ಆಯೋಜಿಸಲಾಗಿದೆ. ಅವರು ಮುಂದೆ ಹೇಳುತ್ತಾರೆ: ಖಲೀಫಾ ಅವರ ಮೊದಲ ಭಾಷಣದ ನಂತರ ನನ್ನ ಮನಸ್ಸು ಸ್ಪಷ್ಟವಾಯಿತು. ನಾನು ಜನರನ್ನು ಅವರು ಹೇಗೆ ಮಾತನಾಡುತ್ತಾರೆ ಮತ್ತು ಅವರು ಏನು ಹೇಳುತ್ತಾರೆ ಎಂದು ನಾನು ಅವರನ್ನು ಹಿಂಬಾಲಿಸುತ್ತಿದ್ದೆ. ಅವರ ಪರಸ್ಪರ ಸಂಬಂಧ ಹೇಗಿತ್ತು? ನಾನು ನನ್ನನ್ನು ಮುಸ್ಲಿಂ ಸಹೋದರರ ಮಧ್ಯದಲ್ಲಿ ಸುರಕ್ಷಿತವಾಗಿದ್ದೇನೆ ಎಂದು ಅರ್ಥವಾಯಿತು. ಯಾರೂ ನನ್ನ ಬಗ್ಗೆ ಕೆಟ್ಟದಾಗಿ ಮಾತನಾಡಲಿಲ್ಲ, ಅಸೂಯೆಯಿಂದ ಅಥವಾ ಅನ್ಯತೆಯಿಂದ ನೋಡಲಿಲ್ಲ ಅಥವಾ ಯಾವುದಕ್ಕೂ ನನ್ನನ್ನು ಟೀಕಿಸಲಿಲ್ಲ ಎಂದು ನಾನು ಭಾವಿಸಿದೆ. ನನ್ನ ಜೀವನದಲ್ಲಿ ಹಿಂದೆಂದೂ ಅನುಭವಿಸದ, ಹೆಮ್ಮೆ ಪಡುವ ಮತ್ತು ವಿಶಿಷ್ಟವಾದ ವಿಷಯ ಎಂದರೆ ಆ ಸಮಯದಲ್ಲಿ ಖಲೀಫರೊಂದಿಗೆ ಭೇಟಿಯಾಗಿತ್ತು, ಆದರೆ ನನ್ನ ಬೆನ್ನಿನಿಂದ ಕಲ್ಲು ಇಳಿಸಿದಂತೆ ನನಗೆ ಸಮಾಧಾನವಾಯಿತು. ನಾನು ಚಿಂತಿತನಾಗಿದ್ದೆ ಆದರೆ ಈಗ ನಾನು ಚಿಂತಿಸುತ್ತಿಲ್ಲ. ನಾನು ಸಂತೃಪ್ತಿಯಿಂದ ಹಿಂದಿರುಗುತ್ತಿದ್ದೇನೆ ಮತ್ತು ನಾನು ಭೇಟಿಯಾದ ಹೊಸ ಮತ್ತು ಒಳ್ಳೆಯ ವ್ಯಕ್ತಿಗಳಿಂದ ಜ್ಞಾನದಿಂದ ಸಮೃದ್ಧವಾಗಿದೆ.

ರೆಡ್‌ಕ್ರಾಸ್‌ನ ಕಾರ್ಯದರ್ಶಿಯಾಗಿರುವ ಬೋಸ್ನಿಯಾದ ಮಹಿಳೆ ಇಂದಿರಾ ಹೈದರ್ ಸಾಹಿಬ ಹೇಳುತ್ತಾರೆ: ನನ್ನೊಂದಿಗೆ ಭೇಟಿಯಾದ ಬಗ್ಗೆ ಹೇಳುತ್ತಾರೆ, ಅವರೊಂದಿಗೆ ನಾನು ಫ್ರಾಂಕ್‌ಫರ್ಟ್‌ನಲ್ಲಿ ಭೇಟಿಯಾದೆ ಮತ್ತು ಆ ಭೇಟಿಯೂ ಬಹಳ ಸಂತೋಷದಾಯಕವಾಗಿತ್ತು ಅದು ಏಕೆ ಎಂದರೆ ನೀವು ಬಹಳ ಉತ್ತಮವಗಿ ಮಾತನಾಡುತ್ತೀರಿ. ಖಲೀಫಾ ವಕ್ತ್ ಅವರನ್ನು ನೇರವಾಗಿ ಕೇಳುವ ಅವಕಾಶ ನನಗೆ ಲಭಿಸಿತು. ಅವರು ಹೇಳುತ್ತಾರೆ: ಅಹ್ಮದಿಯಾ ಜಮಾಅತ್ ಮತ್ತು ಹ್ಯುಮ್ಯಾನಿಟಿ ಫರ್ಷ್ಟ್ ಹಲವಾರು ಕಷ್ಟಗಳ ನಡುವೆಯೂ, ಅವರು ನಮ್ಮ ದೇಶದಲ್ಲಿ ಜನರ ಸೇವೆ ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದಾರೆ, ತಮ್ಮ ಸ್ವಯಂಸೇವಕರಲ್ಲಿ ಮನುಕುಲದ ನಿಸ್ವಾರ್ಥ ಸೇವೆಯ ಮನೋಭಾವಕ್ಕೆ ಕಾರಣ ಖಿಲಾಫತ್ ಮಾತ್ರ ಆಗಿದೆ ಎಂದು ನನಗೆ ಮನವರಿಕೆಯಾಗಿದೆ. ಮತ್ತು ಇದು ಸತ್ಯಸಂಗತಿಯಾಗಿದೆ.

ಮತ್ತು ನಂತರ ಅವರು ಅಹ್ಮದೀಯ ಜಮಾಅತ್ ಏಕತೆಯ ಹೋರಾಟದಲ್ಲಿ ಪ್ರಪಂಚದ ವಿವಿಧ ಭಾಗಗಳ ವಿವಿಧ ಜನರನ್ನು ಹೇಗೆ ಪ್ರೇರೇಪಿಸಿದೆ ಎಂದು ಹೇಳುತ್ತಾರೆ. ಈ ಅನುಭವವು ಎಲ್ಲಾ ಮನುಕುಲವನ್ನು ಒಂದೇ ಉಮ್ಮಾ ಮಾಡುವಲ್ಲಿ ಹೇಗೆ ಧೈರ್ಯಶಾಲಿಯಾಗಬೇಕು ಮತ್ತು ಜಗತ್ತನ್ನು ಉತ್ತಮ ಸ್ಥಳವನ್ನಾಗಿ ಮಾಡಲು ನನ್ನ ಪಾತ್ರವನ್ನು ಹೇಗೆ ಮಾಡಬೇಕೆಂಬುದರ ಬಗ್ಗೆ ನನ್ನ ತಿಳುವಳಿಕೆಯನ್ನು ಹೆಚ್ಚಿಸಿದೆ ಎಂದು ನಾನು ಭಾವಿಸಿದೆ. ಈ ಅವಕಾಶವು ಮುಸ್ಲಿಂ ಎಂಬ ನನ್ನ ಹೆಮ್ಮೆಯನ್ನು ಬಲಪಡಿಸಿತು, ಆದರೆ ಮಾನವೀಯ ಪ್ರಯತ್ನಗಳಲ್ಲಿ ಮತ್ತು ಅಂತರ್ಧರ್ಮೀಯ ಸಂವಾದದ ಪ್ರಚಾರದಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ನನ್ನನ್ನು ಪ್ರೇರೇಪಿಸಿತು.

ಬೋಸ್ನಿಯಾದ ಮಹಿಳಾ ಅತಿಥಿ ಅಮಿನಾ ಸಾಹಿಬಾ ಅವರು ಹೇಳುತ್ತಾರೆ: ಸ್ವಯಂಸೇವಕರ ಸಂಘಟನೆ ತುಂಬಾ ಚೆನ್ನಾಗಿತ್ತು. ಮಹಿಳಾ ವಿಭಾಗದಲ್ಲಿ ಭಾಷಾಂತರ ಸಮಸ್ಯೆಯಿಂದ ಮಹಿಳಾ ವಿಭಾಗದಲ್ಲಿ ಭಾಷಾಂತರ ಇಲ್ಲದ ಕಾರಣ ಕೆಲವು ಕಾರ್ಯಕ್ರಮಗಳನ್ನು ಅನುಸರಿಸಲು ಸಾಧ್ಯವಾಗಲಿಲ್ಲ. (ಇದು ಕೂಡ ನಾನು ಆರಂಭದಲ್ಲಿ ಹೇಳಿದ ಮಾತನ್ನು ದೃಢೀಕರಿಸುತ್ತದೆ) ಖಲೀಫಾ ವಕ್ತ್ ಅವರ ಭಾಷಣವನ್ನು ನಮ್ಮ ಮಹಿಳಾ ಗುಂಪಿನ ನಾಯಕಿ ನನಗೆ ಅನುವಾದಿಸಿದ್ದಾರೆ. ಕಾರ್ಯಕ್ರಮವು ಯಾವಾಗಲೂ ಪವಿತ್ರ ಖುರ್‌ಆನ್‌ನ ಪಠಣ ಮತ್ತು ಅದರ ಭಾಷಾಂತರದೊಂದಿಗೆ ಪ್ರಾರಂಭವಾಗುವುದನ್ನು ನಾನು ಇಷ್ಟಪಟ್ಟಿದ್ದೇನೆ. ಮುಂದೆ ಅವರು ಹೇಳುತ್ತಾರೆ: ಖಲೀಫರ, ಮುಸ್ಲಿಮರು ತಮ್ಮನ್ನು ತಾವು ಹೆಚ್ಚು ವಿದ್ಯಾಭ್ಯಾಸ ಮಾಡಲು ಮತ್ತು ತಮ್ಮ ಜ್ಞಾನವನ್ನು ಕರ್ಯರೂಪಕ್ಕೆ ತರಲು ಸಲಹೆ ನೀಡಿದ್ದಾರೆ. ಉಮ್ಮಾದ ಪ್ರಸ್ತುತ ಪರಿಸ್ಥಿತಿಯನ್ನು ಬದಲಾಯಿಸಲು ಇದು ಏಕೈಕ ಮಾರ್ಗವಾಗಿದೆ.

ಎರಡನೆ ದಿನ ಭಾಷಾಂತರಕ್ಕೆ ತೊಂದರೆ ಆದ ಕಾರಣದಿಂದ ನಮ್ಮ ಮಹಿಳೆಯರು ಪುರುಷ ವಿಭಾಗಕ್ಕೆ ಹೋಗಿ ತರ್ಜುಮೆ ಕೇಳಿದರು. ಮತ್ತು ಅವರು ಹೇಳುತ್ತಾರೆ: ಅಂದಾಗ (ನಾನು ಹೇಳಿದ್ದು) ಮಹಿಳೆಯರ ಸಭಾಂಗಣದಲ್ಲಿದ್ದರು, ಆದಗ್ಯೂ ಅವರು ಹೇಳುತ್ತರೆ ಮಹಿಳೆಯರ ಸಭಾಂಗಣದಲ್ಲಿ ನಡೆದ ಭಾಷಣವು ಬಹಳ ಉತ್ತಮವಾಗಿತ್ತು ಮತ್ತು ಅದರಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಕಲಘಟ್ಟದ ಮಹಳೆಯರ ಉದಾಹರಣೆಗಳಿದ್ದವು ಅದು ನನಗೆ ಬಹಳ ಇಷ್ಟವಾಯಿತು. ನಂತರ ಭಾನುವಾರದ ಕಾರ್ಯಕ್ರಮದಲ್ಲಿ ಮೂಲ ಇಸ್ಲಾಮಿಕ್ ತತ್ವಗಳು ಮತ್ತು ಇತರರ ಹಕ್ಕುಗಳನ್ನು ರಕ್ಷಿಸುವ ಬಗ್ಗೆಯೂ ಮಾತನಾಡಿದರು. ನಾವು ಎಲ್ಲದರಲ್ಲೂ ಉತ್ತಮವಾಗಿರಬೇಕು, ಈ ವಿಷಯವು ನನ್ನ ಮೇಲೆ ದೊಡ್ಡ ಪ್ರಭಾವ ಬೀರಿತು ಮತ್ತು ನಾವು ನ್ಯಾಯವನ್ನು ಪಾಲಿಸಿದರೆ ನಾವು ಪ್ರಗತಿ ಹೊಂದುತ್ತೇವೆ ಮತ್ತು ಸಮಾಜದಲ್ಲಿ ಶಾಂತಿ ನೆಲೆಸುತ್ತದೆ, ಅವರು ನನಗೆ ದಾರಿದೀಪವಾಗಿದ್ದಾರೆ.

ಜಾರ್ಜಿಯಾದ ಮಹಿಳೆ ಲಿಯಾ ಸಾಹಿಬಾ ಹೇಳುತ್ತಾರೆ: ನಾನು ಪ್ರಸ್ತುತ ನೆದರ್ಲ್ಯಾಂಡ್ಸ್‌ನಲ್ಲಿ ದೇವತಾಶಾಸ್ತ್ರ ಮತ್ತು ಧಾರ್ಮಿಕ ಅಧ್ಯಯನದಲ್ಲಿ ಸ್ನಾತಕೋತ್ತರ ಮಾಡುತ್ತಿದ್ದೇನೆ. ಜಾರ್ಜಿಯಾದಲ್ಲಿ ವಾಸಿಸುತ್ತಿದ್ದಾರೆ. ತಾನು ಮೊದಲ ಬಾರಿಗೆ ಜಲ್ಸವನ್ನು ನೋಡಿದೆ ಎಂದು ಅವರು ಹೇಳುತ್ತಾರೆ. ಹೇಗೆ ಹಿರಿಯರು ಮತ್ತು ಕಿರಿಯರು ತಮ್ಮ ಸೇವೆಗಳನ್ನು ವಿಶೇಷ ಉತ್ಸಾಹದಿಂದ ನೀಡುತ್ತಿದ್ದಾರೆ. ಜಾಗತಿಕ ಬೈಅತ್ ಅನ್ನು ನೋಡಿದ ನಂತರ ಭಾವನೆಗಳನ್ನು ನಿಯಂತ್ರಣಕ್ಕೆ ತರಲಾಗಲಿಲ್ಲ. ಜಲ್ಸದ ಕೊನೆಯ ದಿನದಂದು, ಭವಿಷ್ಯದಲ್ಲಿ ಇಸ್ಲಾಂ ಧರ್ಮದ ಪ್ರಕಾರ ನಮ್ಮ ಜೀವನವನ್ನು ನಾವು ರೂಪಿಸಿಕೊಳ್ಳುತ್ತೇವೆ ಎಂಬ ಭರವಸೆಯನ್ನು ಎಲ್ಲರಿಂದಲೂ ತೆಗೆದುಕೊಳ್ಳಲಾಯಿತು. ಈ ಬಯತ್‌ನಿಂದ ಅವರು ಈ ಪಾಠವನ್ನು ಕಲಿತಿದ್ದಾರೆ. ಅಹ್ಮದಿಯಾ ಜಮಾತ್‌ನ ಖಲೀಫಾ ಅವರು (ಖಲ್ಮಿ ಜಿಹಾದ್) ಲೇಖನೀಯ ಜಿಹಾದ್ ಪರಿಕಲ್ಪನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ ಎಂಬ ಮಹತ್ವದ ವಿಷಯ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದೆ ಎಂದು ಅವರು ಹೇಳುತ್ತಾರೆ, ಅದನ್ನು ನಾನು ನೂರು ಪ್ರತಿಶತ ದೃಢೀಕರಿಸುತ್ತೇನೆ.

ಇಸ್ಲಾಂ ಧರ್ಮದ ಬೋಧನೆಗಳನ್ನು ಹರಡಲು ಇಸ್ಲಾಂ ಮಹಿಳೆಯರನ್ನು ಪ್ರೋತ್ಸಾಹಿಸುತ್ತದೆ ಎಂದು ನಾನು ಇಷ್ಟಪಡುತ್ತೇನೆ. ಭವಿಷ್ಯದಲ್ಲಿ ಜಗತ್ತು ಇಸ್ಲಾಮಿನ ಬಗ್ಗೆ ಯೋಚಿಸುತ್ತದೆ ಮತ್ತು ಅದರ ಮೂಲಕ ಜನರು ತಮ್ಮ ದೇವರ ಬಗ್ಗೆ ಜಾಗೃತರಾಗುತ್ತಾರೆ ಎಂದು ನಾನು ದೃಢವಾಗಿ ನಂಬುತ್ತೇನೆ.

ಜಾರ್ಜಿಯಾದಿಂದ ಓರ್ವ ಸುನ್ನಿ ವಿದ್ವಾಂಸ ಶ್ರೀ ವೀಸೆಲ್ ಬಂದಿದ್ದರು ಅವರು ಹೇಳುತ್ತಾರೆ: ನಾನು ಜಾರ್ಜಿಯಾದಲ್ಲಿ ವಾಸಿಸುತ್ತಿದ್ದೇನೆ. ಹದಿನೈದನೆಯ ವಯಸ್ಸಿನಲ್ಲಿ ನಾನು ಕ್ರಿಶ್ಚಿಯನ್ ಧರ್ಮವನ್ನು ತೊರೆದು ಇಸ್ಲಾಂ ಧರ್ಮವನ್ನು ಸ್ವೀಕರಿಸಿದೆ. ಅದರ ನಂತರ ನಾನು ಮದೀನಾದಲ್ಲಿ ಸುಮಾರು ಹದಿನೈದು ವರ್ಷಗಳನ್ನು ಕಳೆದಿದ್ದೇನೆ, ನಾನು ಮದೀನಾದಲ್ಲಿ ಇಸ್ಲಾಂ ಮತ್ತು ಅರೇಬಿಕ್

ಭಾಷೆಯ ಜ್ಞಾನವನ್ನು ಕಲಿತಿದ್ದೇನೆ. ನನ್ನ ಅಧ್ಯಯನದ ಸಮಯದಲ್ಲಿ ನಾನು ನಿಮ್ಮ ಜಮಾಅತ್ ಬಗ್ಗೆ ನಕಾರಾತ್ಮಕ ವಿಷಯಗಳನ್ನು ಕೇಳಿದೆ, ಅಹ್ಮದಿಯರು ನಮ್ಮನ್ನು ಕಾಫಿರ್ (ನಾಸ್ತಿಕರು) ಎಂದು ಕರೆಯುತ್ತಾರೆ ಮತ್ತು ಅಹ್ಮದೀಯರು ವಿಭಿನ್ನ ನಂಬಿಕೆ ಹೊಂದಿದ್ದಾರೆ. ಅವರು ಹೇಳುತ್ತಾರೆ, ಜಾರ್ಜಿಯಾದಲ್ಲಿ ನಾನು ನಿಮ್ಮ ಜಮಾಅತ್‌ನ ಮಿಷನರಿಯನ್ನು ಭೇಟಿ ಮಾಡಿದ್ದೇನೆ ಮತ್ತು ಅಹ್ಮದಿಯಾ ಜಮಾಅತ್‌ನ ಪರಿಚಯವನ್ನೂ ಪಡೆದಿದ್ದೇನೆ. ಖುರ್ಬಾನಿಯ ಮಾಂಸವನ್ನು ಬೇರೆ ಬೇರೆ ಗ್ರಾಮಗಳಲ್ಲಿ ಹಂಚಿದ್ದೀರಿ. ನಮ್ಮನ್ನು ಸಂಪರ್ಕಿಸಿ, ಸಹಾಯ ಮಾಡಿದ್ದೀರಿ. ನಂತರ ಅವರ ಬಗ್ಗೆ ಬರೆದಿದ್ದಾರೆ ಅವರು ಜಲ್ಸಕ್ಕೆ ಬರುವ ಮೊದಲು ಜಾಮಮಿಯಾ ಅಲ್‌ಅಝ್‌ಹರ್‌ನಿಂದ ಜಮಾಅತ್‌ನ ಬಗ್ಗೆ ಫತ್ವಗಳನ್ನು ನೋಡಿದೆ ಅಂದರೆ ಅಹ್ಮದಿಯರ ಬಳಿ ಹೋಗುತ್ತಿದ್ದೇನೆ, ಜಾಮಿಯಾ ಅಝ್‌ಹರ್ ಏನು ಹೇಳುತ್ತಾರೆ? ಅವರು ಹೇಳುತ್ತಾರೆ ನಾನು ಜಮಾಅತ್ ಬಗ್ಗೆ ಎಲ್ಲಾ ಉಮ್ಮತ್–ಎ–ಇಸ್ಲಾಮಿಯಾ ಅವರ ಅಭಿಪ್ರಾಯಗಳನ್ನು ನಾನು ಓದಿದ್ದೇನೆ. ಎಲ್ಲಾ ಫತ್ವಾಗಳನ್ನು ನೋಡಿದ ನಂತರ ನಾನು ಅಹ್ಮದಿಯಾ ಜಮಾಅತ್ ಅನ್ನು ಹತ್ತಿರದಿಂದ ನೋಡಬೇಕೆಂದು ನಿರ್ಧರಿಸಿದೆ. ಜನರು ಕಾಫಿರ್ (ನಾಸ್ತಿಕರು) ಎಂದು ಹೇಳುತ್ತಾರೆ, ಅವರು ಏನೆಂದು ನಾನು ನೋಡುತ್ತೇನೆ. ನಂತರ ಜಲ್ಸಕ್ಕೆ ಬಂದು ಜಮಾಅತ್ ಅನ್ನು ಹತ್ತಿರದಿಂದ ನೋಡಿ ಅಹ್ಮದಿಯಾ ಜಮಾಅತ್ ಖಂಡಿತವಾಗಿಯೂ ಇಸ್ಲಾಮಿನ ಭಾಗವಾಗಿದೆ ಎಂದು ಹೇಳಿದರು. ನಾನು ಖಲೀಫಾ ಅವರ ಭಾಷಣಗಳನ್ನು ಎಚ್ಚರಿಕೆಯಿಂದ ಆಲಿಸಿದ್ದೇನೆ ಮತ್ತು ನಿಮ್ಮನ್ನು ನಾಸ್ತಿಕರು ಎಂದು ಕರೆಯುವುದು ಸಂಪೂರ್ಣವಾಗಿ ತಪ್ಪು ಎಂಬ ತೀರ್ಮಾನಕ್ಕೆ ಬಂದಿದ್ದೇನೆ ಎಂದು ಅವರು ಹೇಳುತ್ತಾರೆ. ನೀವು ಇತರ ಪಂಗಡಗಳಂತೆ ಇಸ್ಲಾಮಿನ ಒಂದು ಪಂಗಡ.

ಅವರು ಹೇಳುತ್ತಾರೆ: ನಾನು ಖಲೀಫಾರನ್ನು ತುಂಬಾ ಗೌರವಿಸುತ್ತೇನೆ. ಜಲ್ಸದ ಮೂರು ದಿನಗಳಲ್ಲಿ ವಿವಿಧ ಸಭೆಗಳಲ್ಲಿ ಪರಿಹರಿಸಲಾದ ಹಲವಾರು ಪ್ರಶ್ನೆಗಳು ನನ್ನ ಮನಸ್ಸಿನಲ್ಲಿದ್ದವು. ನಿಮ್ಮ ಜಮಾಅತ್ ಮತ್ತು ನಿಮ್ಮ ಸ್ಥಾಪಕರ ಬಗ್ಗೆ ವಿವರವಾಗಿ ಮಾತನಾಡಲು ಅವಕಾಶ ಲಭಿಸಿತು. ನಾನು ಜಾರ್ಜಿಯಾಕ್ಕೆ ಹಿಂತಿರುಗುತ್ತೇನೆ ಮತ್ತು ನಿಮ್ಮ ಜಮಾಅತ್‌ನ ವಿವಿಧ ಪುಸ್ತಕಗಳನ್ನು ಅಧ್ಯಯನ ಮಾಡಲು ಪ್ರಾರಂಭಿಸುತ್ತೇನೆ. ನಿಮ್ಮ ಭೇಟಿಯಿಂದ ನನಗೆ ಸಂತಸವಾಗಿದೆ.

ನಂತರ ಡೆಕ್ಕನ್ ಪುರಸಭೆಯ ಅಧಿಕೃತ ಶಿಕ್ಷಣ ನಿರ್ದೇಶಕರಾಗಿರುವ ಕೊಸೊವೊದ ಅತಿಥಿ ಅವರು ಹೇಳೂತ್ತಾರೆ: ಜಲ್ಸಾದ ದಿನಗಳಲ್ಲಿ ನಾನು ಉಪನ್ಯಾಸಗಳನ್ನು ಕೇಳುತ್ತಿದ್ದೆ, ನಾನು ಕಲಿತ ವಿಷಯಗಳು ಯಾವಾಗಲೂ ನನ್ನ ನೆನಪಿನಲ್ಲಿ ಉಳಿಯುತ್ತವೆ. ಈ ಜಲ್ಸದ ಬಗ್ಗೆ ಕೊಸೊವೊದಲ್ಲಿನ ನನ್ನ ಸ್ನೇಹಿತರು ಮತ್ತು ಸಹೋದ್ಯೋಗಿಗಳಿಗೆ ಹೇಳಲು ನಾನು ಉತ್ಸುಕನಾಗಿದ್ದೇನೆ. ನಿರ್ದಿಷ್ಟವಾಗಿ ಹೇಳುವುದಾದರೆ, ನಾನು ಸಮಯದ ಖಲೀಫರ ಬೋಧನೆಗಳನ್ನು ಅನುಸರಿಸುತ್ತೇನೆ. ಇದಲ್ಲದೆ, ನನ್ನ ಸಹೋದ್ಯೋಗಿಗಳು ಮತ್ತು ನಾನು ಅನುಭವಿಸಿದ ಅಸಾಮಾನ್ಯ ಮತ್ತು ಪ್ರೀತಿಯ ಆತಿಥ್ಯವು ನಮ್ಮ ಹೃದಯದಲ್ಲಿ ಶಾಶ್ವತವಾಗಿ ಉಳಿಯುತ್ತದೆ. ಅಲ್ಲಾಹನು ನಿಮ್ಮೆಲ್ಲರಿಗೂ ಬಹಳಷ್ಟು ಸಂತೋಷವನ್ನು ನೀಡಲಿ.

ನಂತರ ಕೊಸೊವೊದ ಅತಿಥಿ, ಶ್ರೀ ಅವ್ನಿ ಜಶರಿ ಸಾಹಿಬ್, ಲಿಪ್ಜಾನ್ ಪುರಸಭೆಯ ಮೇಯರ್ ಕ್ಯಾಬಿನೆಟ್ ಮುಖ್ಯಸ್ಥರಾಗಿದ್ದಾರೆ ಅವರು ಹೇಳುತ್ತಾರೆ: ಇದು ನನಗೆ ಅಸಾವಾನ್ಯ ಮತ್ತು ನಿಜವಾಗಿಯೂ ಸ್ಫೂರ್ತಿದಾಯಕ ಅನುಭವವಾಗಿದೆ. ನಾನು ಖಲೀಫರ ಪ್ರವಚನಗಳು ಮತ್ತು ಇತರ ಭಾಷಣಗಳನ್ನು ಆಲಿಸಿದೆ ಮತ್ತು ನನ್ನೊಂದಿಗೆ ಶಾಶ್ವತವಾಗಿ ಉಳಿಯುವ ಆಸಕ್ತಿದಾಯಕ ಮತ್ತು ಸ್ಫೂರ್ತಿದಾಯಕ ಮಾಹಿತಿಯ ಸಂಪತ್ತನ್ನು ಪಡೆದುಕೊಂಡೆ. ಈ ಅನುಭವವು ನನ್ನ ಮೇಲೆ ಆಳವಾದ ಪ್ರಭಾವ ಬೀರಿದೆ ಎಂದು ನಾನು ಒತ್ತಿ ಹೇಳಲು ಬಯಸುತ್ತೇನೆ. ನನಗೆ ಜಲ್ಸಾವು ಜ್ಞಾನದ ಜಗತ್ತಿನಲ್ಲಿ ಸಹಕಾರ ಮತ್ತು ಸಹೋದರತ್ವವನ್ನು ಬೆಳೆಸುವ ಉದ್ಯಾನವನವಾಗಿದೆ ಮತ್ತು ಅದೇ ಸಮಯದಲ್ಲಿ ಜಮಾಅತ್ ಅಹ್ಮದಿಯಾ ಹೇಗೆ ಸಮಾಜಕ್ಕೆ ಪ್ರಯೋಜನವನ್ನು ತರಲು ಯೋಜಿಸುತ್ತಿದೆ ಮತ್ತು ಉಪಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂಬುದನ್ನು ನಿಮ್ಮ ಸಮುದಾಯದ ಅನುಕರಣೀಯ ಕೆಲಸ ಮತ್ತು ನಿರಂತರ ಪ್ರಯತ್ನಗಳನ್ನು ಪ್ರದರ್ಶಿಸಲು ಇದು ಒಂದು ಅವಕಾಶವಾಗಿದೆ ಎಂದು ಹೇಳುತ್ತಾರೆ.

ಕೊಸೊವೊದ ಮೇಯರ್ ಎಲೆಜ್ ಹಾನ್ ಶ್ರೀ ಮೆಹ್ಮೆಟ್ ಹೇಳುತ್ತಾರೆ: ಈ ಅಸಾಧಾರಣ ಜಲ್ಸವು ನನ್ನ ಮೇಲೆ ಆಳವಾದ ಪ್ರಭಾವ ಬೀರಿತು ಮತ್ತು ಕೂಟದ ಪ್ರತಿಯೊಂದು ಅಂಶವನ್ನು ವ್ಯಾಪಿಸಿರುವ ಏಕತೆ, ಶಾಂತಿ ಮತ್ತು ಸಹೋದರತ್ವದ ಮನೋಭಾವದಿಂದ ನಾನು ಆಳವಾಗಿ ಪ್ರಭಾವಿತನಾಗಿದ್ದೇನೆ. ಕಾರ್ಯಕ್ರಮದ ಭಾಷಣಗಳು ತುಂಬಾ ಚೆನ್ನಾಗಿದ್ದವು. ವಿಶೇಷವಾಗಿ ಖಲೀಫಾ ವಕ್ತ್ ಅವರ ಭಾಷಣವು ನನಗೆ ಅದ್ಭುತ ಮತ್ತು ನಂಬಿಕೆ–ಸ್ಫೂರ್ತಿದಾಯಕವಾಗಿತ್ತು. ನಾನು ಈಗ ಇಸ್ಲಾಂ ಅನ್ನು ಅದರ ನಿಜವಾದ ಅರ್ಥದಲ್ಲಿ ಅರ್ಥಮಾಡಿಕೊಂಡಿದ್ದೇನೆ. ವ್ಯವಸ್ಥಾಪಕರ ಆತಿಥ್ಯವನ್ನು ನಾನು ಪ್ರಶಂಸಿಸಲೇಬೇಕು ಮತ್ತು ಎಲ್ಲರೂ ತುಂಬಾ ಆತಿಥ್ಯವನ್ನು ತೋರಿಸಿದರು.

ತಜಕಿಸ್ತಾನದ ಸ್ನೇಹಿತ ಆಝ್ಝಾ ಕರೀಮ್ ಸಾಹಿಬ್. ಈ ಸ್ನೇಹಿತರು ಅರೇಬಿಕ್ ಮತ್ತು ತಾಜಿಕ್ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುತ್ತಾರೆ ಮತ್ತು ಜಾಮಿಯಾ ಅಝ್‌ಹರ್‌ನಲ್ಲಿ ಶಿಕ್ಷಣ ಪಡೆದಿದ್ದಾರೆ. ಅವರು ಅನೇಕ ಅರೇಬಿಕ್ ಪುಸ್ತಕಗಳನ್ನು ತಾಜಿಕ್ ಭಾಷೆಗೆ ಅನುವಾದಿಸಿದ್ದಾರೆ ಮತ್ತು ಅನೇಕ ತಾಜಿಕ್ ಪುಸ್ತಕಗಳ ಲೇಖಕರಾಗಿದ್ದಾರೆ. ಜಲ್ಸವನ್ನು ಬಹಳ ಜಾಗರೂಕತೆಯಿಂದ ಆಲಿಸಿ ಜನರನ್ನು ನೋಡಿದ್ದೇನೆ ಮತ್ತು ಇತರ ಧರ್ಮೀಯ ಪಕ್ಷಗಳಲ್ಲಿ ಈಗ ಕಣ್ಮರೆಯಾಗುತ್ತಿರುವ ಅಹ್ಮದಿಯಾ ಜಮಾಅತ್‌ನ ಗುಣಲಕ್ಷಣಗಳನ್ನು ನಾನು ಉಲ್ಲೇಖಿಸುತ್ತೇನೆ ಮತ್ತು ಅಹ್ಮದೀಯರ ಉನ್ನತ ನೈತಿಕತೆಯಾಗಿದೆ ಎಂದು ಹೇಳಿದರು.

(ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯು ಹೆಚ್ಚಿನ ನೈತಿಕತೆಯನ್ನು ತೋರಿಸಬೇಕು) ನಾನು ಅನೇಕ ಇಸ್ಲಾಮಿಕ್ ಪಂಥಗಳಲ್ಲಿ ಸಂಶೋಧನೆ ಮಾಡಿದ್ದೇನೆ. ಉಳಿದೆಲ್ಲ ಪಂಗಡಗಳು ಪ್ರಸ್ತುತ ಶೇಕಡ ಒಂದರಷ್ಟು ಇಸ್ಲಾಂ ಧರ್ಮವನ್ನು ಅನುಸರಿಸುತ್ತಿದ್ದರೆ, ಈ ಜಮಾಅತೆ ಇಸ್ಲಾಂ ತನ್ನ ತೊಂಬತ್ತೊಂಬತ್ತು ಪ್ರತಿಶತ ಬೋಧನೆಗಳನ್ನು ಅನುಸರಿಸುತ್ತಿದೆ. ಬುಕ್ ಸ್ಟಾಲ್‌ನಲ್ಲಿ ವಿವಿಧ ಭಾಷೆಗಳಲ್ಲಿನ ಸಾಹಿತ್ಯವು ನಿಮ್ಮ ತಬ್ಲೀಗ್‌ನ ಪ್ರಯತ್ನಗಳಿಗೆ ಪುರಾವೆಯಾಗಿದೆ. ನಾನು ಸಂಪರ್ಕದಲ್ಲಿರುತ್ತೇನೆ ಮತ್ತು ಜಮಾಅತ್ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಬಯಸುತ್ತೇನೆ ಎಂದು ಹೇಳುತ್ತಾರೆ. ನಾನು ದೇವರನ್ನು ಹೊರತುಪಡಿಸಿ ಯಾರಿಗೂ ಹೆದರುವುದಿಲ್ಲ. ಮತ್ತು ಖಲೀಫಾ ವಕ್ತ್ ಅವರೊಂದಿಗಿನ ಭೇಟಿಯನ್ನು ನಾನು ತುಂಬಾ ಇಷ್ಟಪಟ್ಟೆ. ನಿಜವಾದ ದೌರ್ಬಲ್ಯ ನಮ್ಮ ಜನರಲ್ಲಿದೆ ಮತ್ತು ನಾವು ಯಾವಾಗಲೂ ಸರ್ಕಾರ ಮತ್ತು ಆಡಳಿತವನ್ನು ಶಪಿಸುತ್ತೇವೆ ಎಂದು ಖಲೀಫಾ ವಕ್ತ್ ಅವರೊಂದಿಗೆ ನಾನು ಒಪ್ಪುತ್ತೇನೆ. ನಾನು ಮತ್ತೊಮ್ಮೆ ಭೇಟಿಯಾಗುತ್ತೇನೆ ಮತ್ತು ಪ್ರಯೋಜನವನ್ನು ಪಡೆದುಕೊಳ್ಳುತ್ತೇನೆ ಎಂದು ಅವರು ಹೇಳುತ್ತಾರೆ.

ತಜಕಿಸ್ತಾನದ ನಿಯೋಗದಲ್ಲಿ ಸೇರಿರುವ ಪಕ್ಷೇತರ ತಾಜಿಕ್ ಸ್ನೇಹಿತ ಹೇಳಿದರು: ಖಲೀಫಾ ವಕ್ತ್ ಅವರೊಂದಿಗಿನ ಭೇಟಿಯ ಸಂದರ್ಭದಲ್ಲಿ ತಜಕಿಸ್ತಾನದ ರಾಜಕೀಯ ಸಮಸ್ಯೆಗಳು ಮತ್ತು ಧಾರ್ಮಿಕ ನಿರ್ಬಂಧಗಳ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಅವರು ಎಲ್ಲಾ ಮಾನವೀಯತೆಯ ಬಗ್ಗೆ ತುಂಬಾ ಕಾಳಜಿ ವಹಿಸುತ್ತಾರೆ ಎಂದು ನಾನು ಪ್ರೀತಿಸುತ್ತೇನೆ. ಬರುವ ಮೊದಲು ನನಗೆ ಅಹ್ಮದಿಯಾ ಜಮಾಅತ್ ಬಗ್ಗೆ ನಕಾರಾತ್ಮಕ ಸುದ್ದಿಗಳನ್ನು ನೀಡಲಾಯಿತು, ಆದರೆ ನಿಮ್ಮ ಜಮಾಅತ್‌ನಿಂದ ಸಹೋದರತ್ವ ಮತ್ತು ಮಾನವೀಯತೆಯ ಪಾಠವನ್ನು ಕಲಿಯಲು ನನಗೆ ಅವಕಾಶ ಲಭಿಸಿತು ಎಂದು ಅವರು ಹೇಳುತ್ತಾರೆ.

ತಾಜಿಕ್ ನಿಯೋಗವು ತುಂಬಾ ಒಪ್ಪದ ಸ್ವಭಾವದ ಸ್ನೇಹಿತನನ್ನು ಒಳಗೊಂಡಿತ್ತು ಎಂದು ತಾಜಿಕ್ ಮುಬಲ್ಲಿಗ್ ಬರೆಯುತ್ತಾರೆ. ಜಲ್ಸದ ಮೊದಲ ಎರಡು ದಿನಗಳಲ್ಲಿ ಅವರು ಆಕ್ಷೇಪಣೆಯನ್ನು ಮುಂದುವರೆಸಿದರು. ಒಂದು ಆಕ್ಷೇಪಣೆ ಮತ್ತು ಉತ್ತರವನ್ನು ಕೇಳದೆ, ಅವರು ಮತ್ತೊಂದು ಆಕ್ಷೇಪಣೆಯನ್ನು ಎತ್ತುತ್ತಿದ್ದರು. ನಾವು ಗಮನಿಸಬೇಕು, ನೋಡಬೇಕು, ಆಕ್ಷೇಪಿಸಬೇಡಿ ಎಂದು ಅವರ ಓರ್ವ ಸ್ನೇಹಿತರು ಹೇಳಿದರು. ಆದರೆ, ಜಲ್ಸದ ಎರಡನೇ ದಿನ ನಿಯೋಗಗಳು ನನ್ನೊಂದಿಗೆ ಭೇಟಿ ನೀಡಿದವು. ನಾನು ಅವರನ್ನು ಭೇಟಿಯಾದಾಗ, ನಾನು ಅವರೊಂದಿಗೆ ಮಾತನಾಡಲು ಪ್ರಾರಂಭಿಸಿದೆ ಮತ್ತು ಅವರನ್ನು ಪರಿಚಯಿಸಿದೆ. ಅವರು ಮಾಸ್ಕ್ ಹಾಕಿಕೊಂಡಿದ್ದರು, ನಾನು ಅದನ್ನು ತೆಗೆಯಿರಿ, ನಿಮ್ಮ ಮುಖವನ್ನು ತೋರಿಸಿ ಎಂದು ಹೇಳಿದೆ. ಅವರೊಂದಿಗೆ ವಿವರಾತ್ಮಕ ಮಾತುಗಳು ನಡೆಯಿತು. ಆದಾಗ್ಯೂ, ಮುರಬ್ಬಿ ಸಾಹಿಬ್ ಹೇಳುತ್ತಾರೆ: ಅವರು ಭೇಟಿಯ ನಂತರ, ನಾನು ಖಲೀಫಾ ಅವರನ್ನು ಭೇಟಿಯಾಗಿದ್ದೇನೆ ಎಂದು ಬಹಳ ಸಂತೋಷವನ್ನು ವ್ಯಕ್ತಪಡಿಸಿದರು ಮತ್ತು ನಂತರ ಅವರು ನನಗಾಗಿ ಪ್ರಾರ್ಥಿಸುವುದನ್ನು ಮುಂದುವರೆಸಿದರು, ಅವರು ಹೇಳಿದರು, ಆದರೆ ಎರಡು ದಿನಗಳ ನಂತರ ಅವರು ಯಾವ ಆಕ್ಷೇಪಣೆಯನ್ನು ಎತ್ತಲಿಲ್ಲ ಇದು ವಿಚಿತ್ರವಾಗಿತ್ತು. ಮತ್ತು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅವರ ಮನಸ್ಸಿನಿಂದ ಆಕ್ಷೇಪಣೆಗಳು ಕಣ್ಮರೆಯಾಗುವಷ್ಟು ಶುದ್ಧವಾಯಿತು.

ಜಲ್ಸ ಸಾಲಾನಕ್ಕೆ ಸೇರಿದ ಕೆಲವು ಅರಬ್ ಗೆಳೆಯರ ಅನಿಸಿಕೆಗಳಿವು. ಓರ್ವ ಅತಿಥಿ ಮುಹಮ್ಮದ್ ಅಲಿ ಸಾಹಿಬ್ ಇದ್ದಾರೆ, ಸೀರಿಯಾದವರಾಗಿದ್ದಾರೆ ಅವರು ಹೇಳುತ್ತಾರೆ: ನನ್ನ ಸ್ನೇಹಿತರೊಬ್ಬರ ಮೂಲಕ ನನಗೆ ಅಹ್ಮದೀಯ ಪರಿಚಯವಾಯಿತು. ನನ್ನ ಸ್ನೇಹಿತ ನನ್ನನ್ನು ಜಲ್ಸ ಸಾಲಾನಕ್ಕೆ ಕರೆತಂದನು, ನಾನು ದಿನವನ್ನು ಕಳೆದು ಸಂಜೆ ಮನೆಗೆ ಹಿಂದಿರುಗುವ ಉದ್ದೇಶವನ್ನು ಹೊಂದಿದ್ದೆ, ಏಕೆಂದರೆ ಇಲ್ಲಿ ಉಳಿಯಲು ಸ್ಥಳವು ಆರಾಮದಾಯಕವಿರಲಿಲ್ಲ. ಮನೆಯೂ ಸಹ ಹತ್ತಿರದಲ್ಲಿತ್ತು. ನಾನು ವಾತಾವರಣ ಮತ್ತು ಸಂಘಟನೆಯನ್ನು ನೋಡಿದಾಗ, ಎಲ್ಲರೂ ನಗುತ್ತಿದ್ದರು ಮತ್ತು ತುಂಬಾ ಒಳ್ಳೆಯ ಮನಸ್ಥಿತಿಯಲ್ಲಿದ್ದರು ಒಬ್ಬರಿಗೊಬ್ಬರು ತಿಳಿದಿರುವ ಹಾಗೆ. ನನ್ನ ಜೀವನದಲ್ಲಿ ಇಂತಹ ವಾತಾವರಣವನ್ನು ನೋಡಿಲ್ಲ ಎಂದು ಅವರು ಹೇಳುತ್ತಾರೆ, ನಾನು ನನ್ನ ಮನಸ್ಸನ್ನು ಬದಲಾಯಿಸಿದೆ ಮತ್ತು ನಾನು ಜಲ್ಸದಲ್ಲಿ ಇಲ್ಲಿ ನೆಲದ ಮೇಲೆಯೇ ಮಲಗುತ್ತೇನೆ ಎಂದು ನಾನು ಭಾವಿಸಿಕೊಂಡೆ. ಚಾಪೆಗಳನ್ನು ಕೆಳಗೆ ಹಾಕಿದರೂ

ಪರವಾಗಿಲ್ಲ ನಾನು ಇಲ್ಲಿಯೇ ಮಲಗುತ್ತೇನೆ ಎಂದು ಭಾವಿಸಿದೆ. ಜಲ್ಸದ ಎರಡನೆ ದಿನದಲ್ಲಿ ಅಹ್ಮದಿಯರ ಸತ್ಯಾಸತ್ಯತೆ ನನ್ನ ಹೃದಯದಲ್ಲಿ ಮನೆಮಾಡಿದೆ ಎಂದು ಹೇಳಲಾಗುತ್ತದೆ. ನಾನು ಬೈಅತ್ ಮಾಡಲು ಮನಸ್ಸು ಮಾಡಿದೆ ಮತ್ತು ಸರ್ವಶಕ್ತನಾದ ಅಲ್ಲಾಹನು ನನಗೆ ತೌಫಿಕ್ ನೀಡಿದನು. ಅಹ್ಮದಿಯರ ನಿಝಾಮ್ ಅನ್ನು ಅನುಸರಿಸುವುದು, ಶಿಸ್ತು ಮತ್ತು ಅಡ್ಡಿಯಾಗದಂತೆ ನೋಡಿಕೊಳ್ಳುವುದು ನನಗೆ ತುಂಬಾ ಪ್ರಭಾವಿತಗೊಳಿಸಿದೆ ಎಂದು ಹೇಳುತ್ತಾರೆ. ಆತಿಥೇಯರು ಮತ್ತು ಅತಿಥಿಯರು ಇಬ್ಬರೂ ಸಹ ಕರ್ತವ್ಯಗಳನ್ನು ತಿಳಿದಿದ್ದಾರೆ.

ಅಬ್ದುಲ್ ರಹಮಾನ್ ಇಸ್ಮಾಯಿಲ್ ಸಾಹಿಬ್ ಬರೆಯುತ್ತಾರೆ: ನಾನು ಮೊದಲ ಬಾರಿಗೆ ಜಲ್ಸಾ ಸಾಲಾನದಲ್ಲಿ ಭಾಗವಹಿಸಿದ್ದೇನೆ. ಜಗತ್ತಿನಲ್ಲಿ ಇಂತಹ ಕೆಲಸ ಮಾಡುವ ಯಾವುದೇ ಪಂಗಡವಿಲ್ಲ. ಭಾಗವಹಿಸುವವರು ಪ್ರಪಂಚದಾದ್ಯಂತ ಆಗಮಿಸಿದ್ದರು ಆದರೆ ಯಾವುದೇ ರೀತಿಯ ಜಗಳ ನೋಡಲಿಲ್ಲ. ಪರಸ್ಪರ ಪ್ರೀತಿ ಮತ್ತು ಸಹೋದರತ್ವದ ಉತ್ತಮ ಉದಾಹರಣೆಗಳನ್ನು ನೋಡಿ. ನಿರೀಕ್ಷೆಗೂ ಮೀರಿದ ಸಂಖ್ಯೆ ಹೆಚ್ಚಿದ್ದು, ಸಾಕಷ್ಟು ಲಾಭಗೊಳಿಸಿಕೊಳ್ಳಲು ಸಾಧ್ಯವಾಯಿತು ಎನ್ನುತ್ತಾರೆ.

ಅಬ್ದುಲ್ಲಾ ಇರ್ಝುತ್ ಅಖೀಲಿ ಸಾಹಿಬ್ ಈಜಿಪ್ಟ್‌ನವರು, ಪ್ರಸ್ತುತ ಫ್ರಾನ್ಸ್‌ನಲ್ಲಿ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮಾಡುತ್ತಿದ್ದಾರೆ. ಭೌತಶಾಸ್ತ್ರದಲ್ಲಿ ಪ್ರತಿಯೊಂದು ಸಂಗತಿಯನ್ನು ಸಂಶಯದ ದೃಷ್ಟಿಯಿಂದ ನೋಡಲಾಗುತ್ತದೆ. ಆದ್ದರಿಂದ ಪ್ರತಿಯೊಂದು ಸಂಗತಿಯನ್ನು ಸಂಶಯಿಸುವುದು ನನ್ನ ಸಹಜಗುಣವಾಗಿ ಬಿಟ್ಟಿತ್ತು. ನಾನು ಬೈಅತ್ ಬಹಳ ಹಿಂದೆ ಮಾಡಿದ್ದೆ. ಜಮಾಅತ್ ಮತ್ತು ಖಿಲಾಫತ್‌ನೊಂದಿಗೆ ಸಂಬಂಧ ಕೂಡ ಇತ್ತು. ಆದರೆ ಮೆಲ್ಲಮೆಲ್ಲನೆ ಇತರ ಸಂಗತಿಗಳಂತೆ ಜಮಾಅತಿನ ಕುರಿತು ಕೂಡ ಸಂಶಯಗಳು ಉಂಟಾದುವು ಮತ್ತು ನಾನು ಜಮಾಅತಿನಿಂದ ದೂರ ಹೋಗಲು ತೊಡಗಿದೆ. ಈ ವರ್ಷ ಜಲ್ಸ ಸಾಲಾನ ಜರ್ಮನಿಯಲ್ಲಿ ಭಾಗವಹಿಸಲು ನಾನು ಹಾಜರಾದಾಗ ರಿಜಿಸ್ಟ್ರೇಶನ್‌ನಲ್ಲಿ ಸ್ವಲ್ಪ ತಡವಾಯಿತು. ನಾನು ತಲುಪಿದಾಗ ಖುತ್ಬ ಆರಂಭವಾಗಿತ್ತು. ನಾನು ಜಲ್ಸ ಗಾಹ್‌ನಲ್ಲಿ ಪ್ರವೇಶಿಸಿದಾಗ ನನ್ನ ಕಿವಿಗೆ ಮುಟ್ಟಿದ ಖುತ್ಬದ ವಾಕ್ಯ ಇದಾಗಿತ್ತು: ಮನುಷ್ಯನು ಪ್ರತಿಯೊಂದು ಸಂಗತಿಯ ಕುರಿತು ಸಂಶಯಪಡಲು ಆರಂಭಿಸಿದರೆ ಒಂದು ಕ್ಷಣಕ್ಕೂ ಲೋಕದಲ್ಲಿ ಇರಲು ಸಾಧ್ಯವಲ್ಲ.

ಇದು ಹಝ್ರತ್ ಮೌಊದ್ ಅಲೈಹಿಸ್ಸಲಾಮ್ ಅವರ ಉಲ್ಲೇಖವಾಗಿತ್ತು. ನೀರು ಕುಡಿಯುವಾಗ ಇದರಲ್ಲಿ ವಿಷ ಇರಬಹುದು ಎಂದು ಸಂಶಯಪಡಬಹುದು. (ಮಲ್‌ಫೂಝಾತ್, ಸಂಪುಟ–3, ಪುಟ–73, 1984) ಈ ವಾಕ್ಯವನ್ನು ಆಲಿಸಿದಾಗ ನಾನು ಒಳಗಿನಿಂದ ಕಂಪನಗೊಂಡೆನು. ನಾನು ಈ ಸಮಯದಲ್ಲಿ ಜಲ್ಸ ಗಾಹ್‌ಗೆ ತಲುಪಿದ್ದು ಅಲ್ಲಾಹನ ವಿಧಿ ಪ್ರಕಾರವಾಗಿತ್ತು ಎಂದು ಭಾಸವಾಗುತ್ತಿತ್ತು. ಏಕೆಂದರೆ ಮೊದಲ ವಾಕ್ಯವೇ ನನ್ನ ರೋಗದ ಚಿಕಿತ್ಸೆಯಾಗಿತ್ತು. ನನ್ನನ್ನು ಸಂಬೋಧಿಸಿ ಹೇಳುವ ರೀತಿಯಲ್ಲಿ. ಇದು ಆಕಸ್ಮಿಕ ಸಂಗತಿಯಾಗಲು ಸಾಧ್ಯವಲ್ಲ. ಇದು ನನ್ನ ಹೃದಯದಲ್ಲಿ ಆಳವಾದ ಪ್ರಭಾವವನ್ನು ಬೀರಿತು. ಅಲ್ಲಾಹನ ಅನುಗ್ರಹದಿಂದ ನನ್ನ ಸಂಶಯ ಮತ್ತು ತಪ್ಪುಗ್ರಹಿಕೆಗಳು ಕೊನೆಗೊಂಡುವು. ಈ ಘಟನೆಯನ್ನು ಅವರು ಸ್ವತಃ ನನಗೂ ಹೇಳಿದ್ದರು.

ಕ್ಯಾಮರೂನ್‌ನಿಂದ ಇಮಾಮ್ ಸಾಹಿಬ್ ಆಗಮಿಸಿದ್ದರು, ಅವರು ಅಲ್ಲಿ ದೊಡ್ಡ ಇಮಾಮ್ ಆಗಿದ್ದಾರೆ, ಅವರು ಕ್ಯಾಮರೂನ್‌ನ ದೋವಾಲಾ ನಗರದ ಮುಖ್ಯ ಇಮಾಮ್ ಮತ್ತು ಅವರು ಎರಡು ಪ್ರದೇಶಗಳ ಉಲಮಾ ಕೌನ್ಸಿಲ್‌ನ ಅಧ್ಯಕ್ಷರೂ ಆಗಿದ್ದಾರೆ. ಅವರು ಪಕ್ಷೇತರರು. ನಾನು ಮೊದಲಬಾರಿಗೆ ಇಷ್ಟು ದೊಡ್ಡ ಕಾರ್ಯಕ್ರಮಕ್ಕೆ ಸೇರಿಕೊಂಡಿದ್ದೇನೆ ಎನ್ನುತ್ತಾರೆ.

ಜಲ್ಸಾ ಸಾಲಾನದಲ್ಲಿ ವಿವಿಧ ಬಣ್ಣಗಳ ಜನರೆಲ್ಲ ಸಂತೋಷದಿಂದ ಭೇಟಿಯಾಗಿ ಕುಟುಂಬದ ಸದಸ್ಯರಂತೆ ಪ್ರೀತಿ, ವಾತ್ಸಲ್ಯದಿಂದ ಭೇಟಿಯಾಗಿ ಮೂರು ದಿನದಲ್ಲಿ ಯಾವುದೇ ರೀತಿಯ ಜಗಳ ಕಾಣದಿರುವುದು ನನಗೆ ಬಹಳ ಅಚ್ಚರಿ ಮೂಡಿಸಿದೆ. ಅವರು ಹೇಳುತ್ತಾರೆ: ವಸ್ತುಪ್ರದರ್ಶನಗಳಿಗೆ ಹೋಗುವುದರಿಂದ ನಾನು ಸಾಕಷ್ಟು ಜ್ಞಾನವನ್ನು ಪಡೆದುಕೊಂಡಿದ್ದೇನೆ ಮತ್ತು ಜಮಾಅತ್‌ನ ಸೇವೆಗಳಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಜಮಾಅತಿನ ಇಮಾಮರ ಭಾಷಣಗಳು ಯುಕ್ತಿಪೂರ್ಣ ಮತ್ತು ಇಸ್ಲಾಮಿನ ಅಧ್ಯಾಪನೆಗಳ ಕನ್ನಡಿಯಾಗಿದ್ದುವು. ಮಹಿಳೆಯರನ್ನು ಉದ್ದೇಶಿಸಿ ಮಾತನಾಡುವುದು ನನ್ನನ್ನು ತುಂಬಾ ಪ್ರಭಾವಿಸಿದೆ. ನಾವು ಇದರ ಪ್ರಕಾರ ನಡೆದರೆ ಜೀವಿತ ಸ್ವರ್ಗವಾಗುವುದು. ಜಲ್ಸದ ಸಮಯದಲ್ಲಿ, ಜಮಾಅತ್ ಅಲ್ಲದ ಅತಿಥಿಗಳಿಗೆ ಇಮಾಮರ ಭಾಷಣವು ಇಸ್ಲಾಮಿಕ್ ಬೋಧನೆಗಳಿಂದ ತುಂಬಿತ್ತು. ಪ್ರತಿಯೊಬ್ಬ ಮುಸ್ಲಿಂ ತನ್ನ ಧರ್ಮದ ಬಗ್ಗೆ ಹೆಮ್ಮೆ ಪಡಬೇಕು ಎಂದು ಇಮಾಮ್ ಜಮಾಅತ್ ಬೋಧಿಸಿದರು. ನಾವೆಲ್ಲರೂ ಈ ಬೋಧನೆಯನ್ನು ಪ್ರಾಯೋಗಿಕವಾಗಿ ಇಡೀ ಜಗತ್ತಿಗೆ ಪ್ರಸ್ತುತಪಡಿಸಬೇಕು. ಮತ್ತು ಈ ಸಮಯದಲ್ಲಿ, ಜಗತ್ತಿಗೆ ಅತ್ಯುತ್ತಮ ಇಸ್ಲಾಮಿಕ್ ಬೋಧನೆಗಳನ್ನು ಪ್ರಸ್ತುತಪಡಿಸಲು ಸರ್ವಶಕ್ತನಾದ ಅಲ್ಲಾಹನು ಅಹ್ಮದಿಯಾ ಜಮಾಅತ್‌ನ ಖಲೀಫರನ್ನು ನಿಲ್ಲಿಸಿದ್ದಾನೆ. ಅದೇ ರೀತಿ ಇತರ ವಿದ್ವಾಂಸರ ಭಾಷಣಗಳು ನನ್ನ ಜ್ಞಾನವನ್ನು ಬಹಳಷ್ಟು ಹೆಚ್ಚಿಸಿವೆ ಎಂದು ಅವರು ಮುಂದುವರಿಸುತ್ತಾರೆ.

ನಂತರ ಮೊದಲ ಬಾರಿಗೆ ಜೆಕ್ ರಿಪಬ್ಲಿಕ್‌ನಿಂದ, ನಿವೃತ್ತ ಪ್ರೊಫೆಸರ್ ಡೇನಿಯಲ್ ಸಾಹಿಬ್ ಆಗಮಿಸಿದ್ದರು. ಅವರು ಹೇಳುತ್ತಾರೆ: ನನ್ನ ಜಲ್ಸಾ ಸಾಲಾನದ ಮೊದಲ ಅನುಭವವಾಗಿದೆ. ಹಲವು ವಿಷಯಗಳು ನನ್ನನ್ನು ಪ್ರಭಾವಿಸಿವೆ. ಒಂದೆಂದರೆ, ನಮಾಝಿನ ಸಮಯದಲ್ಲಿ ಜಮಾಅತಿನ ಸದಸ್ಯರು ಖಲೀಫಾ ವಕ್ತ್ ಜೊತೆ ನಮಾಝ್ ನಿರ್ವಹಿಸುತ್ತಿದ್ದ ರೀತಿಯನ್ನು ನೋಡಿದ ಅವರು ಖಲೀಫಾ ವಕ್ತ್ ಅವರ ಉಸಿರಿನೊಂದಿಗೆ ಉಸಿರಾಡುತ್ತಿರುವಂತೆ ಭಾಸವಾಗುತ್ತಿತ್ತು. ಅವರಿಬ್ಬರೂ ಒಂದೇ ಘಟಕವಾದಂತೆ ತೋರುತ್ತಿತ್ತು. ನಾನು ಜಗತ್ತಿನ ಅನೇಕ ಸಮೂದಾಯಗಳು, ಧರ್ಮಗಳು ಮತ್ತು ಜನರನ್ನು ನೋಡಿದ್ದೇನೆ. ಈ ರೀತಿಯ ಏಕತೆ ಇಂದು ಮೊದಲ ಬಾರಿಗೆ ಕಂಡುಬಂದಿದೆ, ಇದು ನೋಡಲು ಹೃದಯಸ್ಪರ್ಶಿಯಾಗಿತ್ತು. ನಂತರ ಅವರು ವಿಶ್ವದ ಅತಿದೊಡ್ಡ ಪ್ರದರ್ಶನಗಳಿಗೆ ಹೋಗಲು ಅವಕಾಶವನ್ನು ಪಡೆದರು ಎಂದು ಅವರು ಹೇಳುತ್ತಾರೆ. ಅವರಲ್ಲಿ ಸೆಕ್ಯೂರಿಟಿಯನ್ನು ಕಂಡಲ್ಲೆಲ್ಲ ಸೆಕ್ಯೂರಿಟಿ ಸಿಬ್ಬಂದಿಯವರ ವರ್ತನೆಗಳನ್ನು ಕಹಿಯಾಗಿರುವುದನ್ನು ಕಂಡಿದ್ದರು, ಆದರೆ ಈ ಜಲ್ಸ ಸಾಲಾನದಲ್ಲಿ ಸೆಕ್ಯುರಿಟಿಯಿಂದ ಹಿಡಿದು ಪ್ರತಿಯೊಬ್ಬ ಕಾರ್ಯಕರ್ತನ ಮುಖದಲ್ಲಿ ನಗು, ಮೃದುತ್ವವನ್ನು ಕಂಡಿದ್ದೇನೆ, ಅದು ಖಂಡಿತವಾಗಿಯೂ ಸಕಾರಾತ್ಮಕ ಪರಿಣಾಮವನ್ನು ಬೀರುತ್ತದೆ. ಇಡೀ ಜಲ್ಸದ ವಾತಾವರಣದ ಮೇಲೆ. ಶಾಂತಿಯುತ ವಾತಾವರಣವಿತ್ತು. ಇಷ್ಟೊಂದು ಜನಸಂದಣಿಯಲ್ಲಿ ಯಾವುದೇ ಅಡೆತಡೆಯಿಲ್ಲದೆ ನಡೆದುಕೊಂಡು ಹೋಗುವುದು ನಿಸ್ಸಂಶಯವಾಗಿ ಅಚ್ಚರಿ ಮೂಡಿಸುತ್ತದೆ. ಕೆಲವು ಅಹ್ಮದೀಯರು ಭದ್ರತೆಯ ಬಗ್ಗೆ ಅನುಮಾನಗಳನ್ನು ಹೊಂದಿದ್ದಾರೆ, ಆದರೆ ಅದೃಷ್ಟವಶಾತ್, ವಿದೇಶಿಯರು ಭದ್ರತಾ ಮನೋಭಾವವನ್ನು ಇಷ್ಟಪಡುತ್ತಾರೆ. ಸಾಮಾನ್ಯವಾಗಿ ಒಂದು ಪ್ರದೇಶದಲ್ಲಿ ಯಾರಾದರೂ ತೋರಿಸಿರುವ ಅಥವಾ ಕೆಲವೊಮ್ಮೆ ನಿಷೇಧಿಸುವ ಅರ್ಧದಷ್ಟು ಇರುತ್ತದೆ ಆದರೆ ಸಾಮಾನ್ಯವಾಗಿ ಭದ್ರತಾ ವ್ಯಕ್ತಿಗಳು ಸಹ ಉತ್ತಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ನಂತರ, ನನ್ನೊಂದಿಗಿನ ಭೇಟಿಯನ್ನು ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಅವರು ಅದನ್ನು ಮೊದಲು ನೋಡಿದಾಗ ಅವರು ತುಂಬಾ ಪ್ರಭಾವಿತರಾದರು ಮತ್ತು ನಾನು ತುಂಬಾ ಕೃತಜ್ಞನಾಗಿದ್ದೇನೆ. ಈ ಸಭೆಯು ನನ್ನ ಜೀವನದ ಸುವರ್ಣ ಭಾಗವಾಗಿದೆ ಮತ್ತು ನಾನು ಮಾತುಕತೆಯಿಂದ ಸಾಕಷ್ಟು ಪ್ರಯೋಜನವನ್ನು ಪಡೆದುಕೊಂಡಿದ್ದೇನೆ.

ನಂತರ ಇನ್ನೊಬ್ಬ ವ್ಯಕ್ತಿ ಜೆಕ್ ರಿಪಬ್ಲಿಕ್‌ನ ಯುವ ಸಂದರ್ಶಕ ಹೇಳುತ್ತಾರೆ: ಈ ಜಲ್ಸ ಸಾಲಾನದಲ್ಲಿ ಅಹ್ಮದಿಯರ ಮುಖಾಂತರ ನನಗೆ ದೇವರು ಕಾಣಿಸಿಕೊಂಡಿದ್ದಾನೆ. ಅನೇಕ ಜನರು ದೇವರ ಬಗ್ಗೆ ತಿಳಿಸಲು ಪ್ರಯತ್ನಿಸುತ್ತಾರೆ, ಆದರೆ ಈ ಜಲ್ಸದಲ್ಲಿ ಜನರ ಶಾಂತ, ಉತ್ತಮ ನಡವಳಿಕೆಯನ್ನು ನೋಡಿ, ನಿಮ್ಮ ಜಲ್ಸದಲ್ಲಿ ದೇವರ ಅಸ್ತಿತ್ವವನ್ನು ನಾನು ನೋಡಿದೆ.

ಇದೂ ಕೂಡ ಮೌನ ತಬ್ಲೀಗ್ ಆಗಿದೆ.

ಲಿಥುವೇನಿಯಾ ವಿಶ್ವವಿದ್ಯಾನಿಲಯದ ಅರೇಬಿಕ್ ಪ್ರಾಧ್ಯಾಪಕರಾದ ಗಿಂಟರೆ ಸೆರೆಕೈಟ್ ಅವರು ಜಲ್ಸ ಸಾಲಾನಕ್ಕೆ ಬಂದು ಸೇರಿದರು. ಅವರು ಇಸ್ಲಾಂ ಧರ್ಮ ತತ್ವಜ್ಞಾನ ಎಂಬ ಗ್ರಂಥವನ್ನು ಸ್ವಇಚ್ಛೆಯಿಂದ ಲಥ್‌ವಾನೀನ್ ಭಾಷೆಗೆ ತರ್ಜುಮೆ ಮಾಡಿದ್ದಾರೆ ಅವರು ಹೇಳುತ್ತಾರೆ: ಇಸ್ಲಾಮಿಕ್ ಜಗತ್ತಿನಲ್ಲಿ ಅಹ್ಮದಿಯಾ ಜಮಾಅತ್ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಅಹ್ಮದಿಯಾ ಜಮಾಅತ್ ಜಮಾತ್‌ಅಲ್ಲದ ಮತ್ತು ಮುಸ್ಲಿಮೇತರರೊಂದಿಗೆ ಸಂಪರ್ಕವನ್ನು ನಿರ್ವಹಿಸುವ ರೀತಿಯಲ್ಲಿ ಬೇರೆ ಯಾವುದೇ ಜಮಾಅತ್ ಮಾಡುವುದಿಲ್ಲ. ಒಬ್ಬ ಸಂಶೋಧಕನಾಗಿ, ನಾನು ಇಸ್ಲಾಮಿಕ್ ಸಂಸ್ಕೃತಿ ಮತ್ತು ಇಸ್ಲಾಮಿಕ್ ಸಂಪ್ರದಾಯಗಳಲ್ಲಿ ತುಂಬಾ ಆಸಕ್ತಿ ಹೊಂದಿದ್ದೇನೆ, ಆದರೆ ಅಹ್ಮದಿಯಾ ಜಮಾಅತ್ ಹೊರತುಪಡಿಸಿ ಲಿಥುವೇನಿಯಾದಲ್ಲಿ ಯಾವುದೇ ಇಸ್ಲಾಮಿಕ್ ಸಮುದಾಯವನ್ನು ಭೇಟಿ ಮಾಡುವುದು ಮತ್ತು ಸಂವಹನ ಮಾಡುವುದು ತುಂಬಾ ಕಷ್ಟ. ಅಹ್ಮದಿಯಾ ಜಮಾಅತ್ ಅನ್ನು ಪ್ರತಿಯೊಂದು ಅಂಶದಲ್ಲೂ ಪರೀಕ್ಷಿಸಲು ವಾರ್ಷಿಕ ಜಲ್ಸಾ ನನಗೆ ಅದ್ಭುತ ಅವಕಾಶವನ್ನು ನೀಡಿತು. ಜಮಾಅತನ್ನು ಸರಿಯಾಗಿ ತಿಳಿದುಕೊಳ್ಳಲು ನನಗೆ ಜಲ್ಸ ಸಾಲಾನ ಉತ್ತಮ ಸಂದರ್ಭ ಒದಗಿಸಿಕೊಟ್ಟಿತು. ಅಹ್ಮದಿಯಾ ಜಮಾಅತ್ ತನ್ನ ಆದರ್ಶ ಸೂಕ್ತಿಯನ್ನು ಸರಿಯಾದ ರೀತಿಯಲ್ಲಿ ಪಾಲಿಸುತ್ತಿದೆ.

ಮತ್ತೆ ಲಿಥುವೇನಿಯಾದ ಬರಹಗಾರ ಮತ್ತು ಪತ್ರಕರ್ತ ಜೆರೋನಿಮಾಸ್ ಹೇಳುತ್ತಾರೆ, ಜಗತ್ತಿನಲ್ಲಿನ ಅಶಾಂತಿ ಮತ್ತು ತೀವ್ರ ಬಡತನದ ಬಗ್ಗೆ ನಾನು ತುಂಬಾ ಚಿಂತಿತನಾಗಿದ್ದೇನೆ. ಅಂತಹ ಸಂದರ್ಭಗಳಲ್ಲಿ ಒಬ್ಬ ಸಾಮಾನ್ಯ ಮನುಷ್ಯ ಏನು ಮಾಡಬಹುದು ಎಂದು ನಾನು ಯಾವಾಗಲೂ ಆಶ್ಚರ್ಯ ಪಡುತ್ತೇನೆ. ಆದರೆ ಅದೇ ಪ್ರಶ್ನೆಯನ್ನು ನಾನು ಖಲೀಫತುಲ್ ಮಸೀಹ್ ಅವರನ್ನು ಕೇಳಿದಾಗ ಅವರು ನನಗೆ ಬಹಳ ತೃಪ್ತಕರವಾದ ಉತ್ತರವನ್ನು ಹೀಗೆ ನೀಡಿದರು, ಪವಿತ್ರ ಖುರ್‌ಆನ್ ಬೋಧಿಸಿರುವಂತೆ ಮನುಷ್ಯನ ಮೂಲ

ಉದ್ದೇಶವು ಸರ್ವಶಕ್ತನಾದ ಅಲ್ಲಾಹನನ್ನು ಆರಾಧಿಸುವುದಾಗಿದೆ. ಸಾವಿನ ನಂತರವೂ ಜೀವನವಿದೆ ಎಂಬುದನ್ನು ಜನರು ನೆನಪಿನಲ್ಲಿಡಬೇಕು. ಜನರು ಈ ಬಗ್ಗೆ ಗಮನ ಹರಿಸದಿದ್ದರೆ, ಜಗತ್ತಿನಲ್ಲಿ ಯಾವಾಗಲೂ ಅಶಾಂತಿ ಇರುತ್ತದೆ. ಕಾಲದ ಖಲೀಫರು ಈ ಸಮಸ್ಯೆಯ ಬಗ್ಗೆ ಈಗಾಗಲೇ ಗಮನ ಹರಿಸುತ್ತಿದ್ದಾರೆ ಮತ್ತು ಅವರು ತಮ್ಮ ಭಾಷಣ ಮತ್ತು ಧರ್ಮೋಪದೇಶಗಳಲ್ಲಿ ಪ್ರಪಂಚದ ಸಮಸ್ಯೆಗಳಿಗೆ ಪರಿಹಾರಗಳನ್ನು ಜನರಿಗೆ ಹೇಳುತ್ತಿದ್ದಾರೆ ಎಂದು ತಿಳಿದು ನನಗೆ ತುಂಬಾ ಸಂತೋಷವಾಗಿದೆ.

ನಂತರ ಶ್ರೀ ಕಚೀವ್ ಸಾಹಿಬ್ ಕಿರ್ಗಿಸ್ತಾನ್‌ನಿಂದ ಆಗಮಿಸಿದ್ದರು ಅವರು ಹೇಳುತ್ತಾರೆ: ಜಲ್ಸ ಸಾಲಾನದಲ್ಲಿ, ನಾನು ನನ್ನ ಧರ್ಮ ಮತ್ತು ಸಮುದಾಯದ ಬಗ್ಗೆ ಬಹಳಷ್ಟು ಕಲಿತಿದ್ದೇನೆ. ನನ್ನ ಹಲವು ಪ್ರಶ್ನೆಗಳಿಗೆ ಉತ್ತರ ಲಭಿಸಿದೆ. ನಾನು ನನ್ನ ಜೀವನದಲ್ಲಿ ಮೊದಲ ಬಾರಿಗೆ ಜಲ್ಸಾಗೆ ಸೇರಿಕೊಂಡಿದ್ದೇನೆ ಮತ್ತು ನಾನು ಮೊದಲ ಬಾರಿಗೆ ವಿದೇಶಕ್ಕೆ ಹೋಗಿದ್ದೇನೆ. ಜಲ್ಸದಲ್ಲಿ ಇಷ್ಟೊಂದು ಜನ ಸೇರುತ್ತಾರೆ ಎಂಬ ಕಲ್ಪನೆಯೂ ನನಗೆ ಇರಲಿಲ್ಲ. ಎಲ್ಲವೂ ಅತ್ಯುತ್ತಮವಾಗಿತ್ತು.

ಖಝಕಿಸ್ತಾನಿನಿಂದ ಆಗಮಿಸಿದ ಒಬ್ಬ ಅಹ್ಮದೀ ಸಹೋದರನಾದ ಅಲೀ ಬೇಗ್ ಹೇಳುತ್ತಾರೆ: ಜಲ್ಸದಲ್ಲಿ ಭಾಗವಹಿಸಿದ್ದು ಬಹಳ ಒಳ್ಳೆಯ ಅನುಭವವಾಗಿತ್ತು. ಜಾಗತಿಕ ಬೈಅತ್ ಮಾಡಿದ್ದು ಬೇರೆಯೇ ಅನುಭವವಾಗಿತ್ತು. ಖಲೀಫತುಲ್ ಮಸೀಹ್‌ರನ್ನು ಭೇಟಿಯಾದಾಗ ನನ್ನ ಭಾವನೆಗಳು ಅವುಗಳ ಕೊನೆಯ ಹಂತಕ್ಕೆ ತಲುಪಿದುವು. ಜಲ್ಸಕ್ಕೆ ಬಂದ ನನ್ನ ಉದ್ದೇಶ ನೆರವೇರಿತು. ಜಲ್ಸದಲ್ಲಿ ಭಾಗವಹಿಸಿದ್ದರ ಪ್ರಭಾವ ಎಷ್ಟು ಅಧಿಕವಿದೆ ಎಂದರೆ, ನೀವು ಬದಲಾಗಿದ್ದೀರಿ ಎಂದು ನನ್ನ ಪತ್ನಿ ಮತ್ತು ಮಕ್ಕಳು ಹೇಳುತ್ತಿದ್ದಾರೆ. ಮುಂದಿನ ವರ್ಷ ಪತ್ನಿ – ಮಕ್ಕಳೊಂದಿಗೆ ಜಲ್ಸಕ್ಕೆ ಬರಲು ನಿರ್ಧಾರ ಮಾಡಿದ್ದೇನೆ.

ಜರ್ಮನಿಯಲ್ಲಿ ನೆಲೆಸಿರುವ ತುರ್ಕಿ ಅಧ್ಯಾಪಕಿ ಯಾಸ್ಮೀನ್ ಸಾಹಿಬ ಹೇಳುತ್ತಾರೆ: ಖಲೀಫತುಲ್ ಮಸೀಹ್‌ರ ಭಾಷಣ ನನ್ನ ಪ್ರಶ್ನೆಗಳ ಉತ್ತರವಾಗಿತ್ತು. ಜಲ್ಸದ ವಾತಾವರಣ ನನಗೆ ಬಹಳ ಇಷ್ಟವಾಯಿತು. ಇಷ್ಟು ಹೆಚ್ಚು ಜನರ ಒಟ್ಟುಸೇರುವುದು ಮತ್ತು ಪ್ರೀತಿಯ ದಾರದಲ್ಲಿ ಪೋಣಿಸಲ್ಪಟ್ಟಿರುವುದು ಒಂದು ಅಸಾಧಾರಣವಾದ ಮತ್ತು ಆಶ್ಚರ್ಯಕರವಾದ ಸಂಗತಿಯಾಗಿದೆ. ಅವರು ಹೇಳುತ್ತಾರೆ, ಸಂಕ್ಷಿಪ್ತವಾಗಿ, ನಾನು ಏನು ಹೇಳಿದ್ದೇನೆ ಮತ್ತು ಅಲ್ಲಿ ವ್ಯಕ್ತಪಡಿಸಿದ ಆಲೋಚನೆಯನ್ನು ಹುಡುಕುತ್ತಿದ್ದೆ, ಆ ದಿನ ನಾನು ಒಗಟುಗಳ ಪ್ರತಿಯೊಂದು ತುಣುಕು ತನ್ನದೇ ಆದ ಸ್ಥಳಕ್ಕೆ ಹೊಂದಿಕೊಳ್ಳುವುದನ್ನು ನೋಡಿದೆ.

ಸರ್ಬಿಯದ ಒಬ್ಬ ಜರ್ನಲಿಸ್ಟ್ ಸತಾನೀಸ್ ಲೌ ಸಾಹಿಬ್ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ: ಆರ್ಥೊಡಾಕ್ಸ್ ಕ್ರಿಶ್ಚಿಯನ್ ಆಗಿದ್ದರೂ ಮತ್ತು ಇಂಟರ್ನೆಟ್‌ನಲ್ಲಿ ನಿಮ್ಮ ವಿರುದ್ಧ ದ್ವೇಷ ಹರಡಿದ್ದರೂ, ನಿಮ್ಮ ಜಮಾಅತ್‌ನಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ನಿಮ್ಮ ಆಡಳಿತ ಮತ್ತು ವ್ಯವಸ್ಥೆ ನನ್ನನ್ನು ಬೆರಗುಗೊಳಿಸಿದೆ.

ಅಹ್ಮದಿಯಾ ಅವರ ನಿಜವಾದ ಬೋಧನೆಗಳನ್ನು ಜಗತ್ತಿನಲ್ಲಿ ವ್ಯಾಪಕವಾಗಿ ಹರಡಲು ನಮಗೆ ಸಾಧ್ಯವಾಗುತ್ತಿಲ್ಲ ಎಂದು ನನಗೆ ತುಂಬಾ ದುಃಖವಾಗಿದೆ. ಪ್ರತಿಯೊಬ್ಬರ ಮೇಲಿನ ನಿಮ್ಮ ಪ್ರೀತಿ ಮತ್ತು ಪ್ರತಿ ಹೆಜ್ಜೆಯಲ್ಲಿ ಯಾರನ್ನೂ ದ್ವೇಷಿಸುವುದನ್ನು ನಾವು ಗಮನಿಸಿದ್ದೇವೆ. ಆಡಳಿತದಲ್ಲಿ ಅಥವಾ ನಲವತ್ತಾರು ಸಾವಿರ ಜನರಲ್ಲಿ ನಾವು ಕೆಟ್ಟದ್ದನ್ನು ನೋಡಲಿಲ್ಲ. ಎಲ್ಲೆಲ್ಲೂ ಶಾಂತಿ ನೆಲೆಸಿತ್ತು. ನಿಮ್ಮ ಶಿಕ್ಷಣದಂತೆಯೇ ಎಲ್ಲರೂ ಇನ್ನೊಬ್ಬರನ್ನು ಗೌರವಿಸುತ್ತಾರೆ. ಅದನ್ನು ಪದಗಳಲ್ಲಿ ವಿವರಿಸುವುದು ನನಗೆ ಕಷ್ಟ.

ಸರ್ಬಿಯಾದ ಮಹಿಳಾ ಪತ್ರಕರ್ತೆ ಮಿಯಾ ಸಾಹಿಬಾ ಹೇಳುತ್ತಾರೆ: ನನಗೆ ಆಡಳಿತ, ಭಾಷಣಕಾರರು ಮತ್ತು ಜಲ್ಸಾ ವಾರ್ಷಿಕೋತ್ಸವದ ಎಲ್ಲಾ ಭಾಗವಹಿಸುವವರ ಬಗ್ಗೆ ತುಂಬಾ ಸಕಾರಾತ್ಮಕ ಅನಿಸಿಕೆಗಳಿವೆ. ಲಜ್ನಾ ಕಡೆಯಿಂದ ಖಲೀಫಾರವರು ಮಾಡಿದ ಭಾಷಣದಿಂದ ನಾನು ಹೆಚ್ಚು ಪ್ರಭಾವಿತನಾಗಿದ್ದೆ. ಅಂತೆಯೇ, ನಾನು ಎಲ್ಲಾ ನಿರ್ವಹಣೆಗೆ ಅತ್ಯಂತ ಕೃತಜ್ಞನಾಗಿದ್ದೇನೆ.

ಓರ್ವ ಸ್ಥಳೀಯ ಪೋಲಿಷ್ ಅಹ್ಮದಿ ಮಹಿಳೆಯೊಬ್ಬರು ಹೇಳುತ್ತಾರೆ: ಮೂರು ವರ್ಷಗಳ ಹಿಂದೆ ಕನಸಿನಲ್ಲಿ ನಾನು ಸಭೆಯಲ್ಲಿದ್ದೇನೆ ಎಂದು ನೋಡಿದೆ ಮತ್ತು ಅವರು ನನಗೆ ಕೆಲವು ಪ್ರಶ್ನೆಗಳನ್ನು ಕೇಳಲು ಬಯಸಿದ್ದರು. ಅವರು ಹೇಳುತ್ತಾರೆ ಆದರೆ ಕೇಳಲು ನನಗೆ ಅವಕಾಶ ಸಿಗಲಿಲ್ಲ. ಈ ಬಗ್ಗೆ ನಾನು ತುಂಬಾ ಚಿಂತಿತನಾಗಿದ್ದೆ ಎಂದು ಅವರು ಹೇಳುತ್ತಾರೆ. ನನ್ನ ಪ್ರಶ್ನೆ ಬಹಳ ಮುಖ್ಯವಾಗಿತ್ತು. ಅವರು ಹೇಳುತ್ತಾರೆ: ಆದರೆ ಈ ಬಾರಿಯ ಜಲ್ಸ ಸಾಲಾನ ಜರ್ಮನಿಯಲ್ಲಿ ಸೇರಿದೆ. ಮತ್ತು ಭೇಟಿಯಾಗುವ ಅವಕಾಶವಿದ್ದಾಗ ನನಗೆ ಆ ಪ್ರಶ್ನೆಯನ್ನು ಕೇಳುವ ಅವಕಾಶ ಲಭಿಸಿತು ಮತ್ತು ಅಂದಿನ ಖಲೀಫರಿಂದ ನನಗೆ ತುಂಬಾ ತೃಪ್ತಿಕರ ಉತ್ತರವೂ ಲಭಿಸಿತು. ಅದರ ನಂತರ ನನಗೆ ವಿಚಿತ್ರವಾದ ಶಾಂತಿ ಲಭಿಸಿತು. ನಾನು ಬಹಳ ಕೃತಜ್ಞಳಾಗಿದ್ದೇನೆ.

ಒಬ್ಬ ಜರ್ಮನ್ ಅತಿಥಿಯಾದ ಗೋಂತಾ ಮೋವಾ ಸಾಹಿಬ್ ಹೇಳುತ್ತಾರೆ: ನಾನು ಇಸ್ಲಾಂ ಧರ್ಮವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡುತ್ತಿದ್ದೆ. ಆದರೂ ಖಲೀಫತುಲ್ ಮಸೀಹ್‌ರ ಭಾಷಣವನ್ನು ಬಹಳ ಗಮನವಿಟ್ಟು ಆಲಿಸಿದೆ. ಖಲೀಫತುಲ್ ಮಸೀಹ್ ತನ್ನ ಭಾಷಣದಲ್ಲಿ ನೀಡುತ್ತಿದ್ದ ರೆಫರೆನ್ಸ್‌ಗಳನ್ನು ಕೂಡ ಚೆಕ್ ಮಾಡಿದೆ. ಖಲೀಫತುಲ್ ಮಸೀಹ್‌ರ ಭಾಷಣವನ್ನು ಕೇಳಿ ನಾನು ಬಹಳ ವಿಸ್ಮಯಗೊಂಡೆನು. ಖಲೀಫತುಲ್ ಮಸೀಹ್‌ರು ಶಾಂತಿ ಮತ್ತು ಸಾಹೋದರ್ಯಕ್ಕೆ ಬಹಳ ಒತ್ತುಕೊಟ್ಟರು. ನಿಸ್ಸಂಶಯವಾಗಿಯೂ ಖಲೀಫತುಲ್ ಮಸೀಹ್‌ರು ಬಹಳ ಉತ್ತಮ ಭಾಷಣವನ್ನು ಮಾಡಿದರು. ನನಗೆ ಉಂಟಾದ ಅಚ್ಚರಿಯ ಅಂದಾಜು ಮಾಡಲು ಸಾಧ್ಯವಲ್ಲ. ಏಕೆಂದರೆ ಖಲೀಫರು ಇಸ್ಲಾಮಿನ ಒಂದು ಶಾಂತಿಪ್ರಿಯ ಚಿತ್ರವನ್ನು ತೋರಿಸಿಕೊಟ್ಟರು. ಅದು ಇಲ್ಲಿ ಸಾಮಾನ್ಯವಾಗಿ ಕಾಣಲು ಸಾಧ್ಯವಾಗುತ್ತಿಲ್ಲ. ಖಂಡಿತವಾಗಿಯೂ ಇಂದು ಇಸ್ಲಾಮಿನ ಕುರಿತು ನನ್ನ ದೃಷ್ಟಿಕೋಣದಲ್ಲಿ ಬಹಳ ವರ್ಧನೆ ಉಂಟಾಗಿದೆ. ಏಕೆಂದರೆ ಮೊದಲು ನಾನು ಇಸ್ಲಾಮನ್ನು ಶಾಂತಿಪ್ರಿಯ ಧರ್ಮವೆಂದು ಭಾವಿಸುತ್ತಿರಲಿಲ್ಲ. ನನಗೆ ಇಸ್ಲಾಮಿನ ಶಾಂತಿಯ ಅಧ್ಯಾಪನೆಗಳ ಬಗ್ಗೆ ಅರಿವು ಇರಲಿಲ್ಲ.

ಇವತ್ತು ನಾನು ಪುರುಷರ ಸಭಾಂಗಣದ ಪರದೆಯ ಮೇಲೆ ಲಜ್ನಾಗೆ ಖಲೀಫರ ಭಾಷಣವನ್ನು ಮೊದಲು ನೋಡಿದೆ. ಇವರು ಖಲೀಫಾ ಎಂದು ನನಗೆ ತಿಳಿದಿರಲಿಲ್ಲ, ಆದರೆ ನಾನು ಈ ಭಾಷಣವನ್ನು ಕೇಳಿ ತುಂಬಾ ಪ್ರಭಾವಿತನಾಗಿದ್ದೆ ಮತ್ತು ಅತಿಥಿಗಳು ವೇದಿಕೆಗೆ ಬಂದಾಗ ನನಗೆ ಅರ್ಥವಾಯಿತು. ಆಗ ನಿಮ್ಮಿಂದ ನೇರವಾಗಿ ಕೇಳಲು ನನಗೆ ತುಂಬಾ ಸಂತೋಷವಾಯಿತು.

ಜರ್ಮನ್ ಅತಿಥಿ ಕೆವಿನ್ ಸಾಹಿಬ್ ಹೇಳುತ್ತಾರೆ: ನಾನು ಖಲೀಫತುಲ್ ಮಸೀಹ್‌ರ ಭಾಷಣವನ್ನು ಆಲಿಸಿ ಆಶ್ಚರ್ಯಚಕಿತನಾಗಿರುವೆನು. ಏನು ಹೇಳಬೇಕು ಎಂಬುದಕ್ಕೆ ನನ್ನ ಬಳಿ ಮಾತುಗಳಿಲ್ಲ. ಖಲೀಫತುಲ್ ಮಸೀಹ್‌ರು ಹೇಳಿದ ಎಲ್ಲ ಮಾತುಗಳನ್ನು ಪಾಲಿಸಬೇಕು. ಖಲೀಫತುಲ್ ಮಸೀಹ್‌ರು ಮುಗುಳ್ನಗೆಯ ಕುರಿತು ಹೇಳಿದ ಮಾತು ಬಹಳ ಅಗತ್ಯವಾದುದಾಗಿದೆ. ಇದರ ಕೊರತೆ ಜರ್ಮನಿಯಲ್ಲಿ ಬಹಳವಿದೆ. ನಮ್ಮಲ್ಲಿ ಇದರ ಕೊರತೆ ಇದೆ ಎಂದು ಅವರು ಸ್ವತಃ ಹೇಳಿಕೊಂಡು ಮುಗುಳ್ನಗಬೇಕು ಎಂದು ಹೇಳುತ್ತಿದ್ದಾರೆ. ಮತ್ತು ನಮ್ಮ ಜನರು ಪ್ರಭಾವಿತರಾಗಿದ್ದಾರೆ. ಮಹಿಳೆಯರ ಸ್ಥಾನದ ಬಗ್ಗೆ ನಿಮ್ಮ ಅಧ್ಯಾಪನೆಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಮತ್ತು ಖಲೀಫರು ಹೇಳಿದ್ದು ನಿಜ ಎಂದು ನಾನು ಭಾವಿಸುತ್ತೇನೆ.

ಜರ್ಮನ್ ಅತಿಥಿ ಕ್ರಿಶ್ಚಿಯನ್ ಕ್ಯಾಥೋಲಿಕ್ ಟಿವಿಯ ಪ್ರತಿನಿಧಿ ಅವರು ಹೇಳುತ್ತಾರೆ: ಖಲೀಫಾ ಅವರ ಭಾಷಣವು ಬಹಳ ಪ್ರಭಾವಶಾಲಿಯಾಗಿತ್ತು. ಪ್ರೇಕ್ಷಕರ ಗಾತ್ರಕ್ಕೆ ಅನುಗುಣವಾಗಿ ಭಾಷಣದ ವ್ಯಾಪ್ತಿ ರೂಪುಗೊಂಡಿತು. ಖಲೀಫಾ ಅವರು ಮೂಲ ತತ್ವಗಳನ್ನು ವಿವರಿಸಿದ ರೀತಿಯಲ್ಲಿ, ಈ ಮೂಲಭೂತ ತತ್ವಗಳು ದೇವರಿಂದ ಬೋಧಿಸಲ್ಪಟ್ಟಿವೆ ಮತ್ತು ಇಂದು ವಿಶ್ವಸಂಸ್ಥೆ ಅಥವಾ ಬೇರೆಯವರಿಂದ ಸ್ಥಾಪಿಸಲ್ಪಟ್ಟಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ ಎಂದು ನಾನು ಭಾವಿಸುತ್ತೇನೆ. ಈ ನಿಟ್ಟಿನಲ್ಲಿ, ಇತರ ಧಾರ್ಮಿಕ ಮುಖಂಡರು ಈ ವಿವರಣೆಯೊಂದಿಗೆ ತಮ್ಮ ಭಾಷಣಗಳನ್ನು ನೀಡಬೇಕು. ಅವರು ಮುಂದೆ ಹೇಳುತ್ತಾರೆ: ಖಲೀಫರ ಸಂಬೋಧನೆಯು ಕೇವಲ ಕೇಳಲು ಸಾಕಾಗುವುದಿಲ್ಲ ಬದಲಿಗೆ ಅವರು ಏನು ಹೇಳಿದರು ಎಂಬುದರ ಬಗ್ಗೆ ಒಬ್ಬರು ಸಾಕಷ್ಟು ಯೋಚಿಸಬೇಕು. ನಾನು ಇಸ್ಲಾಂ ಧರ್ಮದ ನಿಜವಾದ ಬೋಧನೆಗಳ ಬಗ್ಗೆ ಸಾಕಷ್ಟು ಸಂಶೋಧನೆ ಮಾಡಿದ್ದೇನೆ ಮತ್ತು ಇಸ್ಲಾಂ ಬಗ್ಗೆ ನನ್ನ ಆಲೋಚನೆಗಳು ತುಂಬಾ ಉತ್ತಮವಾಗಿದೆ. ಇಸ್ಲಾಂನಲ್ಲಿ ಮಹಿಳೆಯರ ಬಗ್ಗೆ ಖಲೀಫಾ ಅವರ ಬೋಧನೆಗಳು ತುಂಬಾ ಆಸಕ್ತಿದಾಯಕವಾಗಿವೆ, ಆದರೆ ಈ ಹಕ್ಕುಗಳು ಮತ್ತು ಸ್ಥಾನಗಳನ್ನು ಯಾವುದೇ ಎನ್‌ಜಿಒ ಅಥವಾ ಯುಎನ್‌ಒ ಸ್ಥಾಪಿಸಿಲ್ಲ, ಬದಲಿಗೆ ಧರ್ಮದ ಮೂಲಕ ಸರ್ವಶಕ್ತ ದೇವರಿಂದ ಸ್ಥಾಪಿಸಲಾಗಿದೆ ಎಂಬುದನ್ನು ಜನರು ನೆನಪಿಟ್ಟುಕೊಳ್ಳಬೇಕೆಂದು ನಾನು ಬಯಸುತ್ತೇನೆ.

ಮತ್ತೋರ್ವ ಜರ್ಮನಿಯ ಅತಿಥಿ ಜೂಲಿಯನ್ ಸಾಃಇಬ್ ಹೇಳುತ್ತಾರೆ: ಅವರು ನನ್ನ ಬಗ್ಗೆ ಮಾತನಾಡುತ್ತಿದ್ದಾರೆ, ಅವರು ತುಂಬಾ ಮುಕ್ತರಾಗಿದ್ದರು ಮತ್ತು ಅವರ ಸಭೆಯಲ್ಲಿ ನಾನು ಅವರ ಬಗ್ಗೆ ತುಂಬಾ ಸಹಾನುಭೂತಿ ಹೊಂದಿದ್ದೇನೆ ಎಂದು ಹೇಳುತ್ತಾರೆ. ಅವರು ಹೇಳಿದ್ದು ಆಳವಾದ ಅನುಭವದ ಆಧಾರದ ಮೇಲೆ ಆಳವಾದ ವಿಷಯಗಳು ಮತ್ತು ಒಬ್ಬ ವ್ಯಕ್ತಿಯು ತಾನು ವಾಸಿಸುವ ದೇಶಕ್ಕೆ ಸೇವೆ ಸಲ್ಲಿಸಬೇಕು. ಸುತ್ತಮುತ್ತಲಿನ ನಲ್ವತ್ತು ಮನೆಗಳು ನೆರೆಕರೆಯವರು ಎಂದು ಹೇಳಿದ್ದು ಬಹಳ ದೊಡ್ಡ ಸಂಗತಿಯಾಗಿದೆ. ಏಕೆಂದರೆ ಹೀಗೆ ಎಲ್ಲರ ಬಗ್ಗೆ ಕಾಳಜಿ ವಹಿಸಬಹುದಾಗಿದೆ. ಕ್ರೈಸ್ತ ಧರ್ಮ ಕೂಡ ನೆರೆಕರೆಯವರ ಹಕ್ಕುಗಳ ಕುರಿತು ಕಲಿಸಿಕೊಡುತ್ತದೆ. ಆದರೆ ಯಾರೆಲ್ಲ ನೆರೆಕರೆಯವರಲ್ಲಿ ಒಳಪಡುತ್ತಾರೆ ಎಂದು ತಿಳಿಸಿಕೊಟ್ಟಿಲ್ಲ. ಆದ್ದರಿಂದ ಕೇವಲ ಸಮೀಪವಿರುವವರನ್ನು ನೆರೆಕರೆಯವ ಎಂದು ಗಣಿಸಲಾಗುತ್ತದೆ. ಆದರೆ ಇಸ್ಲಾಂ ಅದಕ್ಕಿಂತ ಉತ್ತಮ ಅಧ್ಯಾಪನೆಯನ್ನು ಮುಂದಿರಿಸಿದೆ. ಇದನ್ನು ಈರ್ವ ಕ್ರಿಶ್ಚಿಯನ್ ಹೇಳುತ್ತಿದ್ದಾನೆ.

ಜಾರ್ಜಿಯನ್ ಮಹಿಳೆಯೊಬ್ಬರು ಹೇಳುತ್ತಾರೆ, ನಾನು ಇಂದು ಖಲೀಫಾ

ಅವರ ಎರಡೂ ಸಂಬೋಧನೆಗಳನ್ನು ಆಲಿಸಿದೆ. ಅದರಿಂದ ತುಂಬಾ ಪ್ರಭಾವಿತರಾದರು. ನಿಜವಾದ ಏಕೀಕರಣ ಎಂದರೆ ಒಬ್ಬ ವ್ಯಕ್ತಿ ತನ್ನ ಧರ್ಮ, ಸಮುದಾಯ ಮತ್ತು ಮಾನವೀಯತೆಗೆ ಸೇವೆ ಸಲ್ಲಿಸಬೇಕು ಎಂದು ಈ ಭಾಷಣಗಳು ಇಂದು ನನಗೆ ಅರ್ಥ ಮಾಡಿಕೊಟ್ಟಿವೆ. ಜಲ್ಸ ಸಾಲಾನದ ವಾತಾವರಣವನ್ನು ನಾನು ಇಷ್ಟಪಟ್ಟಿದ್ದೇನೆ ಏಕೆಂದರೆ ಇಲ್ಲಿ ಎಲ್ಲಾ ರೀತಿಯ ಸಮುದಾಯಗಳು ಮತ್ತು ಜನಾಂಗಗಳು ಮತ್ತು ಎಲ್ಲಾ ರೀತಿಯ ಜನರು ಬಹಳ ಪ್ರೀತಿ ಮತ್ತು ಒಪ್ಪಂದದಿಂದ ಮತ್ತು ಶಾಂತಿಯುತವಾಗಿ ಒಟ್ಟುಗೂಡಿದರು, ಅದು ಬೇರೆಲ್ಲಿಯೂ ಕಂಡುಬರುವುದಿಲ್ಲ. ನಾನು ಮೊದಲ ಬಾರಿಗೆ ಲಜ್ನಾ ಸಂಬೋಧನೆಯಲ್ಲಿ ಇಸ್ಲಾಂನಲ್ಲಿ ಮಹಿಳೆಯರ ಸ್ಥಾನ ಏನು ಎಂದು ಕಂಡುಕೊಂಡೆ. ಯುದ್ಧಗಳಲ್ಲಿ ಭಾಗವಹಿಸಿದ ಮುಸ್ಲಿಂ ಮಹಿಳೆಯರೂ ಇದ್ದಾರೆ. ಇದು ನನಗೆ ದೊಡ್ಡ ಆಶ್ಚರ್ಯವಾಗಿತ್ತು.

ಓರ್ವ ಅತಿಥಿ ಅಲಿ ಬಕರ್ ಸಾಹಿಬ್, ಗ್ರೀನ್ ಮುಸ್ಲಿಂ ಪಾರ್ಟಿಯ ವಕ್ತಾರರು ಹೇಳುತ್ತಾರೆ: ಖಲೀಫಾ ಅವರ ಭಾಷಣವು ಆಸಕ್ತಿದಾಯಕ ಮತ್ತು ಸ್ಫೂರ್ತಿದಾಯಕವಾಗಿತ್ತು. ನೀವು ಹೇಳಿದ ವಿಷಯಗಳು ಮುಸ್ಲಿಮರಿಗೆ ಮಾತ್ರವಲ್ಲದೆ ಸಮಾಜದ ಪ್ರತಿಯೊಂದು ವರ್ಗದವರಿಗೂ ಮುಖ್ಯವಾಗಿದೆ ಮತ್ತು ಮುಸ್ಲಿಂ ರಾಷ್ಟ್ರಗಳಲ್ಲಿ ಮಾತ್ರವಲ್ಲದೆ ಇಡೀ ಜಗತ್ತಿನಲ್ಲಿ ಶಾಂತಿಯನ್ನು ಪ್ರಯತ್ನಿಸಬೇಕು ಎಂದು ಹೇಳುವುದು ನನಗೆ ತುಂಬಾ ಆಸಕ್ತಿದಾಯಕವಾಗಿತ್ತು.

ನಂತರ ಜರ್ಮನ್ ಮಹಿಳಾ ಅತಿಥಿ ಮೇರಿ ಸಾಹಿಬಾ. ಆಕೆ ಮುಸ್ಲಿಂ ಅಲ್ಲದಿದ್ದರೂ ಗೌರವ ಸೂಚಕವಾಗಿ ದುಪಟ್ಟಾ ಧರಿಸಿ ಕುಳಿತಿದ್ದಳು. ಅವರು ಹೇಳುತ್ತಾರೆ: ನಾನು ಕ್ರಿಶ್ಚಿಯನ್ ಆಗಿದ್ದೇನೆ ಮತ್ತು ಖಲೀಫಾ ಅವರ ಭಾಷಣದ ಸಮಯದಲ್ಲಿ ನಮ್ಮ ವ್ಯತ್ಯಾಸವು ಚಿಕ್ಕದಾಗಿದೆ ಎಂದು ನನಗೆ ಅನಿಸಿತು. ನಾವು ಶಾಂತಿಯುತವಾಗಿ ಒಟ್ಟಿಗೆ ಬದುಕಬಹುದು ಮತ್ತು ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಭಾಷಣದ ಸಮಯದಲ್ಲಿ, ನನ್ನ ಹೃದಯವು ತುಂಬಾ ಪ್ರಭಾವಿತವಾಗಿತ್ತು, ನನ್ನ ಕಣ್ಣುಗಳು ತೇವವಾದವು. ಮಹಿಳೆಯರ ಬಗ್ಗೆ ಅವರು ನೀಡಿದ ಬೋಧನೆಗಳು ಇಸ್ಲಾಂ ಮಹಿಳೆಯರಿಗೆ ನೀಡುವ ಹಕ್ಕುಗಳು ಖಲೀಫರ ಭಾಷಣದಲ್ಲಿ ವಿವರಿಸಿದಂತೆಯೇ ಮತ್ತು ಇತರ ಸಮುದಾಯಗಳು ವಿವರಿಸಿದಂತೆಯೇ ಇರುತ್ತವೆ. ಈ ಬೋಧನೆಗಳು ಶಿಕ್ಷಣ ಮಾತ್ರವಲ್ಲದೆ ಅಭ್ಯಾಸ ಮಾಡುತ್ತವೆ ಎಂಬುದನ್ನು ಜಲ್ಸ ಸಾಲಾನದಲ್ಲಿ ನಾನು ಗಮನಿಸಿದ್ದೇನೆ. ಅವರು ಹೇಳುತ್ತಾರೆ: ಅವರ ಮಾತುಗಳು ಹೃದಯವನ್ನು ಸ್ಪರ್ಶಿಸುತ್ತಿದ್ದವು ಮತ್ತು ಇಲ್ಲಿ ಜನರು ಮಾತುಗಳನ್ನು ಕೇಳಿ ಅಳುವುದನ್ನು ನಾನು ನೋಡಿದ್ದೇನೆ.

ಜಲ್ಸದಲ್ಲಿ, ಏಳು ದೇಶಗಳ ನಲವತ್ತೊಂಬತ್ತು ಜನರು ಸಹ ಬೈಅತ್ ಮಾಡಲು ಸಾಧ್ಯವಾಯಿತು, ಅವರು ಈ ದಿನಗಳಲ್ಲಿ ಪ್ರಭಾವಿತರಾಗಿದ್ದರು.

ಮತ್ತು ಸರ್ಬಿಯಾದ ಅತಿಥಿ ಶ್ರೀ ಉರೋಸ್ ಸಾಹಿಬ್ ಹೇಳುತ್ತಾರೆ: ಜಲ್ಸಾ ಎಂಬುದು ಪ್ರಪಂಚದಾದ್ಯಂತದ ಅಹ್ಮದೀಯ ಜಮಾಅತ್ ಸದಸ್ಯರ ವಾರ್ಷಿಕ ಅಂತರರಾಷ್ಟ್ರೀಯ ಕೂಟವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಬೈಅತ್ ಸಮಾರಂಭವು ನನ್ನ ಮೇಲೆ ಆಧ್ಯಾತ್ಮಿಕ ಮತ್ತು ಭಾವನಾತ್ಮಕ ಪ್ರಭಾವವನ್ನು ಬೀರಿದೆ. ಮೊದಲ ಕ್ಷಣದಿಂದ ಎಲ್ಲರೂ ಪರಸ್ಪರ ಹೆಗಲ ಮೇಲೆ ಕೈ ಇರಿಸಿದ್ದರು. ನನಗೆ ಒಂದು ಪದವೂ ಅರ್ಥವಾಗಲಿಲ್ಲ ಆದರೆ ಏನು ಹೇಳಿದರೂ ಅದು ಹೇಗೋ ನನ್ನ ದೇಹ ಮತ್ತು ಮನಸ್ಸಿನ ಮೂಲಕ ಹಾದುಹೋಯಿತು ಮತ್ತು ನಡುಕ ಆವರಿಸಿತು ಅದು ನನ್ನನ್ನು ಆಧ್ಯಾತ್ಮಿಕವಾಗಿ ಸರ್ವಶಕ್ತನಾದ ಅಲ್ಲಾಹನ ಹತ್ತಿರಕ್ಕೆ ಕರೆದೊಯ್ದಿತು. ಬಯಾತ್‌ನಿಂದಾಗಿ ನಾನು ಕಣ್ಣೀರು ಹಾಕಿದೆ.

ಜಾನ್ ಮೆರ್ಟ್ ಎಂಬ ಟರ್ಕಿಯ ಯುವಕ ಹ್ಯಾಂಬರ್ಗ್‌ನವರು ಹೇಳುತ್ತಾರೆ: ಈ ಜಲ್ಸದಲ್ಲಿ ಸೇರುವ ಮೂಲಕ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅಹ್ಮದಿಯರ ಹೃದಯದಲ್ಲಿ ಇಸ್ಲಾಮಿನ ವಿಜಯಕ್ಕಾಗಿ ನಂದಿಸಲಾಗದ ಬೆಂಕಿಯನ್ನು ಹೊತ್ತಿದ್ದನ್ನು ಗಮನಿಸಿದ್ದೇನೆ. ಜಾನ್ ಮರ್ಟ್ ಸಹಿಬ್ ಅವರು ಜಲ್ಸದ ಕೊನೆಯ ದಿನ ಲಿಖಿತ ಬೈಅತ್ ಸ್ವೀಕರಿಸಿದ ನಂತರ ನನ್ನ ಕೈಯಲ್ಲಿ ಕೂಡ ಬೈಅತ್ ಸ್ವೀಕರಿಸಿದರು.

ನಾನು ವಿವರಿಸಿದ ಕೆಲವು ಜನರ ಪರಿಸ್ಥಿತಿಗಳು ಇದಗಿದ್ದವು.

ಅಲ್ಲಾಹನ ಅನುಗ್ರಹದಿಂದ ಜಲ್ಸಾ ಸಾಲಾನ ಜರ್ಮನಿಯಲ್ಲಿ ಮಾಧ್ಯಮ ಪ್ರಸಾರವೂ ಚೆನ್ನಾಗಿತ್ತು. ನಾಲ್ಕು ಟಿವಿ ಚಾನೆಲ್‌ಗಳು ARD, RTL, Regio TV, SWR. ಈ ಟಿವಿ ಚಾನೆಲ್‌ಗಳ ಮೂಲಕ ಜಮಾಅತ್‌ನ ಸುದ್ದಿ ನಲವತ್ತೊಂದು ಮಿಲಿಯನ್ ಜನರನ್ನು ತಲುಪಿದೆ ಎಂದು ಹೇಳುತ್ತಾರೆ.

ಪತ್ರಿಕೆಗಳು ಹನ್ನೊಂದು ಜರ್ಮನ್ ಪತ್ರಿಕೆಗಳು ವಿವಿಧ ಸುದ್ದಿ ಮತ್ತು ಲೇಖನಗಳನ್ನು ಪ್ರಕಟಿಸಿದವು. ಅದರ ಮೂಲಕ ಜಮಾಅತ್ ನ ಸಂದೇಶ ಮತ್ತು ಜಲ್ಸದ ಸುದ್ದಿ ಐವತ್ತು ದಶಲಕ್ಷಕ್ಕೂ ಹೆಚ್ಚು ಜನರನ್ನು ತಲುಪಿತು.

ರೇಡಿಯೋ ಕೇಂದ್ರಗಳು ಅಂದರೆ ಐದು ರೇಡಿಯೋ ಕೇಂದ್ರಗಳು ಸುದ್ದಿಗಳನ್ನು ಪ್ರಸಾರ ಮಾಡಿವೆ. ಅವರ ಮೂಲಕ ಹದಿನಾಲ್ಕು ಮಿಲಿಯನ್ ಜನರಿಗೆ ಸಂದೇಶ ತಲುಪಿದೆ ಎಂದೂ ಹೇಳಲಾಗಿದೆ.

ಆನ್‌ಲೈನ್ ಮಾಧ್ಯಮ ಪ್ರಸಾರದ ಮೂಲಕ, ಸಂದೇಶವು ಎರಡು ಮಿಲಿಯನ್ ಜನರನ್ನು ತಲುಪಿತು ಮತ್ತು ಲಭ್ಯವಿರುವ ಒಟ್ಟು ಡೇಟಾದಿಂದ, ಜಲ್ಸಾ ಸಾಲಾನದ ಕವರೇಜ್ ನೂರ ಎಂಟು ಮಿಲಿಯನ್ ಜನರನ್ನು ತಲುಪುತ್ತದೆ ಎಂದು ಅವರು ನಂಬುತ್ತಾರೆ. ಆದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಭವಿಷ್ಯದಲ್ಲಿ ಉತ್ತಮ ಫಲಿತಾಂಶಗಳನ್ನು ನೀಡಲಿ.

ಜನರ ಕೆಲವು ಅನಿಸಿಕೆಗಳನ್ನು ನಾನು ಮುಂದಿರಿಸಿದ್ದೇನೆ.

ಅಲ್ಲಾಹನು ತನ್ನ ಔದಾರ್ಯದಿಂದ ನಮ್ಮ ತಪ್ಪುಗಳನ್ನು ಮರೆಮಾಚುತ್ತಾನೆ ಎಂಬುದಕ್ಕೆ ಅವನಿಗೆ ಕೃತಜ್ಞತೆ. ಅನೇಕ ಮಸೀದಿಗಳ ಉದ್ಘಾಟನೆಯ ವೇಳೆಯೂ ಜನರು ಸಕಾರಾತ್ಮಕ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇಸ್ಲಾಮಿನ ಕುರಿತು ನಮ್ಮ ಅಭಿಪ್ರಾಯ ಬದಲಾಗಿದೆ ಎಂದು ಜನರು ಹೇಳಿದರು.

ನಮಗೆ ಪರಿಚಿತರಾದ ಅಹ್ಮದಿಯರು ನಮಗೆ ಇಸ್ಲಾಮಿನ ಸುಂದರ ಅಧ್ಯಾಪನೆಯ ಬಗ್ಗೆ ತಿಳಿಸಿಕೊಡಲಿಲ್ಲವೆಂದು ಅವರು ದೂರು ಕೂಡ ಹೇಳಿದರು. ಆದ್ದರಿಂದ ಪ್ರತಿಯೊಬ್ಬ ಅಹ್ಮದೀ ಕೀಳರಿಮೆ ಹೊಂದದೇ ಇಸ್ಲಾಮಿನ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಬಗ್ಗೆ ತಿಳಿಸಿಕೊಡಬೇಕು. ಉದಾಹರಣೆಗೆ ಇರಾನಿನ ಹುಡುಗನೊಬ್ಬ ಜಲ್ಸಕ್ಕೆ ಆಗಮಿಸಿದ್ದನು. ಅವರು ನಮ್ಮ ಅಹ್ಮದೀಯರೊಬ್ಬರೊಂದಿಗೆ ಮಾತನಾಡಿದರು. ಆತನನ್ನು ಅಹ್ಮದಿ ಗೆಳೆಯನೊಬ್ಬ ಕರೆತಂದಿದ್ದ. ಇಲ್ಲಿಗೆ ಬಂದ ಮೇಲೆ ನನಗೆ ತುಂಬಾ ಬೇಸರವಾಗಿದೆ ಎಂದರು. ಅದಕ್ಕೆ ಅವರು ಕಾರಣ ಕೇಳಿದರು. ಅವರು ಹೇಳಿದರು, ನೀವು ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ(ಅ) ಅವರನ್ನು ಪ್ರವಾದಿ ಎಂದು ಪರಿಗಣಿಸುತ್ತೀರಿ ಎಂದು ನಾನು ಇಂದು ಇಲ್ಲಿ ತಿಳಿದುಕೊಂಡಿದ್ದೇನೆ. ಆದರೆ, ನಾವು ಯಾವ ರೀತಿಯ ಪ್ರವಾದಿಯನ್ನು ನಂಬುತ್ತೇವೆ ಎಂದು ಅವರಿಗೆ ವಿವರವಾಗಿ ವಿವರಿಸಿದಾಗ, ಹಝ್ರತ್ ಪೈಗಂಬರ್(ಸ) ಅವರ ಗುಲಾಮರಾಗಿ ಬಂದಿರುವ ಪ್ರವಾದಿಯನ್ನು ನಂಬುತ್ತೇವೆ. ಪ್ರವಾದಿ(ಸ.ಅ) ಅವರ ಧರ್ಮವನ್ನು ಹರಡುವ ಮತ್ತು ಪ್ರವಾದಿ (ಸ) ಅವರ ಭವಿಷ್ಯವಾಣಿಯ ಪ್ರಕಾರ ಬಂದವರು ಮತ್ತು ಅವರು ಬರಬೇಕಾಗಿದ್ದ ಯೇಸು. ಎಲ್ಲವೂ ಸರಿಯಾಗಿದೆ ಎಂದು ಅವರು ಹೇಳುತ್ತಾರೆ. ನಿಮ್ಮ ಮಹದಿ ಈಸಾ ನಬಿಯ ಸಿದ್ಧಾಂತ ಸರಿಯಾಗಿದೆ ಎಂದು ನಾನು ನಂಬುತ್ತೇನೆ, ಇದು ಸಾಮಾನ್ಯ ಅರ್ಥದಲ್ಲಿ ತೋರುತ್ತದೆ, ಆದರೆ ನನ್ನ ಸ್ನೇಹಿತ ನನಗೆ ಏಕೆ ಹೇಳಲಿಲ್ಲ! ಹಲವು ವರ್ಷಗಳಿಂದ ನನ್ನ ಸ್ನೇಹಿತನಾಗಿದ್ದ. ಹಾಗಾಗಿ ಹೇಗಾದರೂ ಮಾಡಿ ನಮ್ಮ ಗೆಳೆಯರಿಗೆ, ಪರಿಚಿತರಿಗೆ ಕೀಳರಿಮೆಯಿಲ್ಲದೆ ತಬ್ಲೀಗ್ ಮಾಡಬೇಕು ಮತ್ತು ಈ ಬಗ್ಗೆ ಪರಿಣಾಮಕಾರಿ ತಬ್ಲೀಗ್‌ನ ಅಗತ್ಯವಿದೆ. ಕೇವಲ ಕರಪತ್ರಗಳನ್ನು ಹಂಚುವುದು ಅಥವಾ ಪತ್ರದ ಪೆಟ್ಟಿಗೆಗಳಲ್ಲಿ ಕರಪತ್ರಗಳನ್ನು ಹಾಕುವುದು ತಬ್‌ಲೀಗ್ ಇಲಾಖೆಯ ಉದ್ದೇಶವನ್ನು ಪೂರೈಸುವುದಿಲ್ಲ.

ನಾವು ಶಾಂತಿಯ ಬಗ್ಗೆ ಮಾತನಾಡಿದ್ದೇವೆ, ಈಗ ಶಾಂತಿ ಹೇಗೆ ಸ್ಥಾಪನೆಯಾಗುತ್ತದೆ ಎಂಬುದು ಮುಂದಿನ ವಿಷಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಮಹದಿ(ಅ) ಅವರನ್ನು ನಂಬುವ ಮೂಲಕ ಸ್ಥಾಪಿಸಲ್ಪಡುತ್ತದೆ, ಆದ್ದರಿಂದ ಅವರನ್ನು ಸ್ವೀಕರಿಸಿ. ತಬ್ಲೀಗ್‌ಗಾಗಿ ಸಾರುವ ಪ್ರತಿಯೊಂದು ಅವಕಾಶವನ್ನು ನಾವು ಬಳಸಿಕೊಳ್ಳಬೇಕು.

ಜನರಿಗೆ ಈಗಲೂ ಧರ್ಮದ ಮಾತುಗಳನ್ನು ಆಲಿಸಲು ಅಭಿರುಚಿಯಿದೆ. ಹಾಗಾಗಿ ಅಂತಹವರನ್ನು ಕರೆದು ಮಾತನಾಡಿಸುವ ಕಾರ್ಯಕ್ರಮಗಳನ್ನು ಮಾಡಬೇಕು.

ಆದಾಗ್ಯೂ, ನಮಗೆ ಪ್ರತಿಯೊಂದು ಜಾಗದಲ್ಲಿ ನಮ್ಮ ಅವಲೋಕನ ನಡೆಸಬೇಕಾದ ಆವಶ್ಯಕತೆಯಿದೆ. ಕೊರತೆಗಳ ಬಗ್ಗೆ ಗಮನಹರಿಸಬೇಕು. ಸುಧಾರಣೆಗೆ ಬೇಕಾದಷ್ಟು ಎಡೆಯಿದೆ. ಅತ್ಯುತ್ತಮವಾದುದನ್ನು ಹುಡುಕುವ ಅಭ್ಯಾಸವನ್ನು ಮುಂದುವರೆಸಬೇಕು. ದುಆ ಮಾಡುತ್ತಾ ಅಲ್ಲಾಹನಿಂದ ಸಹಾಯವನ್ನು ಬೇಡುತ್ತಾ ಕೆಲಸವನ್ನು ಆರಂಭಿಸಬೇಕು. ವ್ಯವಸ್ಥಾಪಕರು ಮತ್ತು ಭಾಗವಹಿಸುವವರು ಸದಾ ಜಲ್ಸದ ಉದ್ದೇಶವನ್ನು ಈಡೇರಿಸಲು ಪರಿಪೂರ್ಣ ಪ್ರಯತ್ನವನ್ನು ನಡೆಸಬೇಕು.

ಅಲ್ಲಾಹನು ನಮ್ಮ ಮೇಲೆ ಕೃಪೆದೋರಲಿ ಮತ್ತು ಇನ್ನು ಮುಂದೆಯೂ ಎಲ್ಲರಿಗೂ ಉತ್ತಮ ರೀತಿಯಲ್ಲಿ ಜಲ್ಸದ ಉದ್ದೇಶವನ್ನು ಪೂರೈಸಲು ಸೌಭಾಗ್ಯ ನೀಡಲಿ. ...*...*...*...

(ಪುಟ ಸಂಖ್ಯೆ 02ರ ಉಳಿದ ಭಾಗ)

ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಮಿಸುವುದು ಹೆಚ್ಚು ಆವಶ್ಯಕವಾಗಿದೆ.

ಇದು ನಮ್ಮ ಪ್ರತೀಕ್ಷೆಯನ್ನು ನಿರಾಕರಿಸುತ್ತದೆ. ಒಂದು ವಿಷಯ ಯೋಚಿಸಲು ಅರ್ಹವಾಗಿದೆ. ಪರಲೋಕದಿಂದ ಪುನರಾಗಮಿಸುವ ದಾರಿ ತೆರೆದಿದ್ದರೆ ಅಲ್ಲಾಹನು ಕೆಲವು ದಿನಗಳಿಗೋಸ್ಕರವಾದರೂ ಏಲಿಯಾ ಪ್ರವಾದಿಯನ್ನು ಲೋಕಕ್ಕೆ ಪುನಃ ಏಕೆ ಕಳುಹಿಸಲಿಲ್ಲ ಮತ್ತು ಈ ಕಾರಣದಿಂದ ಲಕ್ಷಾಂತರ ಯಹೂದಿಯರನ್ನು ನರಕಕ್ಕೆ ಪ್ರವೇಶಿಸುವಂತೆ ಏಕೆ ಮಾಡಿದನು.

ಹಝ್ರತ್ ಈಸಾ ಆರುನೂರು ವರ್ಷಗಳಿಂದ ಆಕಾಶದಲ್ಲಿ

ಸಶರೀರವಾಗಿ ಕುಳಿತಿದ್ದಾರೆ ಎಂಬ ಅಭಿಪ್ರಾಯ ಸಹಾಬರಿಗಿದ್ದಿದ್ದರೆ ಅವರು ಖಂಡಿತವಾಗಿಯೂ ಆ ವಿಷಯ ಹಝ್ರತ್ ಅಬೂಬಕರ್(ರ)ರವರ ಮುಂದೆ ಪ್ರಸ್ತಾಪಿಸುತ್ತಿದ್ದರು. ಆದರೆ ಆ ದಿನ ಎಲ್ಲ ಸಹಾಬರು ಅಂಗೀಕರಿಸಿದುದೇನೆಂದರೆ ಎಲ್ಲ ಪ್ರವಾದಿಗಳು ಮೃತರಾಗಿರುವರು ಎಂದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಪಮಾನಕರವಾದ ಅಂತಹ ನಂಬಿಕೆ ಮೇಲೆ ಶಾಪವಿದೆ. ಸಹಾಬರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೇಮಿಗಳಾಗಿದ್ದರು. ತಮ್ಮ ಪ್ರಿಯ ಪೈಗಂಬರ್ ಮೃತರಾದರು ಆದರೆ ಈಸಾ ಆಕಾಶದಲ್ಲಿ ಜೀವಂತವಾಗಿ ಕುಳಿತಿರುವರು ಎಂಬ ಮಾತನ್ನು ಆಲಿಸುತ್ತಿದ್ದರೆ ಅವರು ಜೀವಿಸಿರುವಾಗಲೇ ಮೃತ ಸಮಾನರಾಗುತ್ತಿದ್ದರು.

ಮನುಷ್ಯನು ಭೌತಿಕ ಶರೀರದೊಂದಿಗೆ ಆಕಾಶಕ್ಕೆ ಏರಿ ಹೋಗಿ ವಾಸಿಸುವುದು ಮತ್ತು ದೇವದೂತರು ಶರೀರ ಹೊಂದಿದವರಾಗಿ ಭೂಮಿಯಲ್ಲಿ ಜೀವಿಸುವುದು ಅಲ್ಲಾಹನ ನಡೆವಳಿಕೆ ಕ್ರಮಗಳಿಗೆ ವಿರುದ್ಧವಾದುದಾಗಿದೆ. ಅಲ್ಲಾಹನು ಹೇಳುತ್ತಾನೆ: ವಲನ್ ತಜಿದ ಲಿ ಸುನ್ನತಿಲ್ಲಾಹಿ ತಬ್‌ದೀಲ – ಅಲ್ಲಾಹನ ರೂಢಮೂಲ ಕ್ರಮದಲ್ಲಿ ಎಂದಿಗೂ ನೀನು ಯಾವುದೇ ಬದಲಾವಣೆಯನ್ನೂ ಕಾಣಲಾರೆ. (48:24).

ನೀವು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ. ಎಲ್ಲಾ ವಿಧಗಳ ಕೆಡುಕುಗಳು ಮತ್ತು ವಿನಾಶಗಳು ಇಸ್ಲಾಮಿನಲ್ಲಿ ಸಂಭವಿಸಿದೆ. ಈ ಹಿಂದುಸ್ಥಾನದಲ್ಲಿಯೇ 29 ಲಕ್ಷ ಜನರು ಧರ್ಮ ತ್ಯಾಗ ಮಾಡಿ ಕ್ರೈಸ್ತರಾಗಿದ್ದಾರೆ. ಇದಕ್ಕೆ ಕಾರಣವೇನೆಂದರೆ ಮುಸ್ಲಿಮರು ಹಝ್ರತ್ ಈಸಾರವರ ಬಗ್ಗೆ ನಿರರ್ಥಕ ಮತ್ತು ಮಿತಿಮೀರಿದ ಪ್ರತೀಕ್ಷೆಗಳನ್ನು ಇರಿಸಿಕೊಂಡು ಮತ್ತು ಆ ಪ್ರವಾದಿ ಪ್ರತಿಯೊಂದು ಗುಣದಲ್ಲಿ ವೈಶಿಷ್ಟ್ಯ ಹೊಂದಿರುವುದಾಗಿ ಪ್ರತಿಪಾದಿಸಿ ಕ್ರೈಸ್ತರಿಗೆ ಸಮೀಪವಾದರು.
(ಪುಟ–22–25)

ನಂತರ ನಾವು ಮೂಲ ಲೇಖನಕ್ಕೆ ಹಿಂತಿರುಗುತ್ತೇವೆ, ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ(ಅ) ಅವರು ಮಸೀಹ್(ಅ) ಅವರ ಹೆಸರಿನಲ್ಲಿ ಆಗಮಿಸಿದರು. ಅವರು(ಅ) ಈಸಾ ಮಸೀಹರ ಸದೃಶರೂಪವಾಗಿದ್ದಾರೆ ಏಕೆಂದರೆ ನೀವು(ಅ) ಹಝ್ರತ್ ಈಸಾ ಇಬ್ನ್ ಮರ್ಯಮ್(ಅ) ಅವರೊಂದಿಗೆ ಅನೇಕ ಹೋಲಿಕೆಗಳನ್ನು ಹೊಂದಿದ್ದರು. ಹದಿನಾರು ಹೋಲಿಕೆಗಳನ್ನು ಸೈಯ್ಯದ್ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮ ಪುಸ್ತಕ 'ತಝ್‌ಕಿರತುಶ್ಶಹಾದತೈನ್'ನಲ್ಲಿ ವಿವರಿಸಿದ್ದಾರೆ.

ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಆಗಮಿಸಲಿರುವವನ್ನು ಮಸೀಹ್ ಎಂದು ಹೆಸರಿಸಿದ್ದಾರೆ, ಮಸೀಹರ ಸದೃಶರೂಪ ಎಂದಲ್ಲ. ಅದರಲ್ಲಿರುವ ರಹಸ್ಯವೇನೆಂದರೆ ಈ ಉಮ್ಮತ್ತಿನ ಒಂದು ಭಾಗವು ಗೈರಿಲ್ ಮಗ್‌ಝೂಬ್ ನ ಭವಿಷ್ಯವಾಣಿಯ ಪ್ರಕಾರ ಯಹೂದಿಗಳ ಬಿರುದನ್ನು ಪಡೆಯುವುದು. ಈ ಆಳವಾದ ಬುದ್ಧಿವಂತಿಕೆಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಒಂದು ಉಮ್ಮತಿಯನ್ನು ಈಸಾ ಎಂದು ಹೆಸರಿಸುವ ಉದ್ದೇಶವೇನು ಮತ್ತು ಇಂಜೀಲ್ ಮತ್ತು ಪ್ರವಾದಿಯ ಹದೀಸ್‌ಗಳಲ್ಲಿ ಈಸಾ ಎಂದು ಏಕೆ ಹೆಸರಿಸಲಾಗಿದೆ ಮತ್ತು ಮೂಸಾನ ಸದೃಶರೂಪವಂತೆ ಈ ಸ್ಥಳದಲ್ಲಿ ಮಸೀಲೆ ಈಸಾ (ಈಸಾ ಮಸೀಹನ ಸದೃಶರೂಪ) ಎಂಬ ಪದದೊಂದಿಗೆ ಏಕೆ ನೆನಪಿಸಿಕೊಳ್ಳಲಿಲ್ಲ?

ಆದರೆ ಹಝ್ರತ್ ಈಸಾ(ಅ) ಅವರು ಅನುಭವಿಸಿದ ಘಟನೆಯು ಈ ಉಮ್ಮತ್ತಿನ ಕೊನೆಯ ಖಲೀಫಾ ಅವರಿಗೆ ಈಸಾ ಎಂದು ಹೆಸರಿಸಿದರೆ ಮಾತ್ರ ನಿಜವಾಗಬಲ್ಲದು. ಕಾರಣವೇನೆಂದರೆ, ಹಝ್ರತ್ ಈಸಾ(ಅ) ಅವರಿಗೆ ಯಹೂದಿಗಳು ಸ್ವೀಕರಿಸಲಿಲ್ಲ ಏಕೆಂದರೆ **ಪ್ರವಾದಿ ಮಲಾಕಿಯ ಪುಸ್ತಕದಲ್ಲಿ 'ಪ್ರವಾದಿ ಇಲ್ಯಾಸ್ (ಏಲಿಯಾ) ಮತ್ತೊಮ್ಮೆ ಈ ಜಗತ್ತಿಗೆ ಹಿಂದಿರುಗುವವರೆಗೂ ಈಸಾ ಕಾಣಿಸಿಕೊಳ್ಳುವುದಿಲ್ಲ ಎಂದು ದಾಖಲಿಸಲಾಗಿದೆ. ಆದರೆ ಪ್ರವಾದಿ ಇಲ್ಯಾಸ್ ಮತ್ತೊಮ್ಮೆ ಹಿಂತಿರುಗಲಿಲ್ಲ ಮತ್ತು ಹಝ್ರತ್ ಯಾಹ್ಯಾ (ಯುಹನ್ನ) ಅವರನ್ನು ಇಲ್ಯಾಸ್ ಎಂದು ಘೋಷಿಸಲಾಯಿತು. ಈ ಕಾರಣಕ್ಕಾಗಿ, ಯಹೂದಿಗಳು ಹಝ್ರತ್ ಈಸಾ(ಅ) ಅವರನ್ನು ಸ್ವೀಕರಿಸಲಿಲ್ಲ**. ಆದ್ದರಿಂದ ದೇವರ ತೀರ್ಪಿನಲ್ಲಿ, ಹೋಲಿಕೆಯನ್ನು ಪೂರ್ಣಗೊಳಿಸಲು, ಕೊನೆಯ ದಿನಗಳಲ್ಲಿ ಈ ಉಮ್ಮತ್ತಿನ ಕೆಲವು ಜನರು ಹಝ್ರತ್ ಈಸಾ(ಅ) ಅವರ ಪ್ರವಾದಿತ್ವ ಮತ್ತು ಸತ್ಯಾಸತ್ಯತೆಯನ್ನು ತಿರಸ್ಕರಿಸಿದ ಯಹೂದಿಗಳಂತೆ ಆಗುತ್ತಾರೆ ಎಂದು ನಿರ್ಧರಿಸಲಾಯಿತು. **ಅಂತಹ 'ಯಹೂದಿಗಳಿಗೆ' ಹಿಂದಿನ ಪ್ರವಾದಿಯ ಪುನರಾವರ್ತನೆಯ ಬಗ್ಗೆ ಕೆಲವು ಭವಿಷ್ಯವಾಣಿಗಳು ಇರಬೇಕಾದುದು ಅತ್ಯಗತ್ಯ – ಪ್ರವಾದಿ ಇಲ್ಯಾಸ್ ಬಗ್ಗೆ ಭವಿಷ್ಯವಾಣಿಯಂತೆಯೇ – ಮತ್ತು ಅಂತಹ ಯಹೂದಿಗಳು ಖಂಡಿತವಾಗಿಯೂ ಈ ಉಮ್ಮತ್ತಿನಲ್ಲಿ ಹುಟ್ಟುತ್ತಾರೆ ಎಂದು ದೇವರ ತೀರ್ಪಿನಲ್ಲಿ ನಿರ್ಧರಿಸಲ್ಪಟ್ಟಿತು. ಆದ್ದರಿಂದ ಹಝ್ರತ್ ಯಹ್‌ಯಾ ಅವರ ಹೆದರು ಇಲ್ಯಾಸ್ ಎಂದು ಇರಿಸಿದ ಹಾಗೆ ನನ್ನ ಹೆಸರು ಈಸಾ ಎಂದಿರಿಸಲಾಯಿತು.** ಇದು ಆಯತ್ **ಗೈರಿಲ್ ಮಗ್‌ಝೂಬಿ ಅಲೈಹಿಮ್** ನಲ್ಲಿ ಸೂಚಿಸಲ್ಪಟ್ಟಿದೆ:

ಹೀಗಾಗಿ, ಈಸಾನ ಬರುವಿಕೆಯ ಕುರಿತಾದ ಭವಿಷ್ಯವಾಣಿಯು ಈ ಸಮುದಾಯಕ್ಕೆ ಪ್ರವಾದಿ ಇಲ್ಯಾಸ್ ಅವರ ಆಗಮನದ ಕುರಿತಾದ ಭವಿಷ್ಯವಾಣಿಯು ಯಹೂದಿಗಳಿಗೆ ಆಗಿತ್ತು. ಆದ್ದರಿಂದ, ಈ ಹೋಲಿಕೆಯನ್ನು ಸ್ಥಾಪಿಸಲು ನನಗೆ 'ಈಸಾ' ಎಂದು ಹೆಸರಿಸಲಾಯಿತು. ಮತ್ತು ಈ ಉಮ್ಮತ್ತಿನಲ್ಲಿ ಕಾಣಿಸಿಕೊಳ್ಳಲಿರುವ ಈ 'ಈಸಾ'ನನ್ನು ನಿರಾಕರಿಸುವವರನ್ನು 'ಯಹೂದಿಗಳು' ಎಂದು ಕರೆಯಲಾಗುತ್ತಿತ್ತು. ಆಯತ್ **ಗೈರಿಲ್ ಮಗ್‌ಝೂಬಿ ಅಲೈಹಿಮ್** ನಲ್ಲಿ ಅವರನ್ನು ಯಹೂದಿಗಳು ಎಂದು ಉಲ್ಲೇಖಿಸಲಾಗಿದೆ. ಅಂದರೆ, ಈ ಉಮ್ಮತ್ ಈಸಾ ಮಸೀಹರನ್ನು ನಿರಾಕರಿಸುವ 'ಯಹೂದಿಗಳು'. ಹಝ್ರತ್ ಈಸಾ ಅವರನ್ನು ಸ್ವೀಕರಿಸದ ಯಹೂದಿಗಳಿಗೆ ಹೋಲುತ್ತಾರೆ. ಹೀಗಾಗಿ, ಈ ರೀತಿಯಾಗಿ ಪರಿಪೂರ್ಣ ಹೋಲಿಕೆಯನ್ನು ಸ್ಥಾಪಿಸಲು ನನ್ನ ಹೆಸರು ಈಸ ಎಂದಿರಿಸಲಾಯಿತು. ಅದೇ ರೀತಿಯಲ್ಲಿ, ಪ್ರವಾದಿ ಇಲಿಯಾಸ್ ಅವರ ಮರಳುವಿಕೆಗಾಗಿ ಕಾಯುತ್ತಿದ್ದ ಯಹೂದಿಗಳು ಇಲ್ಯಾಸ್ ಹಿಂತಿರುಗಲಿಲ್ಲ ಎಂಬ ನೆಪದಲ್ಲಿ ಹಝ್ರತ್ ಈಸಾ ಅವರನ್ನು ನಂಬಲಿಲ್ಲ. ಅದೇ ರೀತಿ ಈ ಜನರು ಇಸ್ರಾಈಲ್‌ನ ಹಝ್ರತ್ ಈಸಾ ಹಿಂತಿರುಗಲಿಲ್ಲ ಎಂಬ ನೆಪದಿಂದ ಮಾತ್ರ ಸಂಬಲಿಲ್ಲ. ಹೀಗೆ ಇಲ್ಯಾಸ್ ಹಿಂತಿರುಗದ ಕಾರಣ ಹಝ್ರತ್ ಈಸಾ ಅವರನ್ನು ನಂಬದ ಯಹೂದಿಗಳು ಮತ್ತು ಹಝ್ರತ್ ಈಸಾ ಅವರ ಎರಡನೇ ಬರುವಿಕೆಗಾಗಿ ಕಾಯುತ್ತಿರುವ ಈ ಯಹೂದಿಗಳ ನಡುವೆ ಹೋಲಿಕೆಯನ್ನು ಸ್ಥಾಪಿಸಲಾಯಿತು. ಮತ್ತು ದೇವರು ಬಯಸಿದ್ದು ಇದೇ ಆಗಿತ್ತು. ಇಸ್ರಾಈಲ್ ಯಹೂದಿಗಳು ಮತ್ತು ಈ 'ಯಹೂದಿಗಳ' ನಡುವಿನ ಹೋಲಿಕೆಯು ಹೇಗೆ ಸಾಬೀತಾಗಿದೆ, ಹಾಗೆಯೇ ಇಸ್ರಾಈಲ್‌ನ 'ಈಸಾ' ಮತ್ತು ಈ 'ಈಸಾ ಅಂದರೆ ನಾನು, ಪರಿಪೂರ್ಣ ಕ್ರಮದ ನಡುವಿನ ಹೋಲಿಕೆಯು ಸಾಬೀತಾಗಿದೆ. ಯಹೂದಿಗಳ ದೃಷ್ಟಿಕೋನದಿಂದ ಈಸಾ ತಿರಸ್ಕರಿಸಲ್ಪಟ್ಟನು ಏಕೆಂದರೆ ಒಬ್ಬ ಪ್ರವಾದಿ ಜಗತ್ತಿಗೆ ಹಿಂತಿರುಗಲಿಲ್ಲ ಮತ್ತು ಅದೇ ರೀತಿ ಈ 'ಈಸಾ–ಅಂದರೆ ನಾನು, ಈ 'ಯಹೂದಿಗಳ' ದೃಷ್ಟಿಕೋನದಿಂದ ತಿರಸ್ಕರಿಸಲ್ಪಟ್ಟನು. ಏಕೆಂದರೆ ಒಬ್ಬ ಪ್ರವಾದಿ ಜಗತ್ತಿಗೆ ಹಿಂತಿರುಗಲಿಲ್ಲ ಎಂದು. ಮತ್ತು ಪ್ರವಾದಿಯವರ ಹದೀಸ್‌ಗಳು ಈ ಉಮ್ಮತ್ತಿನ ಯಹೂದಿಗಳೆಂದು ಪರಿಗಣಿಸುವ ಜನರು, **ಗೈರಿಲ್ ಮಗ್‌ಝೂಬಿ ಅಲೈಹಿಮ್** ಎಂಬ ಅಯತ್ ಸಹ ಸೂಚಿಸುವ ಜನರು ನಿಜವಾದ ಯಹೂದಿಗಳಲ್ಲ, ಆದರೆ ಅವರು ಯಹೂದಿಗಳೆಂದು ಹೆಸರಿಸಲ್ಪಟ್ಟ ಅದೇ ಉಮ್ಮತ್ತಿನ ಜನರಾಗಿದ್ದಾರೆ. ಅದೇ ರೀತಿಯಲ್ಲಿ, ಆ ಈಸಾ ಇಸ್ರಾಈಲರಲ್ಲಿ ಪ್ರವಾದಿಯಾಗಿದ್ದ ನಿಜವಾದ ಈಸಾವಲ್ಲ, ಅವನು ಈ ಉಮ್ಮತ್ತಿನೊಳಗಿಂದ ಬಂದವನು. ಮತ್ತು ಇದು ಸರ್ವಶಕ್ತ ದೇವರ ಕರುಣೆ ಮತ್ತು ಕೃಪೆಯಿಂದ ದೂರವಿದೆ ... ಅವನು ಈ ಉಮ್ಮತ್ತಿಗೆ ಯಹೂದಿ ಎಂಬ ಬಿರುದನ್ನು ನೀಡುತ್ತಾನೆ ... ಆದರೆ ಈ ಉಮ್ಮತ್ತಿನ ಯಾವುದೇ ಸದಸ್ಯನಿಗೆ ಯೇಸುವಿನ ಬಿರುದನ್ನು ನೀಡುವುದಿಲ್ಲ. ಅದು ತುಂಬಾ ಅಸಹನೀಯ ಮತ್ತು ದುರದೃಷ್ಟಕರ ಅವನ ದೃಷ್ಟಿಯಲ್ಲಿ ದುಷ್ಟ ಮತ್ತು ಅವಿಧೇಯ ಯಹೂದಿಗಳ ಬಿರುದನ್ನು ನೀಡಬಹುದು, ಆದರೆ ಈ ಉಮ್ಮತ್ತಿನಲ್ಲಿ ಒಬ್ಬ ವ್ಯಕ್ತಿಗೆ ಯೇಸುವಿನ ಬಿರುದನ್ನು ನೀಡಲಾಗುವುದಿಲ್ಲ. ಒಂದು ಕಡೆ ಸರ್ವಶಕ್ತನಾದ ದೇವರು ಈ ಉಮ್ಮಾತ್ತಿನ ಕೆಲವು ಸದಸ್ಯರನ್ನು ಯಹೂದಿಗಳು ಎಂದು ಹೆಸರಿಸಿದನು ಮತ್ತು ಮತ್ತೊಂದೆಡೆ ಅವನು ಒಬ್ಬ ವ್ಯಕ್ತಿಯನ್ನು ಯೇಸು ಎಂದು ಹೆಸರಿಸಿದನು.
(ಬರಾಹೀನೆ ಅಹ್ಮದಿಯಾ, ಭಾಗ–5, ರೂಹಾನಿ ಖಝಾಈನ್, ಸಂಪುಟ–21, ಪುಟ–406)

ಈ ವಿವರವಾದ ವಿವರಣೆಯ ನಂತರ, ಮುನ್ಸಿಫ್ ಪತ್ರಿಕೆಯ ಸಂಪಾದಕರು "ಈಸಾ ಮಸೀಹ್‌ನೊಂದಿಗೆ ಹೋಲಿಕೆ" (ಮಸ್ಲೀಯತೆ ಮಸೀಹ್)ನ ಅವರ ಆಕ್ಷೇಪವನ್ನು ಅರ್ಥಮಾಡಿಕೊಳ್ಳುತ್ತಾರೆ ಎಂದು ಭಾವಿಸಲಾಗಿದೆ. ಮುಂದಿನ ಸಂಚಿಕೆಯಲ್ಲಿ ನಾವು ಆಕ್ಷೇಪಣೆಯ ಮುಂದಿನ ಭಾಗಕ್ಕೆ ಉತ್ತರಿಸುತ್ತೇವೆ. **ವಬಿಲ್ಲಾಹಿ ತೌಫೀಖ್**.

...*...*...*...

**"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"**
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"**
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 12 October 2023, Issue No. 41

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-40ರ ಉಳಿದ ಭಾಗ ಮುಂದುವರಿಸಲಾಗಿದೆ)*

**2 ಅಕ್ಟೋಬರ್ 2022 (ರವಿವಾರ)**

ಹುಝೂರ್ ಅನ್ವರ್(ಅತಬಿಅ) ಮುಂಜಾನೆ 5.50 ಗಂಟೆಗೆ ಫತಹ ಅಝೀಮ್ ಮಸೀದಿಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಿಸಿದ ನಂತರ ಹುಝೂರ್ ಅನ್ವರ್(ಅತಬಿಅ) ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಅನ್ವರ್(ಅತಬಿಅ) ಕಚೇರಿಯ ಅಂಚೆಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು. ಇಂದು ಕಾರ್ಯಕ್ರಮದನ್ವಯ Zion ನಿಂದ Dalas ಹೋಗಬೇಕಾಗಿತ್ತು. ಮುಂಜಾನೆಯಿಂದಲೇ ಝಾಯಿನ್ ಮತ್ತು ಇತರ ವಿವಿಧ ಜಮಾಅತುಗಳಿಂದ ಬಂದ ಜಮಾಅತ್ ಬಾಂಧವರು, ಪುರುಷರು ಮಹಿಳೆಯರು ಒಂದು ದೊಡ್ಡ ಸಂಖ್ಯೆಯಲ್ಲಿ ಪ್ರೀತಿಯ ಇಮಾಮರನ್ನು ಬೀಳ್ಕೊಡಲು ಒಟ್ಟಾಗಿದ್ದರು.

10.55 ಗಂಟೆಗೆ ಹುಝೂರ್ ಅನ್ವರ್(ಅತಬಿಅ) ತಮ್ಮ ವಸತಿ ನಿಲಯದಿಂದ ಹೊರಗೆ ಆಗಮಿಸಿದರು. ಕಾರ್ಯಕ್ರಮದನ್ವಯ ಸ್ಥಳೀಯ ಮಜ್ಲಿಸ್ ಆಮಿಲ ಝಾಯಿನ್ ಹುಝೂರ್ ಅನ್ವರ್(ಅತಬಿಅ) ಅವರ ಜೊತೆ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. Tansportation team ಮತ್ತು ಝಿಯಾಫತ್ Team ಸಹ ಸಾಮೂಹಿಕವಾಗಿ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಮಹಿಳೆಯರು ಪ್ರತ್ಯೇಕ ವಿಭಾಗದಲ್ಲಿ ನಿಂತಿದ್ದರು. ಹುಝೂರ್ ಅನ್ವರ್(ಅತಬಿಅ) ಪ್ರೀತಿಪೂರ್ವಕವಗಿ ಅತ್ತ ಆಗಮಿಸಿದರು. **ಅಸ್ಸಲಮು ಅಲೈಕುಂ** ಹುಝೂರ್ ಎಂಬ ಧ್ವನಿ ಎಲ್ಲಾ ಕಡೆಯಿಂದ ಧ್ವನಿಸುತ್ತಿತ್ತು. ತುಂಬ ಆತ್ಮೀಯ ದೃಶ್ಯಗಳನ್ನು ಹುಝೂರ್ ಅನ್ವರ್(ಅತಬಿಅ) ತಮ್ಮ ಕೈಯನ್ನು ಎತ್ತಿ ಅವರ ಸಲಾಮ್‌ಗೆ ಉತ್ತರ ನೀಡುತ್ತಿದ್ದರು. ಎಲ್ಲೆಡೆಯಿಂದ ಉತ್ಸಹಪೂರ್ಣ ಘೋಷಣೆಗಳು ಕೇಳಿ ಬರುತ್ತಿದದವು. ಮುಂದೆ ಸ್ವಲ್ಪ ದೂರದಲ್ಲಿ ಬಾಲಕಿಯರು ವಿದಯ ಕೋರುವ ಪ್ರಾರ್ಥನೆಯತ್ತ ಕವಿತೆಗಳನ್ನು ಹಾಡುತ್ತಿದ್ದರು. ಅನಂತರ ಹುಝೂರ್ ಅನ್ವರ್(ಅತಬಿಅ) ಬಾಲಕೀಯರ ಬಳಿಗೆ ಬಂದರು. ಮತ್ತೆ ಇಲ್ಲಿಂದ ಪುರುಷಗಿರುವ ಸ್ಥಳಕ್ಕೆ ಬಂದರು. ಅಲ್ಲಿ ಪುರುಷರು ನಿಂತುಕೊಂಡಿದ್ದರು ಮತ್ತು ತುಂಬಾ ಉತ್ಸಾಹಿತರಾಗಿ ಘೋಷಣೆಗಳನ್ನು ಕೂಗುತ್ತಿದ್ದರು. ಹುಝೂರ್ ಅನ್ವರ್(ಅತಬಿಅ) ಕೈಯನ್ನು ಬೀಸುತ್ತಾ ತಮ್ಮ ಪ್ರಿಯರನ್ನು ಆತ್ಮೀಯರಾಗಿ ಘೋಷಣೆಗಳ ಮತ್ತು ಸಲಾಂಗಳಿಗೆ ಉತ್ತರ ನೀಡುತ್ತಿದ್ದರು. ಆಫ್ರಿಕನ್ ಮಿತ್ರರೊಬ್ಬರು ಅಸಾಮಾನ್ಯ ಉತ್ಸಾಹದೊಂದಿಗೆ ಮತ್ತು ಗೌರವಯುತ ಧ್ವನಿಯಲ್ಲಿ ಘೋಷಣೆ ಹಾಕುತ್ತಿದ್ದರು. ಹುಝೂರ್ ಅನ್ವರ್(ಅತಬಿಅ) ಆ ಮಿತ್ರರ ಬಳಿಯಿಂದ ಹೋಗುವಾಗ ಸ್ವಲ್ಪ ಸಮಯ ನಿಂತರು, ಘಾನಿಯನ್ ಅವರೆ ಎಂದು ಕೇಳಿದರು. ಅದಕ್ಕೆ ಹೌದೆಂದು ತಲೆ ಅಲ್ಲಾಡಿಸಿದರು. ನಾನು ಘಾನಿಯನ್ ಹೌದು ಎಂದು.

ಸಂಘಟನಾ ಮುರಬ್ಬಿ ಅಮೇರಿಕಾ ಮುಸವ್ವಿರ್ ಅಹ್ಮದ್ ಸಾಹಿಬ್ ತನ್ನ ನವಜನಿತ ಮಗುವನ್ನು ಎತ್ತಿ ಹಿಡಿದು ನಿಂತುಕೊಂಡಿದ್ದರು.

ಹುಝೂರ್ ಅನ್ವರ್(ಅತಬಿಅ) ಮಗುವನ್ನು ಮುತ್ತು ಕೊಟ್ಟರು ಮತ್ತು ನಂತರ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ದಯಪಾಲಿಸಿದರು. ಹುಝೂರ್ ಅನ್ವರ್(ಅತಬಿಅ) ಸುಮಾರು 10 ನಿಮಿಷ ತಮ್ಮ ಅಭಿಮಾನಿಗಳ ಮಧ್ಯ ಉಪಸ್ಥಿತರಿದ್ದರು.

ಈ ನಡುವೆ ಹುಝೂರ್ ಅನ್ವರ್(ಅತಬಿಅ) ಪ್ರೀತಿಪೂರ್ವಕವಾಗಿ ಡಾ॥ ತನ್ವೀರ್ ಸಾಹಿಬ್‌ರವರಿಂದ ಕೆಲ ವಿಷಯ ಕುರಿತು ಮಾತನಾಡಿದರು. ಡಾ॥ ತನ್ವೀರ್ ಅಹ್ಮದ್ ಡಾಕ್ಟರುಗಳ ತಂಡದವರೊಂದಿಗೆ Duty ಮೇಲಿದ್ದರು.

**ಡಲ್ಲಾಸ್ ಪ್ರವಾಸ**

11 ಗಂಟೆ 10 ನಿಮಿಷಕ್ಕೆ ಹುಝೂರ್ ಅನ್ವರ್(ಅತಬಿಅ) ಪ್ರಾರ್ಥನೆ ಮಾಡಿಸಿದರು ಮತ್ತು ಎಲ್ಲರಿಗೂ ಅಸ್ಸಲಾಮು ಅಲೈಕುಂ ಎಂದು ಹೇಳಿದರು. ತಂಡವು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಶಿಕಾಗೋ ತೆರಳಿತು. 12 ಗಂಟೆ 5 ನಿಮಿಷಕ್ಕೆ ಹುಝೂರ್ ಅನ್ವರ್(ಅತಬಿಅ) ಶಿಕಾಗೋ ವಿಮಾನ ನಿಲ್ದಾಣ ತಲುಪಿದರು. ಹುಝೂರ್ ಅನ್ವರ್(ಅತಬಿಅ) ಒಂದು ಖಾಸಗಿ ಲಾಂಚಿನಲ್ಲಿ ಆಗಮಿಸಿದರು.

ಅಹ್ಮದಿಯಾ ಜಮಾಅತ್ ಅಮೇರಿಕಾ ಶಿಕಾಗೋದಿಂದ ಡಲ್ಲಾಸ್‌ವರೆಗೆ American Airlines ನ ಒಂದು ಚಾರ್ಟರ್ಡ್ ವಿಮಾನ ERU 175 ರ ವ್ಯವಸ್ಥೆ ಮಾಡಿದ್ದರು. ಈ ವಿಮಾನದಲ್ಲಿ 75 ಸೀಟುಗಳಿದ್ದವು. ಈ ವಿಮಾನವು ಲಾಂಚಿನ ಮುಂದೆ ಕೆಲ ಹೆಜ್ಜೆಗಳಲ್ಲಿ ನಿಲ್ಲಿಸಿದ್ದರು. ಹುಝೂರ್ ಅನ್ವರ್(ಅತಬಿಅ) ಬರುವುದಕ್ಕಿಂತ ಮುಂಚೆಯೇ ಎಲ್ಲ ಪ್ರವಾಸಿ ಬಾಂಧವರ ಸಾಮಾನುಗಳು ವಿಮಾನದಲ್ಲಿ ಲೋಡ್ ಮಾಡಲಾಗಿತ್ತು.

ಈ ವಿಮಾನದಲ್ಲಿ ಪ್ರವಾಸ ಮಾಡುವವರ ಸಂಖ್ಯೆ 69 ಆಗಿತ್ತು. ಹುಝೂರ್ ಅನ್ವರ್(ಅತಬಿಅ) ಹಝರತ್ ಬೇಗಂ ಸಹಿಬ ಮತ್ತು ತಂಡದ ಸದಸ್ಯರುಗಳಲ್ಲದೇ ಈ ವಿಮಾನದಲ್ಲಿ ಪ್ರವಾಸ ಮಾಡುವವರಲ್ಲಿ ಅಮೀರ್ ಜಮಾಅತ್ ಅಹ್ಮದಿಯಾ ಅಮೇರಿಕ, ಸಾಹಿಬಾದ ಮಿರ್ಝಾ ಮಗ್ಫೂರ್ ಅಹ್ಮದ್ ಸಾಹಿಬ್, ಮು. ಅಮ್ತುಲ್ ಮುಸವ್ವಿರ್ ಸಾಹಿಬ, ಅಮೇರಿಕಾ ಅಮೀರ್ ಸಾಹಿಬರ ಪತ್ನಿ, ಮತ್ತು ಮು. ನಖಾಶ ಅಹ್ಮದ್ ಸಾಹಿಬ, ನಾಯಿಬ್ ಅಮೀರ್‌ರಲ್ಲಿ ಡಾ॥ ಹಮೀದುರ್ ರಹ್ಮಾನ್ ಸಾಹಿಬ್, ಡಾ॥ ನಸೀಮ್ ರಹಮುತುಲ್ಲಾಹ್ ಸಾಹಿಬ್, ಫಲಾಹುದ್ದೀನ್ ಶಮ್ಸ್ ಸಾಹಿಬ್, ವಸೀಮ್ ಮಲಿಕ್ ಸಾಹಿಬ್ ಮತ್ತು ಅಝ್‌ಹರ್ ಹನೀಫ್ ಸಾಹಿಬ್ ನಾಯಿಬ್ ಅಮೀರ್ ಮುಬಲ್ಲಿಗ್ ಇನ್‌ಚಾರ್ಜ್ ಪಾಲ್ಗೊಂಡಿದ್ದರು.

ಅದಲ್ಲದೇ ಅದೀಲ್ ಅಬ್ದುಲ್ಲ ಸಾಹಿಬ್ ಸದರ್ ಮಜ್ಲಿಸ್ ಖುದ್ದಮುಲ್ ಅಹ್ಮದಿಯಾ ಅಮೇರಿಕಾ, ನೆಷ್ನಲ್ General secretary ಮುಖ್ತಾರ್ ಮಲ್‌ಹೀ ಸಾಹಿಬ್, ಪೈಝಾನ್ ಅಬ್ದುಲ್ಲಾ ಸಾಹಿಬ್ Chairman medical Association ಅಮೇರಿಕಾ, ಮುನ್‌ಯಿಮ್ ನಯೀಮ್ ಸಾಹಿಬ್ ಚೇರ್‌ಮನ್ Humanity First America, ಶರೀಫ್ ಔದ್ ಸಹಿಬ್ ಅಮಿರ್ ಜಮಾಅತ್ ಕಬಾಬೀರ್ ಮತ್ತು ಡಾ॥ ತನ್ವೀರ್ ಅಹ್ಮದ್ ಸಾಹಿಬ್ ಕರ್ತವ್ಯದ ಮೇಲೆ ಪಾಲ್ಗೊಂಡಿದ್ದರು.

ಅತಿಡಲ್ಲದೇ ವಿವಿಧ ಜಮಾಅತುಗಳ ಅಧ್ಯಕ್ಷರುಗಳು ಮುಬಲ್ಲಿಗರು ನೆಷ್ನನಲ್ ಆಮಿಲದ ವಿಭಿನ್ನ ಕಾರ್ಯದರ್ಶಿಗಳು ಮತ್ತು ಇತರ ಜಮಾಅತಿನ ಹುದ್ದೆದಾರರು ಸಹ ಭಾಗವಹಿಸಿದ್ದರು.

ಅಮೇರಿಕನ್ ಏರ್‌ಲೈನ್‌ನ Emic Adduchio ಕೋಆರ್ಡಿನೇಟರ್ ಆಗಿ ಈ ಪ್ರವಾಸದಲ್ಲಿ ಪಾಲ್ಗೊಂಡಿದ್ದರು.

**ಖಿಲಾಫತ್ ಫ್ಲೈಟ್**

ಒದಗಿಸಲ್ಪಟ್ಟ ಬೋರ್ಡಿಂಗ್ ಮೇಲೆ ಖಿಲಾಫತ್ ಫಿಲ್ಯಾಟ್ 2022 ಎಂದು ಬರೆಯಲಾಗಿತ್ತು. ಫ್ಲೈಟ್ ಸಂಖ್ಯೆ KF-2022 ಎಂದಿತ್ತು. ಬೋರ್ಡಿಂಗ್ ಕಾರ್ಡ್‌ನ ಒಂದು ಕಡೆ ಈ ಪದಗಳು ನಮುದಿತವಾಗಿದ್ದವು.

Ahmadiyya muslim Community
USA (100) 1920-2020
Centennial Khilafat Flight 2022

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.